ನಿಯಮ ೬೯ರ ಮೇರೆಗೆ ಅಲ್ಪಕಾಲಾವಧಿ ಚರ್ಚೆ

ತೆಲುಗುಗಂಗಾ ಯೋಜನೆಗೆ ಕೇಂದ್ರ ಸರ್ಕಾರದ ಅರಣ್ಯ ಹಾಗೂ ಪರಿಸರ ಇಲಾಖೆಗಳು ಅನುಮತಿ ನೀಡಿರುವ ಬಗ್ಗೆ ಹಾಗೂ ಆ ಬಗ್ಗೆ ಚರ್ಚೆಯಲ್ಲಿ ಭಾಗವಹಿಸಲು ಆಂಧ್ರ ಪ್ರದೇಶದ ಮುಖ್ಯಮಂತ್ರಿಯವರು ನಿರಾಕರಿಸಿರುವ ಬಗ್ಗೆ

† ಶ್ರೀ ಎಂ. ವೀರಪ್ಪಮೊಯಿಲಿ (ಕಾರ್ಕಳ).—ಮಾನ್ಯ ಅಧ್ಯಕ್ಷರೇ, ತೆಲುಗುಗಂಗಾ ವಿಷಯದ ಬಗ್ಗೆ ಈ ಸದನ ಹಾಗೂ ಹೊರಗಡೆ ಸಾಕಷ್ಟು ಚರ್ಚೆ ಆಗಿದೆ. ಆದುದರಿಂದ ಇದರ ಸಂಪೂರ್ಣವಾದ ವಿವರಕ್ಕೆ ನಾನು ಕೂಡಾ ಹೋಗುವುದಿಲ್ಲ. ಏಕೆಂದರೆ ಇಂದು ಕೊನೆಯ ದಿವಸ ಆಗಿರುವುದರಿಂದ ಇಷ್ಟೇ ಪ್ರಾಮುಖ್ಯವಾದ ವಿಷಯಗಳು ಬೇರೆಯವು ಕೂಡಾ ಈ ಸದನದಲ್ಲಿ ಚರ್ಚೆಗೆ ಬರಲಿರುವುದರಿಂದ ನಾನು ವಿಸ್ತಾರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಇತ್ತೀಚೆಗೆ ಏನು ಕೆಲವು ವಿದ್ಯಮಾನಗಳು ನಮ್ಮ ರಾಜ್ಯದ ಹಿತಾಸಕ್ತಿಗೆ ಅಥವಾ ಕೃಷ್ಣಾ ಜಲಾನಯನದ ಹಿತಾಸಕ್ತಿಗೆ ವಿರುದ್ಧವಾಗಿ ಹೋಗುತ್ತಿರ ತಕ್ಕ ವಿಚಾರಕ್ಕೆ ನನ್ನ ಈ ವಿಚಾರದ ಮಂಡನೆಯನ್ನು ಮಾಡುವುದಕ್ಕೆ ಸೀಮಿತಗೊಳಿಸುತ್ತೇನೆ. ಅಧ್ಯಕ್ಷರೇ, ಈಗ ಸಾಕಷ್ಟು ರಾಜಕೀಯ ಇದರಲ್ಲಿ ನಡೆದಿದೆ. ಈಗ ಆಂಧ್ರಪ್ರದೇಶದಲ್ಲಿ ರಾಯಲಸೀಮಾ ದವರಿಗೆ ನೀರು ಬೇಕು. ರಾಯಲಸೀಮಾದವರಿಗೆ ನೀರು ಕೊಡುವುದು ಆ ರಾಜ್ಯಕ್ಕೆ ಸೇರಿದ ಜವಾಬ್ದಾರಿ ಆಗಿದ್ದು ಅದಕ್ಕೆ ಸಾಕಷ್ಟು ಅನುಕೂಲತೆಗಳು ಇವೆ. ಅದಕ್ಕೆ ಈಗ ಆ ಸರ್ಕಾರ ನಡೆಸ ಬೇಕಾದ ಏನು ಕರ್ತವ್ಯ ಇದೆ ಅದನ್ನು ಡೈವರ್ಟ್ ಮಾಡುವುದಕ್ಕೆ ಇವತ್ತು ನಮ್ಮ ಪಾಲಿನ ನೀರಿಗೆ ಹೊಂಚುಹಾಕುತ್ತಿದ್ದಾರೆ ಅಲ್ಲಿ ನಮ್ಮ ಪಕ್ಷದ ಕಾಂಗ್ರೆಸ್ ಶಾಸಕರು ಹೈದರಾಬಾದಿನಲ್ಲಿ ಒಂದು ಸತ್ಯಾಗ್ರಹ ಮಾಡಿ ರಾಯಲಸೀಮಾಕ್ಕೆ ನೀರು ಬೇಕು ಎಂದು ಹೇಳಿದಮೇಲೆ ಅದಕ್ಕೆ ಒಂದು ಕೌಂಟರ್ ಹೋಗಬೇಕೆಂದು ಆಂಧ್ರಪ್ರದೇಶದ ಮುಖ್ಯಮಂತ್ರಿಯವರು ಡೆಲ್ಲಿಗೆ ಡೆಲಿಗೇಷನ್ ತೆಗೆದುಕೊಂಡು ಹೋಗಿದ್ದಾರೆ. ಅಲ್ಲಿ ನಡೆದ ವಿದ್ಯಮಾನಗಳೆಲ್ಲಾ ನಿಮಗೆ ಗೊತ್ತಿದೆ.

(ಶ್ರೀ ಬ್ಲೇಸಸ್ ಎಂ. ಡಿಸೌಜ ಅವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಆದರೆ ಅಲ್ಲಿ ಒಂದು ಆಶ್ಚರ್ಯದ ವಿಚಾರ ಏನೆಂದರೆ, ನಮ್ಮ ಕರ್ನಾಟಕಕ್ಕೆ ಸೇರಿದ ಅದರಲ್ಲೂ ಕೂಡಾ ಈಗ ಇಲ್ಲಿ ಯಾವ ಸರ್ಕಾರ ಅಧಿಕಾರ ನಡೆಸುತ್ತಿದೆ ಆ ಸರ್ಕಾರಕ್ಕೆ ಸೇರಿದ ಸದಸ್ಯರೇ ತಮ್ಮ ಪಕ್ಷದವರೇ ಈಗ ಆಂಧ್ರ ಸರ್ಕಾರದವರು ನಮ್ಮ ಹಕ್ಕನ್ನು ಅಪಹರಿಸಬೇಕೆಂದು ಏನು ಪ್ರತಿಭಟನೆ ಮಾಡುವುದಕ್ಕೆ ಹೋಗಿದ್ದರೋ ಅದರಲ್ಲಿ ಸೇರಿದ್ದು ಅತ್ಯಂತ ಆಶ್ಚರ್ಯದ ವಿಚಾರ. ಬೇಲಿಯೇ ಎದ್ದು ಹೊಲ ಮೇಯ್ದರೆ ಏನಾಗುತ್ತದೆ? ಆಂಧ್ರಪ್ರದೇಶದವರ ಉದ್ದೇಶ ಏನೆಂದರೆ, ತೆಲುಗುಗಂಗಾ ಕ್ಲಿಯರೆನ್ಸ್‌ಗೆ ಒತ್ತಾಯ ಮಾಡಬೇಕೆಂದು ಇತ್ತು.

ಬಹುಶಃ ನಾವು ಸ್ವಲ್ಪ ಜನ ಸಂಸತ್ ಸದಸ್ಯರು ಮತ್ತು ನಮ್ಮ ಅನೇಕ ಜನ ಸದಸ್ಯರು ಮಾನ್ಯ ದೇವೇಗೌಡರು ಮಾಡಿದಂತಹ ಕೆಲಸವನ್ನು ಒಪ್ಪಿಕೊಳ್ಳುತ್ತೇವೆ. ಆ ಸಂದರ್ಭದಲ್ಲಿ ಮಾರ್ಚಿ ೧೯೮೮ ರಲ್ಲಿ ತೆಲುಗು ಗಂಗಾ ಯೋಜನೆಯ ಬಗ್ಗೆ ಮಾರ್ಚಿ ೨೫ನೇ ತಾರೀಖು ಕೇಂದ್ರ ಕ್ಲಿಯರೆನ್ಸ್ ಕೊಡತಕ್ಕ ಸಂಶಯವಿತ್ತು. ಏಕೆಂದರೆ ಸೆಂಟ್ರಲ್ ವಾಟರ್ ಕಮಿಷನ್‌ನ ಅಧ್ಯಕ್ಷರು ಒಂದು ಅಭಿಪ್ರಾಯಕ್ಕೆ ಬಂದು ಬಹುಶಃ ಅಧಿಕಾರಿಗಳಿಗೆ ಹೇಳಿಬಿಟ್ಟಿದ್ದರು. ತಮ್ಮ ಅಭಿಪ್ರಾಯವನ್ನು ಕೊಡುವಂತಹ ಒಂದು ದಾಟಿಯಲ್ಲಿ ಅದು ಹೋಗುತ್ತಿತ್ತು. ಆದರೆ ತಕ್ಷಣ ಪ್ರತಿಭಟನೆ ಬಂತು. ಕೇಂದ್ರ ಸರ್ಕಾರ, ಮತ್ತೊಂದು ರಾಜ್ಯದ ಪಾಲನ್ನು ಪಡೆದುಕೊಳ್ಳುವಾಗ ಅದನ್ನು ನ್ಯಾಯವಾಗಿ ನೋಡಬೇಕು, ತಾಂತ್ರಿಕವಾಗಿ ಅದನ್ನು ನೋಡಬೇಕೆಂದು ತನ್ನ ನಿರ್ಣಯವನ್ನು ಯಾವಾಗ ಮಾಡಿತೋ, ಆ ಒಂದು ವಿಚಾರದಲ್ಲಿ ಮಾನ್ಯ ಪ್ರಧಾನ ಮಂತ್ರಿಗಳು ಪ್ರತಿಯೊಂದು ಸಭೆಯಲ್ಲೂ ಹೇಳುತ್ತಾ ಬಂದಿದ್ದಾರೆ. ಕರ್ನಾಟಕ ರಾಜ್ಯದ ಹಕ್ಕನ್ನು ಕಸಿದುಕೊಳ್ಳಲಿಕ್ಕೆ ಬಿಡುವುದಿಲ್ಲ, ಒಂದು ರಾಜ್ಯದ ಹಕ್ಕನ್ನು ಮತ್ತೊಂದು ರಾಜ್ಯ ಕಸಿದುಕೊಳ್ಳುವುದಕ್ಕೆ ಬಿಡುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಅದರ ಬಗ್ಗೆ ಸಂಬಂಧ ಪಟ್ಟ ಮಂತ್ರಿಗಳು ಸಹ ಹೇಳಿದ್ದಾರೆ. ಅದರ ಬಗ್ಗೆ ಪಾರ್ಲಿಮೆಂಟ್‌ನಲ್ಲಿ ಪ್ರತಿಭಟನೆ ನಡೆಯಿತು. ಈ ಇಲಾಖೆಗೆ ಸಂಬಂಧಪಟ್ಟಂತಹ ಸಚಿವರು ತಮ್ಮ ಕರ್ನಾಟಕ ರಾಜ್ಯದವರೇ ಆದ ಮಾನ್ಯ ಬಿ. ಶಂಕರಾನಂದ ಅವರನ್ನು ಒಂದು ರೀತಿಯಲ್ಲಿ ಇಕ್ಕಟ್ಟಿಗೆ ಸಿಕ್ಕಿಸಿಕೊಳ್ಳುವಂತಹ ಅವರ ಮೇಲೆ

ಒತ್ತಾಯ ತರುವಂತಹ ಕೆಲಸ ಲೋಕಸಭೆಯಲ್ಲಿ ಏನು ಆಡಳಿತ ನಡೆಯಿತು ಎನ್ನುವುದು ತಮಗೆಲ್ಲಾ ಗೊತ್ತಿದೆ. ಹೀಗೆ ಒಂದು ರೀತಿಯಲ್ಲಿ ದಬ್ಬಾಳಿಕೆಯನ್ನು ಬಲವಾದ ಒತ್ತಡವನ್ನು ಮಾಡಿದಾಗ, ನಮ್ಮ ಹಕ್ಕನ್ನು ಕಸಿದುಕೊಳ್ಳತಕ್ಕ ಪ್ರಯತ್ನ ಮಾಡುವುದಾದರೆ ಅದಕ್ಕೆ ನಾವು ಪ್ರತಿಭಟನೆ ಮಾಡಬೇಕಾಗುತ್ತದೆ. ಏಕಕಂಠದಿಂದ ರಾಜ್ಯದ ಜನತೆ ಇದನ್ನು ಪ್ರತಿಭಟಿಸಬೇಕಾಗುತ್ತದೆ. ಇದರ ವಿಚಾರವನ್ನು ಕೇಂದ್ರಸರ್ಕಾರಕ್ಕೆ ಹೇಳಬೇಕಾಗುತ್ತದೆ. ನಮಗೆ ಏನು ತೊಂದರೆ ಬಂದಿದೆ ಎಂದರೆ ಇದರ ಬಗ್ಗೆ ಹಿಂದಿನ ಮುಖ್ಯಮಂತ್ರಿಗಳು ಈ ಬಗ್ಗೆ ಸಾಕಷ್ಟು ಪುಸ್ತಕಗಳನ್ನು ಪ್ರಕಟಣೆ ಮಾಡುತ್ತಾ ಇದ್ದರು. ತೆಲುಗು ಗಂಗಾ ಯೋಜನೆಯ ಬಗ್ಗೆ ಈ ದೇಶದ ಜನಕ್ಕೆ ಹೇಳಿ, ಕರ್ನಾಟಕ ರಾಜ್ಯಕ್ಕೆ ನ್ಯಾಯವಾಗಿ ಬರಬೇಕಾದ ಹಕ್ಕನ್ನು ಅವರು ಅಂದರೆ ಆಂಧ್ರಪ್ರದೇಶದವರು ಕಸಿದುಕೊಳ್ಳುವ ಕೆಲಸ ಮಾಡುತ್ತಿದ್ದಾರೆಂದು ಎಲ್ಲರಿಗೂ ತಿಳಿಸಬೇಕಾಗಿತ್ತು. ಅದನ್ನು ಸರಿಯಾಗಿ ತಿಳಿಸಿದ್ದರೆ ಅದರ ಬಗ್ಗೆ ಸರಿಯಾದ ಮಾಹಿತಿಯನ್ನು ಸಂಸತ್‌ಸದಸ್ಯರುಗಳಿಗೆ, ವಿರೋಧಪಕ್ಷಗಳ ನಾಯಕರುಗಳಿಗೆ, ವಿರೋಧಪಕ್ಷದ ಸ್ನೇಹಿತರುಗಳಿಗೆ ತಿಳಿಸಿದ್ದರೆ ಒಂದು ಲೋಪ ಏನಿದೆ ಅದರ ಕಾರಣದಿಂದ ನಮ್ಮ ಲಾಬಿ ದುರ್ಬಲವಾಗಿದೆ. The consensus as far as the national opposition is concerned, is in fovour of the clearance of the Telugu-Gauga project in spite of the fact that Karnataka is ruled by one of the main opposition parties. ತಾವು ವಿರೋಧಪಕ್ಷದಲ್ಲಿದ್ದು ನಿಮ್ಮ ನಾಯಕರಲ್ಲಿ ಸರಿಯಾದಂತಹ ವಿಚಾರವನ್ನು ಒಡಮೂಡಿಸುವಲ್ಲಿ ತಮಗೆ ಶಕ್ತಿಯಿಲ್ಲದಿದ್ದರೆ ನಿಮ್ಮನ್ನು ಯಾವ ರೀತಿಯಲ್ಲಿ ಕರ್ನಾಟಕ ರಾಜ್ಯದ ಜನ ನಂಬಲಿಕ್ಕೆ ಸಾಧ್ಯವೆಂಬುದನ್ನು ತಾವೇ ಆಲೋಚನೆ ಮಾಡಬೇಕಾಗುತ್ತದೆ. ದೇಶದ ಎಲ್ಲಾ ವಿರೋಧಪಕ್ಷದ ನಾಯಕರು ಸಭೆಗೆ ಬಂದಿದ್ದಾರೆ, ಡೆಪ್ಯೂಟೇಷನ್‌ಗೆ ಬಂದಿದ್ದರು, ಅದರ ಜೊತೆಗೆ ತಮ್ಮ ಪಕ್ಷದ ಸಂಸತ್ ಸದಸ್ಯರು ಪ್ರತಿಭಟನೆಯಲ್ಲಿ ಸೇರಿದ್ದರು ಈ ವಿಚಾರದಲ್ಲಿ ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ, ನಾನು ತಿಳಿದುಕೊಂಡಿರುವುದೇನೆಂದರೆ ಮಾನ್ಯ ಹೆಗಡೆಯವರಿಗೆ ರಾಷ್ಟ್ರದ ನಾಯಕತ್ವದಲ್ಲಿ ರಾಷ್ಟ್ರದ ರಾಜಕಾರಣದಲ್ಲಿ ಅವರು ಮಹತ್ವಾಕಾಂಕ್ಷೆಯನ್ನಿಟ್ಟುಕೊಂಡು ಕರ್ನಾಟಕ ರಾಜ್ಯದ ಪ್ರಾದೇಶಿಕತೆಯ ಒಂದು ಹಿತಾಸಕ್ತಿ ಪ್ರಾಮುಖ್ಯವಲ್ಲ ಎನ್ನುವ ಒಂದು ರೀತಿಯ ಮನೋಭಾವ ಅವರಲ್ಲಿತ್ತು. ಆದರಿಂದಾಗಿ ಹೊಸ ಮುಖ್ಯಮಂತ್ರಿಗಳಾಗಿ ಮಾನ್ಯ ಬೊಮ್ಮಾಯಿಯವರು ಬಂದಿದ್ದಾರೆ. ಈ ಬಗ್ಗೆ ಒಂದು ಸರಿಯಾದ ವಿವೇಚನೆಯುತವಾದ ಒಂದು ನೀತಿಯನ್ನು ತೆಗೆದುಕೊಳ್ಳುತ್ತಾರೆಂಬ ಭಾವನೆಯನ್ನು ಇಟ್ಟುಕೊಂಡಿದ್ದೇವೆ.

ಆದರೆ ಕಳೆದ ಸಪ್ಟೆಂಬರ್ ೧೬ನೇ ತಾರೀಕು ಏನು ನಡೆಯಿತು ? ಒಂದು ಸಭೆ ಕರೆಯಬೇಕೆಂದು ಹೇಳಿ ನೀರಾವರಿ ಸಚಿವರಾದಂಥ ಶ್ರೀ ಶಂಕರಾನಂದ ಅವರು ಡೆಲ್ಲಿಯಲ್ಲಿ ಸಭೆ ಕರೆದರು. ಆ ಸಭೆಯನ್ನು ಕರೆದ ಕೂಡಲೇ ಆಂಧ್ರದ ಮುಖ್ಯಮಂತ್ರಿಗಳು ಏನು ಹೇಳಿದರು ಎಂದರೆ, ನಾವು ಆ ಸಭೆಗೆ ಬಹಿಷ್ಕಾರ ಮಾಡುತ್ತೇವೆ, ಸಭೆಗೆ ಬರುವುದಿಲ್ಲ ಎಂದು ಬಹಿಷ್ಕಾರ ಮಾಡಿದರು. ಪ್ರಾಂಪ್ಟಲಿ ನಮ್ಮ ಮುಖ್ಯಮಂತ್ರಿಗಳು ಹೇಳಿದರು, ಬಹಿಷ್ಕಾರ ಅಂತ ಹೇಳಲಿಲ್ಲ. Mr. Bommai, said, Iwill not go ಆಮೇಲೆ ಎರಡನೇ ದಿವಸ ಒಂದು ಹೇಳಿಕೆಯನ್ನು ಕೊಟ್ಟರು. ನನಗೆ ಬೇರೆ ಕೆಲಸ ಇದೆ ಎಂದು. ಬೇರೆ ಕೆಲಸ ಯಾವುದೂ ಇಲ್ಲ. discussion with the Tamil Nadu Governor on Cauvery Water was held on 19th at Bangalore.

ಎಲ್ಲಿ ? ಬೆಂಗಳೂರಿನಲ್ಲಿ ೧೬ನೇ ತಾರೀಕಿಗೆ ಅವರು ಖಂಡಿತವಾಗಿಯೂ ಡೆಲ್ಲಿಗೆ ಹೋಗಬಹುದಿತ್ತು. ಇದಕ್ಕೆ ಸಂಬಂಧಪಟ್ಟ ಎರಡೂ ರಾಜ್ಯಗಳ ಮುಖ್ಯಮಂತ್ರಿಗಳೂ ಕೂಡ ಸಭೆಗೆ ಬರುವುದಿಲ್ಲವೆಂದು ಆಪತ್ತು ಹೇಳಿದರೆ ನಾವು ಯಾವ ರಾಜ್ಯದ ಹಿತ ರಕ್ಷಣೆ ಮಾಡಿದ ಹಾಗೆ ಆಗುತ್ತದೆ ? ಇದನ್ನು ದಯವಿಟ್ಟು ಆಲೋಚನೆ ಮಾಡಬೇಕಾಗುತ್ತದೆ. ಇವತ್ತು ಕೂಡ, ಮಾಜಿ ಮುಖ್ಯ ಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗಡೆಯವರು ಹೇಳಿದ್ದು ಪತ್ರಿಕೆಯಲ್ಲಿ ಬಂದಿದೆ. ಒಂದು ಸೀಕ್ರೇಟ್ ಫಾರ್ಮುಲಾ ಕೊಟ್ಟಿದ್ದಾರೆ. ತುಂಗಭದ್ರಾ ಕ್ಲಿಯರೆನ್ಸ್‌ಗೆ ಅಂತ ಹೇಳಿ it shrouded with mystery We are yet to see that secret formul ಆ ಸೀಕ್ರೇಟ್ ಫಾರ್ಮುಲಾ ಯಾವುದು, ಅದು ಏನು ನಮ್ಮ ರಾಜ್ಯದ ಹಿತಾಸಕ್ತಿಯನ್ನು ಬಲಿಕೊಡುತ್ತದೆ ಎಂದು ನಾವು ನೋಡಬೇಕಾಗುತ್ತದೆ. ಈಗಿನ ಮುಖ್ಯಮಂತ್ರಿಗಳು ಕೂಡ, ಅವರ ಕೆಲವು ಹೇಳಿಕೆಗಳನ್ನು ನೋಡಿದರೆ ಏನು ಅವರು ೧೬ನೇ ತಾರೀಕು ಮೀಟಿಂಗ್‌ಗೆ ಬರುವುದಿಲ್ಲವೆಂದು ಹೇಳಿದ್ದಾರೆ. ಇದಕ್ಕೆ ಕಾರಣ ದೇಶದ ವಿರೋಧಪಕ್ಷಗಳ

ಒಂದು ಏನಂ ಕೇಂದ್ರಸರ್ಕಾರದ ಮೇಲೆ ದಾಳಿ ಇದೆ. ಇದಕ್ಕೆ ರಾಜಕೀಯಂ ಕಾರಣ ಎಂಬುದಕ್ಕೆ ಬೇರೆ ಸಾಕ್ಷಿ ಬೇಕಾಗಿಲ್ಲ. It is only when the Andhra Pradesh has taken instrument of confrontation. Mr. Bommai is also colluded with Mr. Rama Rao . The instrument of confrontation with Telugu-Ganga. ಇದಂ ಬರೇ ನಾವು ಏನು ತಿಳಿದುಕೊಳ್ಳಬೇಕಂ ಎಂದರೆ that is not instrument of confrontation with the Centre. It is a matter of confrontation with the People of Karnataka. It is a confrontation taken up by the Chief Minister against famine Stricken people of Northern Karnataka area. We are taking that challenge. ಏಕೆಂದರೆ ಏನು ತಾವು, ಶ್ರೀ ಬೊಮ್ಮಾಯಿ ಅವರು ಕೆಲವು ಹೇಳಿಕೆಗಳನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಕೊಟ್ಟಿದ್ದೀರಿ. ಅದರಲ್ಲೂ ಕೂಡ ಇಂಡಿಯನ್ ಎಕ್ಸ್‌ಪ್ರೆಸ್ ೨೪.೯.೮೮ರಲ್ಲಿ ಒಂದು ಹೇಳಿಕೆಯನ್ನು ಶ್ರೀ ಬೊಮ್ಮಾಯಿಯವರು ಏನು ಕೊಟ್ಟಿದ್ದರು ಎಂದರೆ Bommai wants Centre to be kept off. This is the statment appeared in the Indian Express. The Karntaka Chief Minister on Friday, said that the con roversy of Telugu-Ganga Project should be sorted out through direct dialogue between Karnataka and Andhra Pradesh instend of depending on Cen ral intervension.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಶ್ರೀ ಮೊಯಿಲಿಯವರೇ, ಮುಖ್ಯಮಂತ್ರಿಯವರು ಹಾಗೆ ಹೇಳಿಲ್ಲವೆಂದು ಹೇಳಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವು ನೋಡಿ ಅದನ್ನು ವೆರಿ ಕನ್ಸಿಸ್ಟೆಂಟ್ ಸ್ಟೇಟ್‌ಮೆಂಟ್‌ನ್ನು ಕೊಟ್ಟಿದ್ದಾರೆ. How consistent he has been in taking up the stand.

SRI H. L. THIMME GOWDA.—The Chief Minister has said I have not said that...

ಶ್ರೀ ಎಂ. ವೀರಪ್ಪ ಮೊಯಿಲಿ.—ಸ್ಪಷ್ಟವಾಗಿ ಹೇಳಿದ್ದಾರೆ ಸ್ವಾಮಿ, ಬೇರೆ ಹೇಳಿಕೆಯನ್ನು ಕೂಡ ಓದುತ್ತೇನೆ, ಇಂಡಿಯನ್ ಎಕ್ಸ್‌ಪ್ರೆಸ್‌ನವರು ಏನು ರಿಪೋರ್ಟ್ ಮಾಡಿದ್ದಾರೆ, ಅದು ತಪ್ಪು ಎಂದು ಹೇಳುತ್ತೀರಾ ತಾವು ? That means the Indian Express has reported wrongly. Is that your contention ? It is not one sentence, following that...

> "Answering a question about Karnataka's objection to the Telugu-Ganga Mr Bommai made it clear he was totally opposed the use of Krishna water for irrigation purpose through the project"

So, he has said in all clear words, that he wanted Centre to be kept off from the scene.

ಎನ್. ಟಿ. ಆರ್. ಜೊತೆ ಡೈಲಾಗ್ ಮಾಡಿದ್ದೀರಾ ? ಅಥವಾ ಈ ತೆಲುಗುಗಂಗಾ ಬಗ್ಗೆ ಇವರಿಗೆ ಏನಾದರೂ ಆತ್ಮವಿಶ್ವಾಸ ಇರಬಹುದು. ಕರ್ನಾಟಕ ರಾಜ್ಯದ ಜನತೆಯ ಹಿತಾಸಕ್ತಿಯನ್ನು ಬಲಿಕೊಟ್ಟು, ದಕ್ಷಿಣ ರಾಜ್ಯದಲ್ಲಿ ರಾಜಕೀಯ ಮಾಡುತ್ತೇವೆಂದು ಹೇಳಿ, ಮಾನ್ಯ ರಾಮಕೃಷ್ಣ ಹೆಗಡೆ ಯವರ ದಾರಿಯನ್ನೇ ಹಿಡಿದಿದ್ದರೆ. ಅದು ಈ ರಾಜ್ಯದ ದುರಂತ. ಇದಕ್ಕಿಂತ ಹೆಚ್ಚಿನ ದುರಂತ ಮತ್ತೊಂದಿಲ್ಲ. ೮-೯-೧೯೮೮ರ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಹೇಳಿದ್ದಾರೆ. ಏನೆಂದರೆ ಒಂದು ಹೇಳಿಕೆ ಆದರೆ ತಪ್ಪಾಗಿದೆ ಎಂದು ಹೇಳಬಹುದು. ಮಾನ್ಯ ಬೊಮ್ಮಾಯಿಯವರು ಅನೇಕ ಹೇಳಿಕೆಗಳನ್ನು ಕೊಡುತ್ತಾ ಬಂದಿದ್ದಾರೆ. 'Bommai bl m s Centre'. After all the Centre has taken a impartial view I think we must congratulate the Central Government for taking impartial view....

ಶ್ರೀ ಹೆಚ್. ಎಲ್. ತಿಮ್ಮೇಗೌಡ.—'Environmental' ಕ್ಲಿಯರೆನ್ಸ್ ಕೊಟ್ಟಿದ್ದಾರಲ್ಲ. ಇದು ಇಂಪಾರ್ಷಿಯಲ್. ಇದು ಪೂರ್ತಿ ಕ್ಲಿಯರೆನ್ಸ್ ಕೊಟ್ಟಹಾಗೆ ಆಗುವುದಿಲ್ಲ ಎಂಬುದು ತಮಗೂ ಗೊತ್ತು.

SRI M. VEERAPPA MOILY.—The Forest Department has given that,

SRI K. H. PATIL.—What is the project from our side ? What have you done ? What our State Government has done ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಅವರು ಪ್ರೊಟೆಸ್ಟ್ ಯಾವ ರೀತಿ ಮಾಡುತ್ತಾರೆ, ಅವರು ೬ ತಿಂಗಳಿಂದ ಹೊರಗೆ ಇದ್ದಾರಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ತೆಲುಗುಗಂಗಾ ಬಗ್ಗೆ ಪ್ರೊಟೆಸ್ಟ್ ಮಾಡಬೇಕೆಂದು ಹೇಳುತ್ತಾರೆ, ಇನ್ನೊಂದು ಕಡೆ ಮಾನ್ಯ ಬೊಮ್ಮಾಯಿಯವರು, he kept the Centre of. If you don't object to the Centre. If you don't apprise the Centre your problem. ಇವತ್ತು ಕರ್ನಾಟಕ ರಾಜ್ಯಕ್ಕೆ ಅನ್ಯಾಯ ಮಾಡಬಾರದು ಎನ್ನುವ ಉದ್ದೇಶದಿಂದ ಕೆಲಸ ಮಾಡಬೇಕಾಗಿದೆ. ಮಾನ್ಯ ರಾಮಕೃಷ್ಣ ಹೆಗಡೆಯವರು ಅಥವಾ ಈಗಿನ ಮುಖ್ಯಮಂತ್ರಿಯವರು ಮಾತನಾಡತಕ್ಕ, ಹೇಳತಕ್ಕ ವಿಚಾರಗಳು ಇವತ್ತಿಗೂ, if you apprised the Centre. they would have cleared the project. Mr Hegde, former Chief Mini ter he knows he was a party to certain agreement at Madras....... ೧೯೮೪ರ ಅಗ್ರಿಮೆಂಟ್ ಪ್ರಕಾರ, ೪ ವರ್ಷಗಳ ಕಾಲ ಮಾಜಿ ಮುಖ್ಯಮಂತ್ರಿ ಡೆಲ್ಲಿಯಲ್ಲಿ ಹೇಳಿದಂತೆ ಇವತ್ತಿಗೂ ಕೂಡ, ಈ ವರ್ಷಗಳಲ್ಲಿ ನನಗೆ ನೆನಪಿರುವಂತೆ ಪ್ರಧಾನಿಯವರ ಹತ್ತಿರ ಅಬ್ಜೆಕ್ಟ್ ಮಾಡಲಿಲ್ಲ. Even at one time had he apprised the Prime Minister to clear the project or apprised about the share of water to the State from Telgu-Ganga project. ಪ್ರತಿಭಟನೆ ಮಾಡುತ್ತಾರೆಂದು ಹೇಗೆ ಹೇಳುತ್ತೀರಿ ? Whereas Mr. Hegde, in the course of four years he had not raised little fingers against clearance of the Telgu-Ganga project, either with the Prime Minister or Central Government,, ಇದು ಮಾಡಲಿಲ್ಲ. ಸನ್ಮಾನ್ಯ ಬೊಮ್ಮಾಯಿಯವರೂ ಕೂಡ ಹೈದ್ರಾಬಾದಿಗೆ ಹೋದಾಗ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ತಮಗೆ ನೆನಪಿರಬಹುದು, ತೆಲುಗುಗಂಗಾ ಬಗ್ಗೆ ಹೈದರಾಬಾದಿಗೆ ಹೋಗಿ ಒಂದು ಹೇಳಿಕೆ ಕೊಟ್ಟಿದ್ದಾರೆ. just before going to the dinner. he has given a statement. I will just come to that. ಹೈದರಾಬಾದ್‌ಗೆ ಹೋದಕೂಡಲೇ ಅವರಿಗೆ ಏತಕ್ಕೋ ತಲೆಗಿರುಗಿದೆ. 'Bommai wants to keep off Centre'... I will just come to that... ಅದರ ಬಗ್ಗೆ ನಾನು ಬರುತ್ತೇನೆ. ಇವತ್ತು ಬೊಮ್ಮಾಯಿಯವರು ಈ ರೀತಿಯಲ್ಲಿ ಹೇಳಿಕೆಯನ್ನು ಕೊಡುವುದರಿಂದ ಗೊಂದಲ ಜಾಸ್ತಿಯಾಗುತ್ತದೆ. ಇದರಿಂದ ಕರ್ನಾಟಕದ ಹಿತಕ್ಕೆ ಅವರು ಅನುಕೂಲ ಮಾಡಿದಂತೆ ಆಗುವುದಿಲ್ಲ. ಈ ವಿಚಾರದಲ್ಲಿ ತೆಲುಗು-ಗಂಗಾ ಮತ್ತು ಕಾವೇರಿ ಬಗ್ಗೆ ಕೇಂದ್ರಕ್ಕೆ ಡೆಲಿಗೇಷನ್ ತೆಗೆದುಕೊಂಡು ಹೋಗುತ್ತೇವೆಂದು ತಾವು ಹೇಳುತ್ತಿದ್ದೀರಿ. ಆಯಿತು ಮಾಡಿರಿ. We are prepared. ಆದರೆ ಇವತ್ತು ಈ ಒಂದು ಹೇಳಿಕೆಯನ್ನು ಕೊಟ್ಟು ಈ ರೀತಿ ಮಾಡುವುದು ಸರಿಯಲ್ಲ. ನಾನು ಮೇಲೆ ಹೇಳಿದ ಹೇಳಿಕೆಯನ್ನು ಹೈದರಾಬಾದ್‌ನಲ್ಲಿ ಕೊಟ್ಟಿರುವುದು. ನಾನು ಮೇಲೆ ತಿಳಿಸಿದ ಹೇಳಿಕೆಯನ್ನು ಸನ್ಮಾನ್ಯ ಬೊಮ್ಮಾಯಿಯವರು ಹೈದರಾಬಾದ್‌ನಲ್ಲಿ ಕೊಟ್ಟರು. ಬಹುಶಃ ನನಗನ್ನಿಸುತ್ತದೆ, ಈ ಹೇಳಿಕೆಯನ್ನು ಕೊಡುವಷ್ಟು ಧೈರ್ಯ ಅವರಿಗೆ ಬರಬೇಕಾದರೆ ಬಹಳ ಗುಟ್ಟಾಗಿ ರಹಸ್ಯವಾದಂಥ ಮಾತುಕತೆಯನ್ನು ಸನ್ಮಾನ್ಯ ಬೊಮ್ಮಾಯಿಯವರು ಎನ್. ಟಿ. ರಾಮರಾವ್ ಅವರ ಜೊತೆಯಲ್ಲಿ ಮಾಡಿರಲೇಬೇಕು. ಇಲ್ಲದಿದ್ದರೆ ಆ ಧೈರ್ಯ ಬರುತ್ತಿರಲಿಲ್ಲ. ಇವತ್ತು ಖಂಡಿತವಾಗಿ ಇದನ್ನೆಲ್ಲಾ ನೋಡಬೇಕಾಗುತ್ತದೆ. ಆಂಧ್ರ ಪ್ರದೇಶ ನೀರಾವರಿ ಸಚಿವರಾದ ಶ್ರೀಮಾನ್ ಕೃಷ್ಣಮೂರ್ತಿಯವರ ಒಂದು ಪತ್ರಿಕಾ ಹೇಳಿಕೆ

ಯನ್ನು ನೋಡಿದರೆ, ಅವರು ಏನು ಹೇಳುತ್ತಾರೆ ಎಂದರೆ, ಅಪ್ಪರ್ ಕೃಷ್ಣಾ ಪ್ರಾಜೆಕ್ಟನ್ನು ಕರ್ನಾಟಕ ದಲ್ಲಿ ಮಾಡುವುದಕ್ಕೆ ಬಿಟ್ಟರೆ, ನಮ್ಮ ನೀರಿಗೆ ಧಕ್ಕೆಯಾಗುತ್ತದೆ ? ತೆಲುಗು-ಗಂಗಾ ಪ್ರಾಜೆಕ್ಟ್ ಮಾಡುವುದಕ್ಕೆ ಆಗುವುದಿಲ್ಲ that means there is conspiracy by Andhra Pradesh to stall Upper Krishna. That is the statement made by the Irrigation Minister from Andhra Pradesh. ಆದುದರಿಂದ ಅಧ್ಯಕ್ಷರೇ. ಈ ಒಂದು ತೆಲುಗು ಗಂಗಾ ವಿಚಾರದಲ್ಲಿ ಸನ್ಮಾನ್ಯ ದೇವೇಗೌಡರು ಸ್ಪಷ್ಟವಾದ ಹೇಳಿಕೆಯನ್ನು ಕೊಡಬೇಕು, ಅದಕ್ಕೆ ಮೊದಲು I think better you take lengthy session with your Chief Minister first clarify the stand. ಇವತ್ತು ದೇಶದ ಆಡಳಿತವನ್ನು ಬಾಚಿ ಕೊಳ್ಳಬೇಕೆಂಬ ದುರಾಸೆಯಿಂದ ಕರ್ನಾಟಕ ರಾಜ್ಯದ ಹಿತಾಸಕ್ತಿಯನ್ನು ಬಲಿಕೊಡತಕ್ಕಂಥ ಒಂದು ಪ್ರಶ್ನೆಗೆ ಮಾತ್ರ ನಾವೆಂದೂ ಇಲ್ಲಿ ಸುಮ್ಮನೆ ಕುಳಿತುಕೊಂಡು ಬಿಡುವುದಿಲ್ಲ. ತಾವು ಇದರ ಬಗ್ಗೆ ಏನಾದರೂ ಒಂದು ಒಪ್ಪಂದಕ್ಕೆ ಮಾನ್ಯ ಮುಖ್ಯಮಂತ್ರಿಯವರ ಜೊತೆಯಲ್ಲಿ ಬಂದರೆ ನಿಮ್ಮನ್ನೂ (ಶ್ರೀ ದೇವೇಗೌಡರನ್ನು) ಬಿಡುವುದಿಲ್ಲ. ಸನ್ಮಾನ್ಯ ದೇವೇಗೌಡರು ಕಾವೇರಿ ಕೃಷ್ಣಾ ನದಿಗಳ ನೀರಿನ ವಿಚಾರ ಬಂದಾಗ ಏನು ಹೇಳುತ್ತಾರೆ, ಅದರ ಬಗ್ಗೆ ಹೋರಾಟ ಮಾಡಲು ನಾನು ಸಿದ್ಧನಿದ್ದೇನೆ, ಇದರ ಬಗ್ಗೆ ಹೋರಾಟ ಮಾಡಲಿಕ್ಕಾಗಿ ಅಧಿಕಾರದಲ್ಲಿ ಒಂದು ನಿಮಿಷವೂ ಇರುವುದಿಲ್ಲ ಎಂದು ಹೇಳುತ್ತಾರೆ. ಆದರೆ ಸರಕಾರದ ನೀತಿ ಮತ್ತು ಧೋರಣೆ ಮಾತ್ರ ಸ್ಪಷ್ಟವಾಗಿಲ್ಲ. ಸನ್ಮಾನ್ಯ ರಾಮಕೃಷ್ಣ ಹೆಗಡೆ ಯವರು ಏನು ತಪ್ಪನ್ನು ಮಾಡುತ್ತಿದ್ದರೋ ಅದೇ ತಪ್ಪನ್ನು ಮಾನ್ಯ ಬೊಮ್ಮಾಯಿಯವರು ಮಾಡುತ್ತಿದ್ದಾರೆ. ತೆಲುಗು-ಗಂಗಾ ವಿಚಾರದಲ್ಲಿ ತಪ್ಪನ್ನು ಮಾಡುತ್ತಿದ್ದಾರೆ ಎಂದು ಸ್ಪಷ್ಟವಾಗಿದೆ. ಆದುದರಿಂದ ಸರಕಾರದ ನೀತಿಯ ಬಗ್ಗೆ ಸ್ಪಷ್ಟವಾದ ಒಂದು ವಿಚಾರವನ್ನು ಹೇಳಬೇಕಾಗಿದೆ ಮತ್ತು ಕೇಂದ್ರಕ್ಕೆ ತಾವು ಏನು ಡೆಲಿಗೇಷನ್ ಕೊಂಡು ಹೋಗುತ್ತಿದ್ದೀರಿ ಅದಕ್ಕೆ ಖಂಡಿತವಾಗಿ ನಮ್ಮ ಬೆಂಬಲ ಇದೆ. ಈ ಒಂದು ಕರ್ನಾಟಕ ರಾಜ್ಯದ ನೀರಿನ ಹಕ್ಕನ್ನು ರಕ್ಷಣೆ ಮಾಡುವುದಕ್ಕೆ ಕೊನೆಯವರೆಗೂ ಕೂಡಾ ನಾವು ಹೋರಾಟ ಮಾಡುವುದಕ್ಕೆ ಸಿದ್ಧರಿದ್ದೇವೆ ಎಂಬ ಮಾತನ್ನು ಪುನರುಚ್ಚರಿಸುತ್ತಾ, ನನಗೆ ಈ ಕೆಲವು ಮಾತುಗಳನ್ನು ಹೇಳುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ನನ್ನ ವಂದನೆಗಳನ್ನು ಸಮರ್ಪಿಸುತ್ತೇನೆ.

† ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ (ಗುರುಮಿಟಕಲ್),— ಮಾನ್ಯ ಅಧ್ಯಕ್ಷರೇ, ನಿಜವಾಗಿ ನೋಡಿದರೆ ಈ ತೆಲುಗು ಗಂಗಾ ಪ್ರಾಜೆಕ್ಟ್ ಬಗ್ಗೆ ನಾವು ಒಂದು ೪-೫ ದಿವಸವೇ ಚರ್ಚೆ ಮಾಡುವುದು ಅವಶ್ಯಕ ಇದೆ. ಈ ಒಂದು ಸಂದರ್ಭದಲ್ಲಿ ಡೆಲ್ಲಿಗೆ ಡೆಲಿಗೇಶನ್ ತೆಗೆದುಕೊಂಡು ಹೋಗುವುದಾಗಿ ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಆದ್ದರಿಂದ ನಾವು ಈ ವಿಷಯದ ಬಗ್ಗೆ ಇವತ್ತೇ ಮಾತನಾಡ ಬೇಕಾಗಿದೆ, ಈ ಅಧಿವೇಶನ ಇವತ್ತೇ ಕೊನೆಯ ದಿವಸ. ಈ ದಿವಸ ಅನೇಕ ಜನ ಮಾನ್ಯ ಸದಸ್ಯರು ಕೂಡ ಇಲ್ಲ, ಅದರಲ್ಲೂ ಈ ವಿಷಯವನ್ನು ಲಾಸ್ಟ್ ಪ್ರೈಯಾರಿಟಿಯಾಗಿ ತೆಗೆದುಕೊಂಡಿದ್ದು ಕಾರಣ ವಿರಬಹುದು. ಅನೇಕ ವಿಷಯಗಳು ಮೊಟಕುಗೊಳ್ಳುತ್ತವೆ. ಮುಖ್ಯವಾಗಿ ಈಗ ಇರತಕ್ಕಂಥ ವಿಷಯ ವೇನೆಂದರೆ ತೆಲಗು ಗಂಗಾ. ಈ ಒಂದು ಪ್ರಾಜೆಕ್ಟನ್ನು ಅದರಲ್ಲೂ ವಿಶೇಷವಾಗಿ ಕೃಷ್ಣಾ ಬೇಸಿನ್‌ನಲ್ಲಿ ಬರತಕ್ಕಂಥಾದ್ದು ಇರುವುದರಿಂದ ಮತ್ತು ನಮ್ಮ ಉತ್ತರ ಕರ್ನಾಟಕ ಒಂದು ಭಾಗಕ್ಕೆ ಇದು ಬಹಳ ಗಹನವಾದ ಮತ್ತು ಅಲ್ಲಿನ ಜನರಿಗೆ ಅನ್ಯಾಯವಾಗುವಂತಹ ಯೋಜನೆ ಕೂಡ ಇದಾಗಿದೆ. ತೆಲುಗು ಗಂಗಾ ಪ್ರಾಜೆಕ್ಟನ್ನು ಇವತ್ತಿನ ದಿವಸ ಆಂಧ್ರ ಪ್ರದೇಶದವರು ತುರಾತುರಿಯಾಗಿ ಮುಗಿಸಲು ಹೊರಟಿದ್ದಾರೆ. ನಮ್ಮ ಕೃಷ್ಣಾ ಬೇಸಿನ್‌ನಲ್ಲಿ ಬರತಕ್ಕಂಥ ಅನೇಕ ಪ್ರಾಜೆಕ್ಟ್‌ಗಳು ಏನಿವೆ, ಅವುಗಳಿಗೆ ಹಣದ ಕೊರತೆಯಿಂದ ಸರಿಯಾದ ರಿಸೋರ್ಸ್ ಇಲ್ಲದೆ ಇರುವ ಕಾರಣ ನಾವು ನಮ್ಮ ಟಾರ್ಗೆಟ್ ಏನಿತ್ತು ಅದನ್ನು ಆಚೀವ್ ಮಾಡದೆ ಇವತ್ತಿನ ದಿವಸ ನಾವು ಸುಮ್ಮನೆ ಕುಳಿತುಕೊಂಡಿದ್ದೇವೆ. ಇದಕ್ಕೆ ಎಲ್ಲರಿಗೂ ಕಳಕಳಿ ಇರಬೇಕು. ನಾವು ಯಾವುದೇ ಒಂದು ಸಮಸ್ಯೆ ಬಗೆಹರಿಸಬೇಕು ಎನ್ನತಕ್ಕಂಥ ದೃಢ ನಿರ್ಧಾರವನ್ನು ನೀವು ಕೈಗೊಂಡರೆ ಬಹುಶಃ ನನಗನ್ನಿಸುತ್ತದೆ, ಅದನ್ನು ಮಾಡಲೇ ಬೇಕು ಎನ್ನುವ ತೀರ್ಮಾನ ತೆಗೆದುಕೊಂಡರೆ ಮನುಷ್ಯ ಮನಸ್ಸು ಮಾಡಿದರೆ ಖಂಡಿತವಾಗಿ ಆಚೀವ್ ಮಾಡ ಬಹುದೆನ್ನುವುದು ನನ್ನ ಭಾವನೆ. ಬೆಳಿಗ್ಗೆ ಮಾನ್ಯ ದೇವೇಗೌಡರು ಒಂದು ಮಾತು ಹೇಳಿದರು. ಅದೇನೆಂದರೆ ಮಾನ್ಯ ಸದಸ್ಯರಾದ ಬಂಗಾರಪ್ಪನವರ ಕ್ಷೇತ್ರದಲ್ಲಿ ಯಾವುದೋ ಒಂದು ವಿಷಯ ಬಂದಾಗ ಅದನ್ನು ತಕ್ಷಣ ಮಾಡಿ ಕೊಡುತ್ತೇನೆ ನೀವೇ ಹೋಗಿ ಅದನ್ನು ಇನಾಗ್ರೇಟ್ ಮಾಡಿ ಎಂದು ಹೇಳಿದೆ

ಆಗ ಅಧಿಕಾರಿಗಳು ಹೇಳಿದರು ನೀವು ಇಷ್ಟು ಬೇಗ ಮಾಡಿಕೊಡುತ್ತೇನೆ ಎಂದು ಹೇಳಿದ್ದೀರಿ ಆದರೆ ಅದು ಅಷ್ಟು ಬೇಗ ಸಾಧ್ಯವಾಗುವುದಿಲ್ಲ ಎಂದು ಹೇಳಿದ್ದಕ್ಕೆ ನೀವು ಅಧಿಕಾರಿಗಳಿಗೆ ಆ ಕೆಲಸವನ್ನು ಬೇಗ ಮಾಡಿ ಕೊಡಿ ಎಂದು ಹೇಳಿದಿರಿ ಅದು ಯೋಜನೆಯಲ್ಲಿ ಸೇರದಿದ್ದರೂ ಸಹ ತಾವು ಹೇಳಿದ ಸಮಯಕ್ಕೆ ಸರಿಯಾಗಿ ಕೆಲಸ ಮಾಡಿಕೊಟ್ಟು ಮಾನ್ಯ ಬಂಗಾರಪ್ಪನವರು ಅದನ್ನು ಉದ್ಘಾಟನೆ ಮಾಡಿದರು, ಆ ರೀತಿ ಒಂದು ಹಠ ಮಾಡಬೇಕು. ಮಾನ್ಯ ದೇವೇಗೌಡರು ಮನಸ್ಸು ಮಾಡಿದರೆ ಇದನ್ನು ಸಹ ಮಾಡಬಹುದು. ಇದೊಂದು ಉದಾಹರಣೆಯನ್ನು ನೀವೇ ಹೇಳಿದಿರಿ. ಅದಕ್ಕೇ ನಾನು ತಮಗೆ ಹೇಳಿದ್ದು. ಅದೇ ರೀತಿಯಲ್ಲಿ ಕೃಷ್ಣಾ ಬೇಸಿನ್‌ನಲ್ಲಿರತಕ್ಕಂಥ ಪ್ರಾಜೆಕ್ಟ್‌ಗಳನ್ನು ಪೂರ್ಣ ಮಾಡಲಿಕ್ಕೆ ತಾವು ಪಣ ತೊಡಬೇಕು. ತಾವು ಹಟ ಹಿಡಿದಿದ್ದರೆ ಕಳೆದ ೬ ವರ್ಷಗಳಲ್ಲಿ ನೀವು ಕೊಟ್ಟಂತಹ ಅನೇಕ ಆಶ್ವಾಸನೆಗಳು ಈಡೇರುತ್ತಿದ್ದವು. ನಾನು ಆ ಬಗ್ಗೆ ಅಂಕಿ ಅಂಶಗಳನ್ನು ಕೊಡುವುದಕ್ಕೆ ಹೋಗುವುದಿಲ್ಲ. ಅನೇಕ ಸಮಸ್ಯೆಗಳು ನಮ್ಮ ಮುಂದೆ ಇವೆ. ಯಾವುದೇ ಒಂದು ಪ್ರಾಜೆಕ್ಟ್‌ಗೆ ಹಣ ಒದಗಿಸಿದ್ದರಲ್ಲಿ ಎಷ್ಟರ ಮಟ್ಟಿಗೆ ಖರ್ಚು ಮಾಡಿದ್ದೀರಿ ಎನ್ನುವುದನ್ನು ಬೇಕಾದರೆ ಹೇಳಬಹುದು. ಆದರೆ ನಮ್ಮ ಹಿಂದಿನ ಮುಖ್ಯ ಮಂತ್ರಿಗಳು ಆದ್ಯತೆ ಮೇರೆಗೆ ಹಣವನ್ನು ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ಗೆ ಅಂದರೆ ಘಟಪ್ರಭಾ ಮಲಪ್ರಭಾ ಬೆಣ್ಣೆ ತೊರೆ ಈ ಎಲ್ಲಾ ಪ್ರಾಜೆಕ್ಟ್‌ಗಳಿಗೆ ವಿಶೇಷ ಗಮನ ಕೊಡಲಿಲ್ಲ, ಇವು ಗುಲ್ಬರ್ಗದಲ್ಲಿ ಬರಬಹುದು, ಬೀದರ್‌ನಲ್ಲಿ ಬರಬಹುದು ಅಥವಾ ರಾಯಚೂರ್‌ನಲ್ಲಿ ಬರಬಹುದು, ದಾರವಾಡದಲ್ಲಿ ಬರಬಹುದು ಆ ಭಾಗದ ರೈತರಿಗೆ ಅನುಕೂಲವಾಗತಕ್ಕಂಥ ರೀತಿಯಲ್ಲಿ ಆ ಭಾಗದ ಜನರಿಗೆ ಸಹಾಯ ಮಾಡತಕ್ಕಂಥ ರೀತಿಯಲ್ಲಿ ತಾವು ಮಾತುಗಳನ್ನು ಹೇಳಿದಿರಿ, ಆದರೆ ಏನೂ ಆಗಲಿಲ್ಲ. ಅದೇ ರೀತಿಯಲ್ಲಿ ನಮ್ಮ ಈಗಿನ ಮುಖ್ಯಮಂತ್ರಿಗಳು ಮತ್ತು ತಾವು ಪದೇ ಪದೇ ಈ ಸದನದಲ್ಲಿ ಹೇಳುತ್ತಿದ್ದೀರಿ, ಆದರೆ ಯಾವುದೇ ಒಂದು ರೀತಿಯಲ್ಲೂ ಈ ಪ್ರಾಜೆಕ್ಟ್‌ಗಳಲ್ಲಿ ಬರುವ ರೈತರಿಗೆ ಅನುಕೂಲ ಮಾಡಿ ಕೊಟ್ಟಿಲ್ಲ. ರೈತರ ಜೀವಾಳವಾಗಿರುವ ಅವರಿಗೆ ಅನುಕೂಲವಾಗತಕ್ಕಂಥ ಕಾರ್ಯಕ್ರಮವನ್ನು ಹಾಕಿ ಕೊಟ್ಟಿಲ್ಲ. ಆದರೆ ನಾನು ತಮ್ಮ ಗಮನಕ್ಕೆ ಒಂದು ಅಂಶವನ್ನು ತರಬಯಸುತ್ತೇನೆ, ಅದೇನೆಂದರೆ ಅವರಿಗೂ ಗೊತ್ತಿದೆ. ನಾನು ಎಲ್ಲಾ ಹೇಳಬೇಕಾಗಿಲ್ಲ. ಯು.ಕೆ.ಪಿ.ಗೆ ೧೯೮೭–೮೮ರಲ್ಲಿ ಬಡ್ಜೆಟ್ ಪ್ರಾವಿಜನ್ ಮಾಡಿದ್ದು ೮೫ ಕೋಟಿ ರೂಪಾಯಿಗಳು, ಆದರೆ ತಾವು ಖರ್ಚು ಮಾಡಿದ್ದು ೪೩

೨.೩೦ ಪಿ. ಎಂ.

ಕೋಟಿ ರೂಪಾಯಿಗಳನ್ನು ಮಾತ್ರ. ಇಲ್ಲಿಯವರೆಗೆ ಖರ್ಚಾಗಿರುವುದು ೪೬೦ ಕೋಟಿ ರೂಪಾಯಿಗಳು. ಇದು ಕ್ಯುಮುಲಿಟಿವ್ ಎಕ್ಸ್‌ಪೆಂಡೀಚರ್. ಈ ಪ್ರಾಜೆಕ್ಟನ್ನು ಕಂಪ್ಲೀಟ್ ಮಾಡಬೇಕಾದರೆ ಇನ್ನೂ ೬೧೦ ಕೋಟಿ ರೂಪಾಯಿಗಳು ಬೇಕು. ಒಂದು ಕಡೆ ನಮಗೆ ಬಚಾವತ್ ಅವಾರ್ಡ್ ಕೆಳಗೆ ೭೦೦ ಟಿ.ಎಂ.ಸಿ.ಎಫ್.ಟಿ.ಯಷ್ಟು ವಾಟರ್‌ನ್ನು ಯುಟಿಲೈಸ್ ಮಾಡುವುದು ಇದೆ. ಆ ಒಂದು ದೃಷ್ಟಿ ಇಟ್ಟುಕೊಂಡು ನಮ್ಮ ಯೋಜನೆಗಳನ್ನು, ನಮ್ಮ ಪ್ಲಾನ್‌ಗಳನ್ನು ನಾವು ತಯಾರು ಮಾಡಬೇಕಾಗುತ್ತವೆ. ನಾವು ಅದನ್ನು ಯೋಚನೆ ಮಾಡದೆ ಪ್ರಾಜೆಕ್ಟ್‌ಗೆ ಹಣ ಕೊಡದೇ ಇದ್ದರೆ ನಮಗೆ ಬರಬೇಕಾದ ನೀರನ್ನು ಉಪಯೋಗ ಮಾಡುವುದಕ್ಕಾಗುವುದಿಲ್ಲ. ಮಹಾರಾಷ್ಟ್ರದವರಿಗೆ ಅಲಾಟ್ ಆಗಿರುವ ೫೬೦ ಟಿ.ಎಂ.ಸಿ.ಎಫ್.ಟಿ ಯಷ್ಟು ನೀರನ್ನು ಅವರು ಯುಟಿಲೈಸ್ ಮಾಡಿಕೊಂಡಿದ್ದಾರೆ. ಆಂಧ್ರ ಪ್ರದೇಶದವರು ಅವರಿಗೆ ಬರಬೇಕಾದ ೮೦೦ ಟಿ.ಎಂ.ಸಿ.ಎಫ್.ಟಿ.ಯಷ್ಟು ನೀರನ್ನು ಯುಟಿಲೈಸ್ ಮಾಡಿಕೊಂಡಿದ್ದಾರೆ. ನಾವು ಮಾತ್ರ ನಮ್ಮ ಕರ್ನಾಟಕ ರಾಜ್ಯಕ್ಕೆ ಕೊಟ್ಟಿರುವ ನೀರಿನ ಪ್ರಮಾಣವನ್ನು ಉಪಯೋಗ ಮಾಡಿಕೊಳ್ಳುವುದರಲ್ಲಿ ವಿಫಲರಾಗಿದ್ದೇವೆ. ನಾನು ಹೇಳುತ್ತೇನೆ, ಯಾವುದೇ ಸರ್ಕಾರ ಇರಬಹುದು ಸರ್ಕಾರ ನಡೆಸುವ ಜನರು ತಮಗೆ ಬೇಕಾದ ಪ್ರಾಜೆಕ್ಟ್‌ಗಳಿಗೆ ಹಣವನ್ನು ಖರ್ಚು ಮಾಡುತ್ತಾರೆ. ಉದಾಹರಣೆಗೆ ವಿಧಾನ ಸೌಧವನ್ನು ಕಟ್ಟಿಸಬೇಕೆಂದು ಕೆಂಗಲ್ ಹನುಮಂತಯ್ಯನವರಿಗೆ ಆಸೆ ಇತ್ತು, ಅದು ಅವರ ಛಲ. ಅವರು ವಿಧಾನಸೌಧವನ್ನು ಕಟ್ಟಿಸಿದರು. ಇನ್ನೊಬ್ಬರಿಗೆ ಇನ್ನೊಂದು ಪ್ರಾಜೆಕ್ಟ್ ಮೇಲೆ ಆಸೆ ಇರುತ್ತದೆ, ಮತ್ತೊಬ್ಬರಿಗೆ ಸೋಶಿಯಲ್ ವೆಲ್‌ಫೇರ್ ಮೆಷರ್ ಮೇಲೆ ಅಭಿಮಾನ ಇರುತ್ತದೆ. ಇನ್ನು ಕೆಲವರಿಗೆ ಲ್ಯಾಂಡ್ ರಿಫಾರ್ಮ್ಸ್ ಆ್ಯಕ್ಟ್ ಮೇಲೆ ಇರುತ್ತದೆ ಆದರೆ ನಿಮಗೆ ಒಂದು ಸ್ಪಷ್ಟವಾದ ಕಮಿಟ್‌ಮೆಂಟ್ ಇದೆ. ನಾವು ಅದನ್ನು ಮಾಡೇತೀರುತ್ತೇನೆಂದು ತಾವು ಹಠ ಮಾಡಬೇಕು. ಅದರ ಪ್ರಕಾರ ನಿಮ್ಮ ಎಕ್ಸ್‌ಪೆಂಡೀಚರ್ ಆಗಬೇಕು, ಇವತ್ತು ಆಂಧ್ರ ಪ್ರದೇಶದವರು ತಮ್ಮ ಪಾಲಿನ ೮೦೦ ಟಿ.ಎಂ.ಸಿ.ಎಫ್.ಟಿ. ಯಷ್ಟು ನೀರನ್ನು ಉಪಯೋಗ ಮಾಡಿಕೊಂಡು ಪುನಃ ಹೆಚ್ಚು ನೀರನ್ನು

ಉಪಯೋಗ ಮಾಡಿಕೊಳ್ಳುವುದಕ್ಕೆ ಹೊರಟಿದ್ದಾರೆ. ಬಚಾವತ್ ಅವಾರ್ಡ್ ಪ್ರಕಾರ ನಾವು ನೀರನ್ನು ಉಪಯೋಗ ಮಾಡಿಕೊಳ್ಳಲೇಬೇಕು. ಕೃಷ್ಣಾ ನದಿಯಲ್ಲಿ ಇರುವ ಎಕ್ಸೆಸ್ ವಾಟರ್‌ನ್ನು ಪುನಃ ಹಂಚಿಕೆ ಮಾಡಿದರೆ ಮಹಾರಾಷ್ಟ್ರಕ್ಕೆ ೩೫ ಪರ್ಸೆಂಟ್, ಕರ್ನಾಟಕಕ್ಕೆ ೫೦ ಪರ್ಸೆಂಟ್ ಮತ್ತು ಆಂಧ್ರ ಪ್ರದೇಶಕ್ಕೆ ೧೫ ಪರ್ಸೆಂಟ್ ನೀರನ್ನು ಕೊಡಬೇಕೆಂದು ತೀರ್ಮಾನ ಆಗಿದೆ. ''ಬಿ'' ಸ್ಕೀಂನಲ್ಲಿ ಆಂಧ್ರ ಪ್ರದೇಶದವರಿಗೆ ಸಿಕ್ಕುವ ನೀರು ಕೇವಲ ೧೫ ಪರ್ಸೆಂಟ್ ಮಾತ್ರ. ಕೃಷ್ಣಾ ರಿವರ್‌ನಲ್ಲಿ ಒಟ್ಟು ೨,೩೯೩ ಟಿ.ಎಂ.ಸಿ.ಎಫ್.ಟಿ.ಯಷ್ಟು ನೀರು ಸಿಗಬಹುದೆಂದು ಅಂದಾಜು ಮಾಡಲಾಗಿತ್ತು ಈ ಅಂದಾಜಿನ ಪ್ರಕಾರ ೨,೧೩೦ ಟಿ.ಎಂ.ಸಿ.ಎಫ್.ಟಿ.ಯಷ್ಟು ನೀರನ್ನು ಈಗಾಗಲೇ ಹಂಚಿಕೆ ಮಾಡಲಾಗಿದೆ. ಹಂಚಿಕೆ ಮಾಡಿರುವಷ್ಟು ನೀರನ್ನು ಉಪಯೋಗ ಮಾಡಿದ ಮೇಲೆ ಉಳಿದಿರುವ ನೀರನ್ನು ''ಬಿ'' ಸ್ಕೀಮ್‌ನಲ್ಲಿ ಮೇಲೆ ತಿಳಿಸಿರುವಂತೆ ಕರ್ನಾಟಕಕ್ಕೆ ೫೦ ಪರ್ಸೆಂಟ್ ಮತ್ತು ಮಹಾರಾಷ್ಟ್ರಕ್ಕೆ ೩೫ ಪರ್ಸೆಂಟ್ ಮತ್ತು ಆಂಧ್ರ ಪ್ರದೇಶಕ್ಕೆ ೧೫ ಪರ್ಸೆಂಟ್ ಹಂಚಿಕೆ ಮಾಡಬೇಕೆಂದು ಇದೆ. ಈಗಾಗಲೇ ಆಂಧ್ರ ಪ್ರದೇಶದವರು ತಮ್ಮ ಪಾಲಿನ ೮೦೦ ಟಿ.ಎಂ.ಸಿ ಎಫ್.ಟಿ.ಯಷ್ಟು ನೀರನ್ನು ಉಪಯೋಗ ಮಾಡಿಕೊಂಡು ಮತ್ತೆ ನೀರನ್ನು ಕೇಳುತ್ತಿದ್ದಾರೆ. ತಮಿಳುನಾಡಿಗೆ ಕುಡಿಯುವ ನೀರಿಗಾಗಿ ಒಂದು ಪ್ರಾಜೆಕ್ಟನ್ನು ಮಾಡಿ ೧೫ ಟಿ.ಎಂ.ಸಿ.ಎಫ್.ಟಿ.ಯಷ್ಟು ನೀರನ್ನು ಕೊಡಬೇಕೆಂದು ಕರ್ನಾಟಕ, ಆಂಧ್ರ ಪ್ರದೇಶ ಮಹಾರಾಷ್ಟ್ರಗಳು ಒಪ್ಪಿಕೊಂಡಿದ್ದವು. ಈ ಯೋಜನೆಗೆ ತಮಿಳುನಾಡು ಸರ್ಕಾರ ೧೮೦ ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿತ್ತು. ಆ ಪ್ರಕಾರ ೧೫ ಟಿ.ಎಂ.ಸಿ.ಎಫ್.ಟಿ.ಯಷ್ಟು ನೀರನ್ನು ಡ್ರಿಂಕಿಂಗ್ ವಾಟರ್ ಪರ್ಪಸ್‌ಗೆ ಮಾತ್ರ ಉಪಯೋಗ ಮಾಡಬೇಕೆಂದು ತೀರ್ಮಾನ ಆಗಿತ್ತು. ಆದರೆ ಡ್ರಿಂಕಿಂಗ್ ವಾಟರ್ ಪ್ರಾಜೆಕ್ಟ್ ಹೋಗಿ ಇವತ್ತು ಇರಿಗೇಷನ್ ಪ್ರಾಜೆಕ್ಟ್ ಮಾಡಬೇಕೆಂದು ಹಠ ಹಿಡಿದು ನಾವು ಮಾಡಿಕೊಂಡಿರುವ ಅಗ್ರಿಮೆಂಟ್‌ನ್ನು ವಯಲೇಟ್ ಮಾಡಿ ಮುಂದೆ ಹೋಗುತ್ತಿದ್ದಾರೆ.

ಆಂಧ್ರಪ್ರದೇಶದವರು, ತಮಿಳುನಾಡಿನವರು ಸುಮಾರು ೧೮೦ ಕೋಟಿ ರೂಪಾಯಿಗಳನ್ನು ಕೊಡಿ ಎನ್ನತಕ್ಕಂಥಾದ್ದನ್ನು ಕೂಡ ಅವರು ಇವರಿಗೆ ಹೇಳಿದ್ದರೂ, ಆ ಪ್ರಕಾರ ಒಂದು ಒಪ್ಪಂದವಾಗಿ ಕುಡಿಯುವ ನೀರಿಗಾಗಿ ಮಾತ್ರ ಈ ಒಂದು ಯೋಜನೆಯು ನೀರನ್ನು ಉಪಯೋಗ ಮಾಡಬೇಕಾಗಿತ್ತು. ಆದರೆ ಆ ಕುಡಿಯುವ ನೀರಿನ ಪ್ರಾಜೆಕ್ಟ್ ಹೋಗಿ ಇವೊತ್ತು ಇರಿಗೇಷನ್‌ಗೆ ನೀರು ಉಪಯೋಗ ಮಾಡಬೇಕೆಂದು ಹಠ ಹಿಡಿದು, ಇಂತಹತಕ್ಕಂಥ ಅಗ್ರಿಮೆಂಟನ್ನು ವ್ಯಾಲೇಟ್ ಮಾಡಿ ಅವರು ಮುಂದೆ ಹೋಗುತ್ತಾ ಇದ್ದಾರೆ, ಅವರು ಹಾಗೆ ಮುಂದೆ ಹೋಗಿ ಸುಮಾರು ೩ ಲಕ್ಷ ಎಕರೆಗಳಿಗೆ ನೀರುಕೊಡಲು ನೀರಾವರಿ ಕಾಲುವೆಗಳನ್ನು ತೋಡಿಸಲು ಅವರು ಕ್ರಮ ಕೈಕೊಂಡಿದ್ದಾರೆ, ಆದರೆ ನಾವು ಮಾತ್ರ ಇನ್ನೂ ಮಲಗಿದ್ದೇವೆ. ನಮ್ಮಲ್ಲಿ ಈ ಬಗ್ಗೆ ಏನೂ ಯೋಜನೆಗಳು ಇಲ್ಲ ಅನೇಕ ಕಡೆಗಳಲ್ಲಿ ಹೋದಾಗ ರಾಜಕೀಯ ಭಾಷಣ ಮಾಡುವುದಕ್ಕೆ ಮಾತ್ರ ನಮಗೆ ಬರುತ್ತದೆ. ಎನ್ವಿರೋನಮೆಂಟಲ್ ಕ್ಲಿಯರನ್ಸನ್ನು ಕೇಂದ್ರದವರು ಆಂಧ್ರಪ್ರದೇಶಕ್ಕೆ ಕೊಟ್ಟರು ಈ ಬಗ್ಗೆ ಕೇಂದ್ರ ಕರ್ನಾಟಕಕ್ಕೆ ಮಲತಾಯಿ ಧೋರಣೆಯನ್ನು ತೋರಿಸಿದೆ ಎಂದು ಹೇಳುತ್ತಾ ಇರುತ್ತಾರೆ. ಆದರೆ ನೀರಾವರಿಯ ಬಗ್ಗೆ ನಮ್ಮ ಎಫರ್ಟ್ಸ್ ಏನು ಇದೆ? ಇಂತಹತಕ್ಕಂಥ ನೀರನ್ನು ನಾವು ಎಷ್ಟರ ಮಟ್ಟಿಗೆ ಉಪಯೋಗ ಮಾಡಿಕೊಂಡಿದ್ದೇವೆ ಎಂಬುದನ್ನು ನೋಡಬೇಕು ? ನಮಗೆ ಈ ಕುರಿತು ನ್ಯಾಯ ಸಿಗಬೇಕು ಎನ್ನುವ ಬಗ್ಗೆ ಭಿನ್ನಾಭಿಪ್ರಾಯಗಳು ಇಲ್ಲ. ಅನ್ಯಾಯವಾಗಿದ್ದಲ್ಲಿ ಎಲ್ಲರೂ ಕೂಡಿ ನ್ಯಾಯಕ್ಕಾಗಿ ಹೋರಾಟ ಮಾಡೋಣ. ಇರುವ ನೀರನ್ನು ಉಪಯೋಗಿಸಲು ಯಾವ ಯಾವ ಯೋಜನೆಗಳನ್ನು ಹಾಕಿಕೊಂಡಿದ್ದೀರಿ ? ನಿಮಗೆ ಆ ಬಗ್ಗೆ ಚಿಂತೆ ಇಲ್ಲ. ಆದರೆ ಕೇಂದ್ರ ಸರಕಾರದವರೊಂದಿಗೆ ಅನೇಕ ಸಲ ವಾದ ಮಾಡುತ್ತೀರಿ, ಸ್ಟೇಟ್‌ಮೆಂಟ್ ಕೊಟ್ಟಿದ್ದೀರಿ. ಆದರೆ ಅಷ್ಟಕ್ಕೆ ನಿಮ್ಮ ಕೃತಿಯನ್ನು ನಿಲ್ಲಿಸಬಾರದು, ಅದಕ್ಕೆ ಏನಾದರೂ ಒಂದು ಪರಿಹಾರವನ್ನು ಕಂಡು ಹಿಡಿದು, ರಾಜ್ಯದ ಜನರಿಗೆ ಈ ಕುರಿತು ಮಾಡುವ ಸಹಾಯವನ್ನು ಮಾಡದೇ ಹೋದರೆ, ಖಂಡಿತವಾಗಿ ಆ ಭಾಗದ ಜನತೆಗೆ ಅನ್ಯಾಯ ಮಾಡಿದಹಾಗೆ ಆಗುತ್ತದೆ, ಆ ಜನರ ಶಾಪವೂ ಆಡಳಿತದಲ್ಲಿರತಕ್ಕಂಥ ನಿಮ್ಮ ಮೇಲೆ ತಟ್ಟುತ್ತದೆ.

ಶ್ರೀ ಎಚ್. ಎಲ್. ತಿಮ್ಮೇಗೌಡ — ತಾವುಗಳು ಮಂತ್ರಿಗಳಾಗಿದ್ದಾಗ, ತಮ್ಮ ಸರಕಾರವು ಈ ಬಗ್ಗೆ ಏನೇನು ಮಾಡಿತ್ತು ಮತ್ತು ಈ ಸರಕಾರ ಬಂದ ಮೇಲೆ ಏನು ಮಾಡಿಲ್ಲ ಎಂದು ಹೇಳಿದರೆ ಅದಕ್ಕೆ ನಾವು ಎಷ್ಟರಮಟ್ಟಿಗೆ ಜವಾಬ್ದಾರರು ಎಂದು ಗೊತ್ತಾಗುತ್ತದೆ. ಮತ್ತು ನೀವುಗಳು ಕೂಡ

ಎಷ್ಟರಮಟ್ಟಿಗೆ ಇದಕ್ಕೆ ಜವಾಬ್ದಾರರು ಎಂದು ಕೂಡ ಗೊತ್ತಾಗುತ್ತದೆ. ನಮ್ಮ ಪಾಲಿನ ನೀರನ್ನು ಉಪಯೋಗ ಮಾಡಿಕೊಳ್ಳದಿದ್ದರೆ ಕರ್ನಾಟಕದವರಿಗೆ ಮೋಸ ಮಾಡಿದ ಹಾಗೆ ಆಗುತ್ತದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಇದರಲ್ಲಿ ಯಾರೂ ಸಹ ಒಬ್ಬರನ್ನೊಬ್ಬರು ಟೀಕೆ ಮಾಡತಕ್ಕಂಥ ಅವಶ್ಯಕತೆ ಇಲ್ಲ. ಈ ಸರಕಾರ ಬಂದ ಮೇಲೆ ಏನು ಮಾಡಿದೆ ಏನು ಮಾಡಿಲ್ಲ ಎಂಬುದು ಹಿಂದಿನ ಸರಕಾರಗಳ ಸಾಧನೆಯೊಂದಿಗೆ ಹೋಲಿಸಿ ನೋಡಿದಾಗ ಗೊತ್ತಾಗುತ್ತದೆ. ಅದನ್ನು ಜನರು ನಿರ್ಧರಿಸುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಇದನ್ನೆಲ್ಲಾ ನೋಡಿಯೇ ನನಗೆ ೩-೪ ಸಲ ಜನರು ಇಲ್ಲಿಗೆ ಆರಿಸಿ ಕಳುಹಿಸಿದ್ದು.

ಶ್ರೀ ಎಚ್. ಎಲ್. ತಿಮ್ಮೇಗೌಡ.— ತಾವುಗಳು ರಾಜಕೀಯ ಭಾಷಣ ಮಾಡುತ್ತೀರಿ ಎಂದು ಹೇಳಿದ್ದಕ್ಕೆ ನಾನು ಹೇಳಿದ್ದು. ೧೫ ಟಿ. ಎಂ. ಸಿ. ಎಫ್. ಟಿ. ನೀರಿನ ಯೋಜನೆಗಾಗಿ ಶ್ರೀಮತಿ ಇಂದಿರಾ ಗಾಂಧಿಯವರು ಫೌಂಡೇಷನ್ ಸ್ಟೋನ್ ಹಾಕಿದರು. ಈಗ ಬಚಾವತ್ ಆಯೋಗದ ತೀರ್ಮಾನಕ್ಕೆ ವಿರೋಧವಾಗಿ ಅವರು ಯೋಜನೆಗಳನ್ನು ಮಾಡುತ್ತಾ ಇದ್ದಾರೆ, ಇದನ್ನು ಕರ್ನಾಟಕದವರು ಕೇಳಲಿ, ಕೇಳದಿರಲಿ, ಅದನ್ನು ಸ್ಟೇ ಮಾಡತಕ್ಕಂಥ ಜವಾಬ್ದಾರಿಯು ಕೇಂದ್ರ ಸರ್ಕಾರದವರದ್ದು ಅಲ್ಲವೇ ? ಒಂದು ವೇಳೆ ನಾವು ಕೇಳದಿದ್ದರೂ ಅದನ್ನು ಸ್ಟೇ ಮಾಡಿ ಎಂದು ತಾವು ಹೇಳಬಹುದಿತ್ತು. ಈಗ ೧೫ ಟಿ. ಎಂ. ಎಫ್. ಟಿಗೆ ಬದಲಾಗಿ ೩೦೦ ಟಿ.ಎಂ.ಸಿ.ಎಫ್.ಟಿ. ನೀರಿಗೆ ಕಾಲುವೆ ಹಾಕುತ್ತಾ ಇದ್ದಾರೆ. ಇದು ಕೇಂದ್ರ ಸರಕಾರದವರಿಗೆ ಗೊತ್ತಾಗಿರುವುದರಿಂದ ಅದನ್ನು ಮಾಡಬಾರದು ಎಂದು ಅವರಿಗೆ ಹೇಳಬಹುದಾಗಿತ್ತು. ಈ ಬಗ್ಗೆ ತಾವು ಏನು ಉತ್ತರ ಹೇಳುತ್ತೀರಿ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನಾನು ಅದಕ್ಕೆ ಉತ್ತರ ಕೊಡಬೇಕಾಗಿಲ್ಲ. ನಿನ್ನೆ ಮಾನ್ಯ ಬೊಮ್ಮಾಯಿಯವರು ಮತ್ತು ನೀರಾವರಿ ಮಂತ್ರಿಗಳು ಕೂಡ ಮಾತನಾಡುವಾಗ ಇಲ್ಲಿ ಹೇಳಿದ್ದಾರೆ ಎಷ್ಟರಮಟ್ಟಿಗೆ ಕೇಂದ್ರದಲ್ಲಿರತಕ್ಕಂಥ ಮಂತ್ರಿಗಳು ಈ ಯೋಜನೆಗೆ ಸಹಾಯ ಮಾಡಿದ್ದಾರೆ ಮತ್ತು ನಮ್ಮ ರಾಜ್ಯದ ಹಿತವನ್ನು ಕಾಪಾಡಿದ್ದಾರೆ ಎಂದು ಹೇಳಿದ್ದಾರೆ. ಆದರೆ ಒಂದು ಮಾತು ಹೇಳುತ್ತೇನೆ, ಏನೆಂದರೆ, ಯಾವುದೇ ಯೋಜನೆಯಾಗಲಿ, ಅಭಿವೃದ್ಧಿ ಕಾರ್ಯಗಳಾಗಿರಲಿ, ಎಲ್ಲಿ ಒತ್ತಡ ಬರುತ್ತದೋ ಆ ಕಡೆಗೆ ಹೆಚ್ಚಿನ ಗಮನ ಕೊಡುತ್ತಾರೆ. ತಾವುಗಳು ನಿಮ್ಮ ಕ್ಷೇತ್ರದ ಬಗ್ಗೆ ದೇವೇಗೌಡರ ಹತ್ತಿರ ಹೋಗಿ ಯಾವುದೇ ಕೆಲಸವನ್ನು ಮಾಡಿಸಿಕೊಳ್ಳುತ್ತೀರಿ. ಅಷ್ಟು ಕೆಲಸವನ್ನು ನನಗೆ ಮಾಡಿಸಿಕೊಳ್ಳಲಿಕ್ಕೆ ಸಾಧ್ಯವೇ ? ನಾವು ಸುಮ್ಮನೆ ಇದ್ದರೆ ಹೇಗೆ ಸಾಧ್ಯ ? ಮರಾಠಿಯಲ್ಲಿ ಒಂದು ಗಾದೆಯನ್ನು ಸಂತ ತುಕಾರಾಮ್‌ನವರು ಹೇಳಿದ್ದಾರೆ "ನವಸೆ ಪುತ್ರ ಕನ್ಯಾ ಅಸಲೀತರ್ ಪತಿ ಲಗಣಿ ಕಾಯ್ ಕಾರಣ್" ಎಂದು. ಅಂದರೆ ಹರಕೆ ಹೊತ್ತ ಮಾತ್ರಕ್ಕೆ ಮಕ್ಕಳು ಆಗುವುದಿದ್ದರೆ ಮದುವೆ ಸಂಪ್ರದಾಯ ಏಕೆ ಎಂಬ ಅರ್ಥ ಅದರಲ್ಲಿ ಬರುತ್ತದೆ. ಲಗ್ನ ಮಾಡಿಕೊಳ್ಳಬೇಕಾಗುತ್ತದೆ, ಮುಂದೆ ಮಕ್ಕಳು ಮತ್ತು ಮೊಮ್ಮಕ್ಕಳನ್ನು ಕಾಣುತ್ತೇವೆ. ಹಾಗೆ ಪ್ರತಿಯೊಂದಕ್ಕೂ ಎಫರ್ಟ್ಸ್ ಬೇಕು ನಮ್ಮ ಎಫರ್ಟ್ಸ್ ಮುಖ್ಯ. ಬೇರೆಯವರು ಸ್ಟೇ ಕೊಡಬೇಕಾಗಿತ್ತು, ದುಡ್ಡು ಕೊಡಬೇಕಾಗಿತ್ತು, ನಮ್ಮ ಮೇಲೆ ಪ್ರೀತಿ ಇದ್ದಿದ್ದರೆ ಹೆಚ್ಚಿನ ಗ್ರಾಂಟ್ ಕೊಡಬೇಕಾಗಿತ್ತು ಎಂದರೆ ಏನರ್ಥ ? ನೀವು ಎಷ್ಟರಮಟ್ಟಿಗೆ ಎಫರ್ಟ್ಸ್ ಮಾಡಿದಿರಿ ಎಂಬುದು ಮುಖ್ಯ. ಇವತ್ತಿಗೆ ನೀವು 200 ಟಿ. ಎಂ. ಸಿ. ನೀರನ್ನೇ ಉಪಯೋಗ ಮಾಡಿಕೊಳ್ಳಲಿಲ್ಲ ಎಂದರೆ ಅವರು ೮೦೦ ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಂಡು ಅವರಿಗೆ ಇನ್ನೂ ಹೆಚ್ಚಾಗಿ ಪಡೆಯುವ ಆಸೆ ಸಹಜವಾಗಿ ಬರುತ್ತದೆ, ನೋಡಿ ನಾವು ನಮ್ಮ ಪಾಲನ್ನು ಉಪಯೋಗ ಮಾಡಿಕೊಂಡಿದ್ದೇವಾದ್ದರಿಂದ ನಮಗೆ ಹೆಚ್ಚು ನೀರು ಕೊಡಿ, ಅವರಂತೂ ಉಪಯೋಗ ಮಾಡಿಕೊಳ್ಳುವುದಿಲ್ಲ, ನಮಗಾದರೂ ಕೊಡಿ ಎಂದು ಪ್ರೆಶರ್ ಅನ್ನು ಬಿಲ್ಡ್ ಅಪ್ ಮಾಡುತ್ತಾರೆ. ತಮಗೆ ಗೊತ್ತಿದ್ದ ಹಾಗೆ ಹಿಂದೆ ಕೆ. ಎಲ್. ರಾವ್ ಇದ್ದಾಗ ಸಾಕಷ್ಟು ಪ್ರೆಶರ್ ಬಿಲ್ಟ್ ಅಪ್ ಮಾಡಿ ಅವರ ಕೆಲಸ ಮಾಡಿಸಿಕೊಂಡರು. ಅನೇಕ ಸಲ ಯಾರ್ಯಾರು ಅಧಿಕಾರದಲ್ಲಿರುತ್ತಾರೋ ಅವರ ಮೇಲೆ ಪ್ರೆಷರ್ ತಂದು ಇಂತಹ ಯೋಜನೆಗಳನ್ನು ಕ್ಲಿಯರ್ ಮಾಡಿಕೊಳ್ಳುವುದೀಗ ನಡೆಯುತ್ತಿದೆ. ಅಂಥಾ ಟೈಮನಲ್ಲಿ ನಮ್ಮ ಪ್ರಯತ್ನ ಏನು? ಅಷ್ಟೆ ರೆಸಿಸ್ಟ್ ಮಾಡಬೇಕು.

ನಾನು ಒಂದು ಮಾತು ಹೇಳಿದರೆ ನೀವು ಸಿಟ್ಟಿಗೇಳುತ್ತೀರಿ. ನಿಮ್ಮ ಜನತಾ ಪಕ್ಷದ ಕಾರ್ಯಕ್ರಮದ ಬಗ್ಗೆ ಹೆಗಡೆಯವರ ಪರ್ಸನಾಲಿಟಿ ಬಗ್ಗೆ, ಪ್ರೆಸಿನ ಬಗ್ಗೆ ಎಷ್ಟೊಂದು ಲಿಟರೇಚರ್ ಉರ್ದುನಲ್ಲಿ, ಕನ್ನಡದಲ್ಲಿ, ತೆಲುಗಿನಲ್ಲಿ ಹೊರಡಿಸಿದಿರಿ ಕನ್ಯಾಕುಮಾರಿಯಿಂದ ಹಿಡಿದು ಜಮ್ಮು

ಕಾಶ್ಮೀರದವರೆಗೂ ಇದು ಹೋಯಿತು. ಆಗೆಲ್ಲ ಇದರ ಬಗ್ಗೆ ನಿಮಗೆ ಆಸಕ್ತಿ ಇರಲಿಲ್ಲ. ಲಂಡನ್ ಅಮೇರಿಕಾ ಎಲ್ಲ ಕಡೆ ಹೋಯಿತು. ಅವರು ಈ ಕಡೆ ಗಮನ ಕೊಡದೆ ಯೋಜನೆಗಳನ್ನು ಪೂರೈಸಿಕೊಂಡರು. ನೀವು ಹೆಗಡೆಯವರ ಪರ್ಸನಾಲಿಟಿಯನ್ನು ಬೆಳೆಸುವುದಕ್ಕೆ ಪ್ರಯತ್ನಿಸಿದಿರಿ. ಇಂದಿರಾಗಾಂಧಿ ಅವರು ತಮ್ಮ ಪರ್ಸನಾಲಿಟಿ ಬೆಳೆಸಿಕೊಂಡರು, ರಾಜೀವಗಾಂಧಿ ಬೆಳೆಸಿಕೊಳ್ಳುತ್ತಿದಾರೆ ಎಂದೂ ಹೇಳಿದಿರಿ. ಅದೇ ಲಿಟರೇಚರನ್ನು ಪಬ್ಲಿಷ್ ಮಾಡಿ ಕಾವೇರಿ ಬಗ್ಗೆ, ತೆಲುಗು ಗಂಗಾ ಬಗ್ಗೆ ಎಂಪಿಗಳಿಗೆ, ಮಂತ್ರಿಗಳಿಗೆ ಭೇಟಿ ಮಾಡಿ ನಿಮ್ಮ ಸ್ಟಾಂಡನ್ನು ಎಕ್ಸ್‌ಪ್ಲೇನ್ ಮಾಡಿ ಕಾನ್‌ಸ್ಟೆಂಟಾಗಿ ಮಾನಿಟರಿಂಗ್ ಫೋರ್ಸನ್ನು ಇಟ್ಟು ಆಂಧ್ರದವರು ಏನು ಮಾಡಿದ್ದಾರೆ ಅದಕ್ಕೆ ಕೌಂಟರಾಗಿ ಏನು ಮಾಡಬಹುದೆಂದು ನೀವು ಮಾಡಲಿಲ್ಲ ಏಕೆ ? ನಿಮಗೆ ಅದರ ಬಗ್ಗೆಯೆಲ್ಲಾ ಆಸಕ್ತಿ ಇಲ್ಲ. ಎಲ್ಲೇ ಹೋದರೂ ಆ ಎನ್. ಟಿ. ಆರ್ ಅವರನ್ನು ನಮ್ಮ ಅಪೋಜಿಷನ್ ಫೋರ್ಸ್‌ನಲ್ಲಿ ಇಟ್ಟುಕೊಳ್ಳುವುದಕ್ಕಾಗಿ ಏನೂ ಮಾತನಾಡುವುದಿಲ್ಲ. ಇವತ್ತು ಇದನ್ನು ಉಪಯೋಗಿಸಿಕೊಂಡು ಎನ್ ಟಿ. ಆರ್ ಒಂದು ಕಡೆ ಹೇಳಿದರು : ಬೊಮ್ಮಾಯಿಯವರಿಗೆ ತೆಲಗು ಗಂಗಾ ಬಗ್ಗೆ ಮಾತನಾಡಲು ಏನ ಅಧಿಕಾರ ಇದೆ ಎಂದು ಕೇಳಿದರು ? ಹೀಗೆ ಅವರು ಸವಾರಿ ಮಾಡಿದ್ದು ಇದೆ ಇದರ ಬಗ್ಗೆ ಸಮಗ್ರವಾಗಿ ಆಲೋಚನೆ ಮಾಡಿ ಇದರಲ್ಲಿ ಪಕ್ಷಭೇದ ಇಲ್ಲ. ಅಪ್ಪರ್ ಕೃಷ್ಣಾ ಆಗಲಿ, ಬೆಣ್ಣೆತೊರಾ ಆಗಲಿ ನೀರು ಬಂದರೆ ನಮ್ಮ ಪಕ್ಷದವರು ನಿಮ್ಮ ಪಕ್ಷದವರೂ ತೆಗೆದುಕೊಳ್ಳುತ್ತಾರೆ. ಒಂದು ಸಲ ನಿಮಗೆ ವೋಟು ಕೊಡ್ತಾರೆ, ಇನ್ನೊಂದು ಸಲ ನಮಗೆ ವೋಟು ಕೊಡ್ತಾರೆ. ಅದರಲ್ಲಿ ಇನ್ನೇನೂ ಇಲ್ಲ. ಧನಸಂಗ್ರಹ ಮುಖ್ಯ ಅಷ್ಟೆ. ರೈತರ ಹಿತಾಸಕ್ತಿ ಹೇಗೆ ಕಾಪಾಡುವುದು ಎಂಬುದು ಮುಖ್ಯ. ಇದರಲ್ಲಿ ಸ್ವಲ್ಪ ಆಧ್ಯತೆ ಪ್ರಶ್ನೆಯೂ ಇದೆ. ಹಿಂದುಳಿದ ಪ್ರದೇಶಗಳಿಗೆ ಆದ್ಯತೆ ಕೊಡಬೇಕು. ಹಳೇ ಮೈಸೂರು ಕಡೆ ಒಂದು ಪ್ರಾಜೆಕ್ಟ್ ಮಾಡದಿದ್ದರೂ ನಡೆಯಬಹುದು ಏಕೆಂದರೆ ಇರಿಗೇಷನ್ ಪೊಟೆನ್‌ಸಿಯಾಲಿಟಿ ಜಾಸ್ತಿ ಇದೆ. ಆದರೆ ರೈತರು ಎಲ್ಲಿ ನಿರ್ಗತಿಕರಾಗಿದ್ದಾರೆ ಡ್ರೈಲ್ಯಾಂಡ್ ಎಲ್ಲಿದೆ ಅಲ್ಲಿಗೆ ಹೆಚ್ಚಿನ ಆದ್ಯತೆ ಕೊಡಬೇಕು. ಇನ್ನೂ ಕೆಲವು ಸಲ ಏನಾಗುತ್ತದೆ ಎಂದರೆ ನೀವು ಪ್ರೆಷರ್ ತಂದ ಕಡೆ ಹಣವನ್ನು ಖರ್ಚು ಮಾಡುತ್ತೀರಿ, ನಮ್ಮ ಕಡೆ ಖರ್ಚು ಮಾಡಿಲ್ಲ. ಹಿಂದೆ ದೇವರಾಜ ಅರಸರು ನಮ್ಮ ಕಡೆ ಏನು ಪ್ರಾಜೆಕ್ಟ್ಸ ಮಾಡಿದರು, ಅದೇ ಇವತ್ತಿಗೂ ಇರುವುದು. ಹಿಂದೆ ಬೆಣ್ಣೆತೊರೆ ಇರಲಿಲ್ಲ.

ಮುಲ್ಲಾ ಮಾರಿ, ಚರಂಡಿ ನಾಲಾ, ಕಾರಂಜ ಪ್ರಾಜೆಕ್ಟ್ ಕೆಲಸವನ್ನು ತೆಗೆದುಕೊಂಡಿರಲಿಲ್ಲ, ಅಪ್ಪರ್ ಕೃಷ್ಣಾಗೆ ಬರೀ ಫೌಂಡೇಷನ್ ಸ್ಟೋನ್ ಹಾಕಿದ್ದರು. ನಾವು ಅನೇಕ ಸಲ ಕಾಲೇಜು ಕೊಡಿ ಶಾಲಾ ಕಟ್ಟಡ ಒದಗಿಸಿ ಎಂದು ಹೇಳಿದರೆ ಅದನ್ನೆಲ್ಲಾ ಕೊಡಿ ಎಂದು ಏಕೆ ಕೇಳುತ್ತೀರಿ. ಅದರ ಬದಲು ಬಾವಿ ಕೆರೆ ಕೇಳಿ ಎಂದು ಹೇಳುತ್ತಿದ್ದರು. ಕಾಲೇಜಿನಲ್ಲಿ ಇವತ್ತು ಯಾರು ಓದುತ್ತಾರೆ. ಅವರು ಸಿಟಿಗೆ ಹೋಗಿ ಬರಬೇಕಾದರೆ ಓದುತ್ತಾರೆ ಎಂಬ ಮಾತನ್ನು ಅವರು ಹೇಳುತ್ತಿದ್ದರು. ವೆಲ್ ಫೇರ್ ಸ್ಕೀಮ್ ಅನ್ನು ಇವತ್ತು ನಿಲ್ಲಿಸುವುದಕ್ಕಾಗುವುದಿಲ್ಲ, ಯಾವುದೇ ಸರಕಾರ ಬಂದರೂ ಕೂಡ ಅದನ್ನು ಮಾಡಬೇಕಾಗುತ್ತದೆ. ಅನೇಕ ಜನರಿಗೆ ಭೂಮಿ ಇಲ್ಲ ಕೃಷಿಕರು ಇದ್ದಾರೆ, ಇಂಡಸ್ಟ್ರಿಯಲ್ ಲೇಬರ್ಸ್ ಇದ್ದಾರೆ ಜನರಿಗೆ ಸಂಪೂರ್ಣವಾದಂತಹ ಸಹಕಾರವನ್ನು ಒದಗಿಸಬೇಕಾದಂತಹದ್ದು ಅವಶ್ಯಕತೆ ಇದೆ, ಅದನ್ನು ಮಾಡಲೇಬೇಕಾಗುತ್ತದೆ, ನಮ್ಮಲ್ಲಿರತಕ್ಕಂತಹ ರಿಸೋರ್ಸಸ್ ಮೊಬಿಲೈಸೇಷನ್ ಅನ್ನು ಹೇಗೆ ಯುಟಿಲೈಸ್ ಮಾಡಬೇಕೆಂಬುದು ಬಹಳ ಮಹತ್ವದ್ದು. ಕೆಲಸವನ್ನು ನಾವು ಮೊದಲು ಮಾಡಬೇಕು. ಇದರ ಬಗ್ಗೆ ಒಂದು ಮೀಟಿಂಗ್‌ಗೆ ಹೋಗಬೇಕೆಂದು ಹೇಳಿದ್ದನ್ನು ನಾನು ಕೇಳಿದ್ದೇನೆ. ತೆಲುಗು ಗಂಗಾ ಯೋಜನೆಯ ಬಗ್ಗೆ ಎನ್.ಟಿ.ಆರ್. ಆಗಲೀ ಇಲ್ಲವೇ ಬೇರೆ ಶಾಸಕರಿರಲಿ ದೆಹಲಿಗೆ ಹೋಗಿ ಕಡಬ, ಕರ್ನೂಲಿಗೆ ನೀರು ಕೊಡಿ ಎಂದು ಧರಣಿ ಮಾಡಿದರು. ಕೇಂದ್ರ ಸರಕಾರ ಇದಕ್ಕೆ ಕ್ಲಿಯರೆನ್ಸ್ ಕೊಟ್ಟಿಲ್ಲ, ಪ್ರಾಜೆಕ್ಟ್ ಅಪ್ರೂವ್ ಮಾಡಿಲ್ಲ ಮಾಡಿಕೊಡಿ ಎಂದು ಅವರ ಮೇಲೆ ಪ್ರೆಷರ್ ಮಾಡಿ ಯಾವ ರೀತಿ ಆಂಧ್ರ ಪ್ರದೇಶದವರು ಈ ಪ್ರಾಜೆಕ್ಟ್ ಅನ್ನು ಕ್ಲಿಯರ್ ಮಾಡಿಕೊಂಡು ೩ ಲಕ್ಷ ಎಕರೆಗೆ ನೀರಾವರಿಯನ್ನು ಒದಗಿಸಬೇಕು ಎಂಬ ಒಂದು ಪ್ರಯತ್ನವನ್ನು ಏನು ಮಾಡುತ್ತಿದ್ದಾರೆ ಅದಕ್ಕೆ ನಮ್ಮ ಸರಕಾರದವರು ಮಣಿಯಬಾರದು. ನೀವೂ ಕೂಡ ಎಲ್ಲಾ ರೀತಿಯ ಪ್ರಯತ್ನವನ್ನು ಮಾಡಬೇಕು ನಿಮ್ಮ ಜೊತೆಯಲ್ಲಿ ನಾವು ಇದ್ದೇವೆ, ಸಂಪೂರ್ಣವಾದ ಸಹಕಾರವನ್ನು ನೀಡುತ್ತೇವೆ. ನಿಮ್ಮ ಪ್ರಭಾವವೇನು ಇದೆ ಅದನ್ನು ಸ್ವಲ್ಪ ಉಪಯೋಗ ಮಾಡಿ. ಪಬ್ಲಿಸಿಟಿ ಮಾಡಿಕೊಂಡು ಕಾನ್‌ಫರೆನ್ಸ್ ಮಾಡಿ ಲಕ್ಷಾಂತರ ರೂಪಾಯಿ ಹಾಳು ಮಾಡುವುದಕ್ಕಿಂತಲೂ

ದೇಶದ ಹಿತದೃಷ್ಟಿಯಿಂದ, ರಾಜ್ಯದ ಹಿತದೃಷ್ಟಿಯನ್ನು ಜನರ ಹಿತ ಕಾಪಾಡುವುದಕ್ಕೆ ಪ್ರಭಾವವನ್ನು ಬೀರಿದರೆ ಒಳ್ಳೆಯದು. ಈ ವರ್ಷವಾದರೂ ತಾವು ಏನು ಹಿಂದೆ ಇದಕ್ಕೆ ಹಣವನ್ನು ಪ್ರಾವಿಷನ್ ಮಾಡ ಬೇಕೆಂದು ಮಾಡಿದ್ದೀರಿ ಅಷ್ಟು ಹಣವನ್ನು ಅಪರ್ ಕೃಷ್ಣಾ ಪ್ರಾಜೆಕ್ಟ್, ಕೃಷ್ಣಾ ಬೇಸಿನ್‌ನಲ್ಲಿರತಕ್ಕಂತಹ ಎಲ್ಲಾ ಪ್ರಾಜೆಕ್ಟ್‌ಗಳಿಗೆ ಖರ್ಚು ಮಾಡಿ ತೋರಿಸುತ್ತೀರೆಂದು ನಾನು ನಂಬಿದ್ದೇನೆ.

ಶ್ರೀ ಹೆಚ್. ಎಲ್. ಶಿವೇಗೌಡ.—ತೆಲುಗು ಗಂಗಾ ವಿಚಾರದಲ್ಲಿ ಈ ಸದನದಲ್ಲಿರತಕ್ಕಂತಹ ಎಲ್ಲಾ ರಾಜಕೀಯ ಪಕ್ಷಗಳೂ ಒಟ್ಟಾಗಿ ಇದನ್ನು ವಿರೋಧ ಮಾಡುತ್ತಿದ್ದೇವೆ. ಕೃಷ್ಣಾ ಬೇಸಿನ್‌ನಲ್ಲಿ ನೀರಿದೆ ಕಾವೇರಿ ಬೇಸಿನ್‌ನಲ್ಲಿ ನೀರಿದೆ ಎನ್ನುವುದು ಮುಖ್ಯ ಪ್ರಶ್ನೆ ಅಲ್ಲ. ಕರ್ನಾಟಕದಲ್ಲಿರತಕ್ಕಂತಹ ಜನರಿಗೆ ನೀರಾವರಿಯನ್ನು ಒದಗಿಸಕೊಡಬೇಕು. ಇಲ್ಲಿಯವರೆಗೆ ಎಷ್ಟು ಜನರಿಗೆ ನೀರಾವರಿಯನ್ನು ಮಾಡಿಕೊಡಬೇಕಾಗಿತ್ತು. ಅಷ್ಟು ಜನರಿಗೆ ಮಾಡಿಕೊಟ್ಟಿಲ್ಲ, ಅದನ್ನು ಈಗಲಾದರೂ ಮಾಡಿಕೊಡ ಬೇಕು ನಮ್ಮ ಹಕ್ಕನ್ನು ನಾವು ಕಳೆದುಕೊಳ್ಳಬಾರದು ಎಂದು ನಾನು ವಿನಂತಿಸುತ್ತೇನೆ, ಮಾನ್ಯ ಖರ್ಗೆಯವರು ಹೇಳಿದ ಹಾಗೆ ೨೦೬೦ ಟಿ.ಎಂ.ಸಿ.ಯಲ್ಲಿ ೮೦೦ ಟಿ.ಎಂ.ಸಿ. ಆಂಧ್ರಕ್ಕೆ ಹೋಗ ಬೇಕಾಗುತ್ತದೆ ನಮಗೆ ೭೦೦ ಟಿ.ಎಂ.ಸಿ. ಬರುತ್ತದೆ. ೨೧೩೦ ಟಿ.ಎಂ.ಸಿ. ವರೆಗೆ ಜಾಸ್ತಿಯಾದರೆ ಅಂದರೆ ೭೦ ಟಿ.ಎಂ.ಸಿ. ನೀರು ಜಾಸ್ತಿಯಾದರೆ ಅದರಲ್ಲಿ ನಮಗೆ ೩೦ ಟಿ.ಎಂ.ಸಿ. ಬರಬೇಕಾಗು ತ್ತದೆ, ಆಂಧ್ರದವರಿಗೆ ೧೦.೫ ಹೋಗುತ್ತದೆ. ೭೦ ವರ್ಷ ಮಳೆಯಾದದ್ದನ್ನೇ ೨೧೩೦ ಟಿ ಎಂ.ಸಿ ಎಂದು ಲೆಕ್ಕಕ್ಕೆ ತೆಗೆದುಕೊಂಡರೆ ೩೩೩ ಟಿ.ಎಂ.ಸಿ. ಹೆಚ್ಚಿಗೆ ಬರುತ್ತದೆ, ಆಗ ನಮಗೆ ೧೬೬ ಟಿ ಎಂ.ಸಿ. ಹೆಚ್ಚಿಗೆ ಬರಬೇಕಾಗುತ್ತದೆ ಎಂಬ ಈ ಲೆಕ್ಕವನ್ನು ಇದರಲ್ಲಿ ಕೊಟ್ಟಿದ್ದಾರೆ. ಆಗ ಆಂಧ್ರಕ್ಕೆ ಕೇವಲ ೯೫ ಟಿ.ಎಂ.ಸಿ. ಹೆಚ್ಚುವರಿ ನೀರು ಸಿಗುತ್ತದೆ. ಅಂದರೆ ಈಗಾಗಲೇ ತೆಲುಗು–ಗಂಗಾದಲ್ಲಿ ಮಾಡಿರ ತಕ್ಕಂಥದ್ದು ೩೩೩ ಟಿಎಂಸಿಎಫ್‌ಟಿಯಷ್ಟನ್ನು ಮೂರು ರಾಜ್ಯಗಳಿಗೂ ಬರಬೇಕಾದದ್ದು. ಅದರಲ್ಲಿ ನಮಗೆ ೧೬೬ ಟಿ.ಎಂ.ಸಿ. ಬರಬೇಕಾಗಿದ್ದನ್ನು ಈಗಾಗಲೇ ಅವರು ಕಾಲುವೆ ತೆಗೆದಿರುವುದರಿಂದ ೧೫ ಟಿ.ಎಂ.ಸಿ. ಯಷ್ಟು ನೀರನ್ನು ಮದ್ರಾಸ್‌ಗೆ ಕೊಡುವುದರ ಜೊತೆಗೆ ಇನ್ನು ೨೫೦–೩೦೦ ಟಿ.ಎಂ.ಸಿ.ಯಷ್ಟು ಹೆಚ್ಚಿಗೆ ನೀರನ್ನು ತೆಗೆದುಕೊಳ್ಳತಕ್ಕಂಥ ಕಾಲುವೆಯನ್ನು ತೆಗೆದಿದ್ದಾರೆ, ಶ್ರೀಮಾನ್ ಖರ್ಗೆಯವರು ಹೇಳಿದ್ದು ಕೇಳಿ ಬಹಳ ಸಂತೋಷವಾಯಿತು. ಆಂಧ್ರದಲ್ಲಿರತಕ್ಕಂಥ ಎಂ.ಎಲ್.ಎ.ಗಳು, ಮಂತ್ರಿಗಳು, ಕೇಂದ್ರದಲ್ಲಿರತಕ್ಕಂಥ ಮಂತ್ರಿಗಳು ಅವರು ಜನತಾದಲ್ಲಿಯೇ ಇರಲಿ, ಕಾಂಗ್ರೆಸ್‌ನಲ್ಲಿಯೇ ಇರಲಿ, ಅವರು ಕೂಡಾ ಏನಾದರೂ ಮಾಡಿ ತೆಲಗುಗಂಗಾ ಯೋಜನೆಯನ್ನು ಸ್ಯಾಂಕ್ಷನ್ ಮಾಡಿಸಿ ಕೊಳ್ಳುವುದಕ್ಕೆ ಪ್ರಯತ್ನಪಡುತ್ತಿದ್ದಾರೆ ಎಂದು ಅವರು ಹೇಳಿದ್ದನ್ನು ಕೇಳಿ ಸಂತೋಷವಾಯಿತು. ಆಂಧ್ರದಲ್ಲಿ 'ಐ' ಕಾಂಗ್ರೆಸ್ ಎಂ.ಎಲ್.ಎ. ರಾಯಲಸೀಮೆ ಏರಿಯಾದಲ್ಲಿ ಹೆಚ್ಚಿಗೆ ನೀರನ್ನು ಕೊಡುತ್ತಿಲ್ಲ ಎಂದು ಧರಣಿ ಕುಳಿತುಕೊಳ್ಳುತ್ತಾರೆ. ಎನ್.ಟಿ. ರಾಮರಾಯರು ತೆಲುಗುಗಂಗಾದಿಂದ ಜನರಿಗೆ ಅಂದರೆ ರಾಯಲಸೀಮೆ ಏರಿಯಾದ ಜನರಿಗೆ ಹೆಚ್ಚಿಗೆ ನೀರನ್ನು ಕೊಡತಕ್ಕಂಥ ಸ್ಟೇಟ್ ಮೆಂಟ್‌ನ್ನು ಕೊಡುತ್ತಾರೆ. ದೆಹಲಿಯಲ್ಲಿ ಹೋಗಿ ಜನತಾಪಕ್ಷದವರು, ಪಾರ್ಲಿಮೆಂಟ್ ಸದಸ್ಯರು ಕರ್ನಾಟಕದವರು ಕೂಡಾ ಸೇರಿಕೊಂಡು ಈ ಆಂಧ್ರ ಪ್ರದೇಶಕ್ಕೆ ಅನ್ಯಾಯವಾಗಿದೆ, ಅವರು ಕೊಟ್ಟಿರ ತಕ್ಕಂಥ ಎಲ್ಲಾ ಪ್ರಾಜೆಕ್ಟ್‌ಗಳ ಪೈಕಿ ಒಂದನ್ನು ಸಹ ಕ್ಲಿಯರ್ ಮಾಡಿಲ್ಲ ಎಂದು ಅಲ್ಲಿ ಹೇಳುತ್ತಾರೆ. ಅದೂ ಅಲ್ಲದೆ, ಆಂಧ್ರ ಪ್ರದೇಶದ ನಮ್ಮ ಕಾಂಗ್ರೆಸ್-ಐ ನಾಯಕರು ಮತ್ತು ಕೇಂದ್ರದಲ್ಲಿರತಕ್ಕಂಥ ಮಂತ್ರಿಗಳು ಕೂಡಾ ಈ ಕೆಲಸ ನಮ್ಮಿಂದ ಆಯಿತು. ಈ ಆಂಧ್ರದಲ್ಲಿ ನಮ್ಮ ರಾಯಸೀಮೆ ಪ್ರದೇಶಕ್ಕೆ ನಾವು ಕಾಂಗ್ರೆಸ್–ಐ ಪಕ್ಷದವರಿಂದ ಹೆಚ್ಚಿಗೆ ನೀರು ಬಂದು ಜನಗಳಿಗೆ ಇದು ಅನುಕೂಲವಾಯಿತು ಎಂದು ಹೇಳಿ ಒಂದು ಶಹಭಾಷ್‌ಗಿರಿಯನ್ನು ತೆಗೆದುಕೊಳ್ಳಬೇಕು ಎಂದು ಹೇಳಿ ಕೇಂದ್ರದಲ್ಲಿ ಅವರು ಪ್ರಭಾವವನ್ನು ಬೀರುತ್ತಿದ್ದಾರೆ ಎಂದು ಶ್ರೀಮಾನ್ ಖರ್ಗೆಯವರು ಕೂಡಾ ಈ ವಿಷಯವನ್ನು ಒಪ್ಪಿಕೊಂಡಿದ್ದು ನೋಡಿ ನನಗೆ ಬಹಳ ಸಂತೋಷವಾಯಿತು. ಇದನ್ನು ತಾವು ದಯವಿಟ್ಟು ತಡೆಯುತಕ್ಕಂಥದ್ದು ಮಾಡಬೇಕು. ಇದನ್ನು ತಡೆಯುವುದಕ್ಕೆ ತಮ್ಮ ಕೈಯಿಂದ ಮಾತ್ರ ಸಾಧ್ಯ. ಮಾನ್ಯ ಪ್ರಧಾನಮಂತ್ರಿಗಳಲ್ಲಿ ಹೇಳಿ ಈ ರೀತಿ ಆದರೆ ನಮ್ಮ ಕರ್ನಾಟಕ ರಾಜ್ಯಕ್ಕೆ ಬಹಳ ತೊಂದರೆ ಯಾಗುತ್ತದೆ ಎಂದು ಹೇಳಿ ಇದನ್ನು ನೀವು ತಡೆಯತಕ್ಕಂಥದ್ದು ಮಾತ್ರ ಸಾಧ್ಯ. ನಾವು ಏನೂ ಹೇಳಿದರೂ ಕೂಡಾ ಪ್ರಯೋಜನ ಆಗುವುದಿಲ್ಲ.

ಶ್ರೀ ಕೆ.ಹೆಚ್.ಪಾಟೀಲ್.—ಮೊನ್ನೆ ತಾನೆ ಕಾಂಗ್ರೆಸ್‌ನವರೆಲ್ಲರೂ ದೆಹಲಿಗೆ ಹೋದಾಗ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿದಾಗ ತೆಲುಗುಗಂಗಾ ವಿಷಯದ ಬಗ್ಗೆ ಮೆಮೊರಾಂಡಮ್ಮನ್ನು ಕೊಟ್ಟೆವು,

ಒತ್ತಾಯ ಕೂಡಾ ಮಾಡಿದೆವು. ನಾನು ಸಹಿತ ಕೇಳಿದೆ, ಈ ಎನ್‌ವಿರಾನ್‌ಮೆಂಟ್ ಪರ್ಮಿಷನ್ ಬಂತಲ್ಲಾ ಅದಕ್ಕೆ ನಿಮ್ಮ ಅರ್ಥವೇನು ಎಂದು ಕೇಳಿದೆ ? ಅದಕ್ಕೆ ಅವರು ಏನು ಹೇಳಿದರೆಂದರೆ, ಮನೆ ಕಟ್ಟಲಿಕ್ಕೆ ಬರುವವರು ಜಾಗ ಇಲ್ಲದೆ ಮನೆ ಹೇಗೆ ಕಟ್ಟುವುದಕ್ಕೆ ಆಗುತ್ತದೆ, ಆಗುವುದಿಲ್ಲ. ಇಟ್ ಈಸ್ ನಥಿಂಗ್ ಟು ಡೂ. ನಾನು ಯಾವ ರಾಜ್ಯದ ಹಿತವನ್ನು ಅಲಕ್ಷಿಸುವುದಿಲ್ಲ, ಐ ಆಶ್ಯೂರ್ ಯು ಎಂದು ಹೇಳಿದರು. ಇದನ್ನು ನಾನೇ ಮೊನ್ನೆ ಹೇಳಿದ್ದೇನೆ.

ಶ್ರೀ ಹೆಚ್.ಎಲ್. ತಿಮ್ಮೇಗೌಡ.—ತಾವು ಪ್ರಯತ್ನ ಮಾಡಲಿಲ್ಲ ಎಂದು ನಾನು ಹೇಳಲಿಲ್ಲ. ತಾವು ಮಾಡಿದ್ದೀರಿ, ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳತಕ್ಕಂಥದ್ದು ಏನೆಂದರೆ ಕೇಂದ್ರದಲ್ಲಿರತಕ್ಕಂಥ ಆಂಧ್ರದ ಮಂತ್ರಿಗಳು ಕೆಲವರು ಯಾರು ಇದ್ದಾರೆ, ಅವರು ಎನ್.ಟಿ. ರಾಮರಾಯರು ಏನು ಮಾಡಿ ಕೊಡುವುದಕ್ಕೂ ಆಗಲಿಲ್ಲ, ಇದು ನಮ್ಮ ಮುಖಾಂತರ ಆಯಿತು ಎಂದು ತೋರಿಸಿಕೊಳ್ಳುವ ಆತುರದಲ್ಲಿ ಒಂದು ಪ್ರಯತ್ನವನ್ನು ಮಾಡುತ್ತಿದ್ದಾರೆ, ಇದನ್ನು ದಯವಿಟ್ಟು ಪ್ರಧಾನಮಂತ್ರಿಗಳಲ್ಲಿ ಹೇಳಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇವೆ. ಇದರಲ್ಲಿ ನೀವು ಪ್ರಯತ್ನವನ್ನು ಪಟ್ಟಿಲ್ಲ ಎಂದು ಹೇಳಲಿಲ್ಲ. ನಮಗಿಂತ ನೀವು ಹಿಂದುಳಿದಿದ್ದೀರಿ ಎಂದು ಹೇಳತಕ್ಕಂಥ ಮಾತನ್ನು ನಾನು ಹೇಳುತ್ತಿಲ್ಲ.

ಶ್ರೀ ಕೆ.ಹೆಚ್. ಪಾಟೀಲ್.—ನಾವು ಅವರಿಗೆ ಒತ್ತಾಯ ಮಾಡಿ ಮನವೊಲಿಸಿ ಹೇಳುವುದಕ್ಕೆ ಹೋಗುತ್ತಿದ್ದೇವೆ, ನೀವು ಅವರನ್ನು ಚೋರ ಚೋರ ಎಂದು ಕರೆಯುತ್ತೀರಿ. ಆ ರೀತಿ ಚೋರ ಎಂದು ಕರೆದು ಆ ಚೋರನ ಎದುರಿಗೆ ಹೋಗಿ ಹೇಗೆ ನಿಲ್ಲುತ್ತೀರಿ ?

ಶ್ರೀ ಹೆಚ್. ಎಲ್. ತಿಮ್ಮೇಗೌಡ,—ಇನ್ನೊಂದು ವಿಚಾರದಲ್ಲಿ ಶ್ರೀಮಾನ್ ಖರ್ಗೆಯವರು ಹೇಳಿದರು. ಯಾವುದಾದರೂ ಬಲವಂತ ಇದ್ದರೆ ಮಾತ್ರ ಆಗುತ್ತದೆ ಎಂದು ಹೇಳಿದ್ದಾರೆ. ಇವತ್ತಿನ ಪತ್ರಿಕೆಯನ್ನು ತಾವು ಓದಿದ್ದೀರಿ, ನಿನ್ನೆ ಟಿವಿಯಲ್ಲಿ ಕೂಡಾ ನೋಡಿದ್ದೇವೆ. ಪ್ರಧಾನಮಂತ್ರಿಗಳು ಪಂಜಾಬ್, ಹರಿಯಾಣ, ಹಿಮಾಚಲಪ್ರದೇಶ ಮತ್ತು ಜಮ್ಮು ಮತ್ತು ಕಾಶ್ಮೀರ್‌ಗೆ ಹೋಗಿ ಫ್ಲಡ್ ಅಫೆಕ್ಟ್‌ನಿಂದ ಹಾನಿಯಾಗಿರತಕ್ಕಂಥ ಏರಿಯಾಗಳನ್ನು ನೋಡಿ ಕೇಂದ್ರಸರ್ಕಾರದ ಟೀಮ್ ಹೋಗದೇ ಇದ್ದರೂ ಕೂಡಾ ಪಂಜಾಬ್‌ಗೆ ನೂರು ಕೋಟಿ ರೂಪಾಯಿ, ಹರಿಯಾಣಾಗೆ ೪೪ ಕೋಟಿ ರೂಪಾಯಿ. ಹಿಮಾಚಲಪ್ರದೇಶಕ್ಕೆ ೩೩.೬೬ ಕೋಟಿ ರೂಪಾಯಿ ಮತ್ತು ಜಮ್ಮು ಮತ್ತು ಕಾಶ್ಮೀರಕ್ಕೆ ೫೩ ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿ ಮತ್ತೆ ನಾನು ಪ್ಲಾನಿಂಗ್ ಕಮಿಷನರ್‌ರವರಿಗೆ ಪುನಃ ಹೇಳಿದ್ದೇನೆ, ಈಗಿರುವ ರ್‌ನಾರ್ಮ್ಸ್ ಅನ್ನು ಬದಲಾವಣೆ ಮಾಡಿ ಎಂದು ಅದು ಆದ ಮೇಲೆ ನಾರ್ಮ್ಸ್ ಪ್ರಕಾರ ಇನ್ನೂ ಹೆಚ್ಚಿಗೆ ಕೊಡುತ್ತೇವೆ ಎಂದು ಹೇಳಿದರು. ಆದರೆ ಕರ್ನಾಟಕಕ್ಕೆ ಎಷ್ಟು ಕೊಟ್ಟಿದ್ದಾರೆ ಸ್ವಾಮಿ ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಏತಕ್ಕೆ ಕೊಡಬೇಕು ?

ಶ್ರೀ ಹೆಚ್.ಎಲ್. ತಿಮ್ಮೇಗೌಡ.—ಅದನ್ನೇ ನಾನು ಹೇಳುತ್ತಿರುವುದು.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ನಿಮ್ಮ ಕೈಗಳಲ್ಲಿ ಕಳ್ಳ ಸುಳ್ಳ ಚೋರ್ ಅನ್ನಿಸಿಕೊಂಡು ಕೊಡುತ್ತಿರಬೇಕೇ ?

ಶ್ರೀ ಹೆಚ್.ಎಲ್. ತಿಮ್ಮೇಗೌಡ.—ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಕರ್ನಾಟಕ ರಾಜ್ಯ ರಾಮಕೃಷ್ಣ ಹೆಗಡೆಯವರದ್ದಲ್ಲ. ರಾಮಕೃಷ್ಣಹೆಗಡೆಯವರು ಪ್ರಧಾನಮಂತ್ರಿಗಳನ್ನು ಚೋರ್ ಎಂದು ಬಯ್ದಿದ್ದರೆ ಕರ್ನಾಟಕ ರಾಜ್ಯದವರಾದ ನಮ್ಮೆಲ್ಲರ ಮೇಲೆ ಸೇಡು ತೀರಿಸಿಕೊಳ್ಳಬಾರದು, ಯಾವ ಸರ್ಕಾರದವರೂ ಆ ರೀತಿ ಸೇಡು ತೀರಿಸಿಕೊಳ್ಳಬಾರದು. ಅವರು ಚೋರ್ ಎಂದು ಹೇಳಿ ಬಯ್ದಿದ್ದರೆ ಅವರ ಮೇಲೆ ಏನು ಬೇಕಾದರೂ ಮಾಡಿಕೊಳ್ಳಿ, ಆದರೆ ಜನಗಳ ಮೇಲೆ ಗದಾಪ್ರಹಾರ ಮಾಡತಕ್ಕಂಥದ್ದು ಸರಿಯಲ್ಲ.

ನಮ್ಮ ದೇಶದಲ್ಲಿ ಕೇಂದ್ರ ಸರ್ಕಾರವು ಫ್ಲಡ್ ಅಫೆಕ್ಟೆಡ್ ಏರಿಯಾಗಳಿಗೆ ದುಡ್ಡು ಕೊಟ್ಟಿದೆ. ನಾಲ್ಕು ಸರ್ಕಾರಗಳ ಪೈಕಿ ಒಂದು ಕಾಂಗ್ರೆಸ್ ವಿರೋಧವಾದ ಸರ್ಕಾರವಾದ ಹರ್ಯಾಣಕ್ಕೆ ಪ್ರಧಾನ ಮಂತ್ರಿಗಳು ಹೋಗಿ ಇನ್ಸ್‌ಪೆಕ್ಟ್ ಮಾಡಿ ಅಡ್‌ಹಾಕ್ ಆಗಿ ಸುಮಾರು ೨೩ ಚಿಲ್ಲರೆ ಕೋಟಿ ರೂಪಾಯಿ ಯನ್ನು ಮಂಜೂರು ಮಾಡಿದ್ದಾರೆ. ಆದರೆ ನಮ್ಮ ಕರ್ನಾಟಕ ರಾಜ್ಯಕ್ಕೆ ಮೂರು ಕಾಸೂ ಸಹ ಕೊಟ್ಟಿಲ್ಲ.

ಶ್ರೀ ಮಲ್ಲಾರಿ ಗೌಡ ಪಾಟೀಲ್.—ಕರ್ನಾಟಕಕ್ಕೆ ಕೊಡುವುದಿಲ್ಲ ಎಂದು ಹೇಳಬೇಡಿ. ಅವರು ಇಲ್ಲಿಗೆ ಬಂದು ನೋಡಿ ಕೊಡಬಹುದು. ಯಾಕೆ ಕೊಡುವುದಿಲ್ಲ ಎಂದು ಸ್ವಪ್ನ ನೋಡುತ್ತೀರಿ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಟೈಮ್‌ಗೆ ಸರಿಯಾಗಿ ಸಿಕ್ಕದೇ ಇರತಕ್ಕದ್ದು ಆ ಮೇಲೆ ಸಿಕ್ಕರೆ ಏನು ಪ್ರಯೋಜನ ಬಂತು ? ಈಗ ತಕ್ಷಣ ಏನು ಬೇಕಾಗುತ್ತದೆ. ಫ್ಲಡ್ ಎಫೆಕ್ಟೆಡ್ ಏರಿಯಾಗೆ ಮನೆಗಳು ಹೋಗಿರತಕ್ಕವರಿಗೆ ಮನೆ ಊಟ ಇಲ್ಲ, ಅದನ್ನು ಮಾಡುವುದಕ್ಕೆ ತಕ್ಷಣ ದುಡ್ಡು ಬೇಕಾಗಿದೆ ಅವರು ಇಲ್ಲಿಗೂ ಬರಬಹುದು, ಬಂದು ನೋಡಿ ದುಡ್ಡು ಕೊಡುತ್ತಾರೆ. ಯಾಕೆ ಬರುವುದಿಲ್ಲ ? ಎಂದು ಹೇಳುತ್ತೀರಿ ಎಂದು ಹೇಳುವುದರಲ್ಲಿ ಅರ್ಥ ಇಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಫ್ಲಡ್ ಬಗ್ಗೆ ಮೆಮೊರ್ಯಾಂಡಂ ಅನ್ನು ತೆಗೆದುಕೊಂಡು ಪ್ರಧಾನಮಂತ್ರಿಗಳನ್ನು ನಿಮ್ಮ ಮುಖ್ಯಮಂತ್ರಿಗಳು ಭೇಟಿ ಆಗಲಿ. ಈಗ ತೆಲುಗು ಗಂಗಾ ಯೋಜನೆ ಬಗ್ಗೆ ಮಾತ್ರ ಹೇಳಿ

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಅದನ್ನು ಪ್ರಾಸ್ತಾವಿಕವಾಗಿ ಹೇಳಿದೆ. ನೀವು ಯಾವಾಗಲಾದರೂ ಒತ್ತಾಯ ಮಾಡಿದರೆ ಆಗುತ್ತದೆ ಎಂದು ಹೇಳಿದಿರಿ. ಅದಕ್ಕೋಸ್ಕರವಾಗಿ ಹೇಳಿದೆ. ತೆಲುಗು ಗಂಗಾ ಯೋಜನೆ ವಿಚಾರದಲ್ಲಿ ನಮ್ಮ ಮುಖ್ಯಮಂತ್ರಿಗಳಾದ ಬೊಮ್ಮಾಯಿಯವರು ಹೇಳಿದುದು ಪತ್ರಿಕೆಯಲ್ಲಿ ಬಂದಿದೆ. ಅವರು ಏನು ಹೇಳಿದ್ದಾರೆ ಅಂದರೆ ಕೇಂದ್ರ ಸರ್ಕಾರದವರು ಇದನ್ನು ಮೊದಲು ತಡೆಯಬೇಕಾಗಿತ್ತು. ಯಾಕೆ ತಡೆಯಲಿಲ್ಲ, ಎಂದು ಹೇಳಿದ್ದಾರೆ. ನಾನು ಮೊದಲೇ ಹೇಳಿದ ಹಾಗೆ, ಇವರು ತೆಗೆಯುತ್ತಿದ್ದು ತಮಿಳುನಾಡಿನಿಂದ ಕೊಟ್ಟಿದ್ದ ದುಡ್ಡನ್ನು ಉಪಯೋಗಿಸಿಕೊಂಡು ಆದರೆ ಈಗ ಇವರು ೧೫ ಟಿ.ಎಂ.ಸಿ ನೀರು ಹರಿಯಲು ಬೇಕಾದ ಕಾಲುವೆ ಆಗೆಯ ಬೇಕಾಗಿತ್ತು. ೩೦೦ ಟಿ.ಎಂ.ಸಿ.ಎಫ್.ಟಿ., ವಾಟರ್ ಬರತಕ್ಕ ಕಾಲುವೆ ಪ್ರಾರಂಭ ಮಾಡಿ ಆ ಪ್ರಾಜೆಕ್ಟ್ ಅನ್ನು ಕೇಂದ್ರ ಸರ್ಕಾರಕ್ಕೆ ಕಳಿಸಿದ್ದಾರೆ, ಇದನ್ನು ತಡೆಯಬೇಕಾಗಿತ್ತು. ಅದನ್ನು ಕೇಂದ್ರದವರು ಮಾಡಲಿಲ್ಲ ಎನ್ನತಕ್ಕದ್ದನ್ನು ಅವರು ಹೇಳಿದ್ದಾರೆ. They have not interfered they have not stopped it'' ಎಂದು ವಿಚಾರವನ್ನು ಬಿಡೋಣ ಈ ವಿಚಾರವನ್ನು ಚರ್ಚೆ ಮಾಡುವಾಗ ನಾವು ನೀವು ಒಟ್ಟಾಗಿ ಡೆಲಿಗೇಷನ್ ಹೋಗತಕ್ಕದ್ದನ್ನು ಹೋಗಿ ಈ ತೆಲುಗು ಗಂಗಾ ಯೋಜನೆ ಬಗ್ಗೆ ಏನು ಮಾಡಬೇಕು, ಅದನ್ನು ಮಾಡೋಣ.

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವು ಸ್ವಲ್ಪ ಯೀಲ್ಡ್ ಆಗುವುದಿದ್ದರೆ ಹೇಳುತ್ತೇನೆ. ಯಾಕೆಂದರೆ ಮುಖ್ಯಮಂತ್ರಿಗಳು ಮದ್ರಾಸ್‌ಗೆ ಹೋಗಿ ಇರಿಗೇಷನ್ ಕಾಂಪೊನೆಂಟ್ ಇರತಕ್ಕ ತೆಲುಗು ಗಂಗಾ ಯೋಜನೆಗೆ ದಸ್ಕತ್ತು ಹಾಕುವಾಗ, ತಮ್ಮ ಮುಖ್ಯಮಂತ್ರಿಗಳು ಒಪ್ಪಿಗೆ ಕೊಟ್ಟ ಮೇಲೆ ಕೇಂದ್ರ ಸರ್ಕಾರವು ಇದನ್ನು ತಡೆಯಬಹುದಿತ್ತು ಎಂದು ಹೇಳಿದರೆ ಹೇಗೆ ?

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ದಯವಿಟ್ಟು ಕೇಳಿ. ಬೊಮ್ಮಾಯಿಯವರು ಒಪ್ಪಿಗೆ ಕೊಟ್ಟಿಲ್ಲ.

SRI M. VEERAPPA MOILY,—1984 Ramakrishna Hegde, he was a party to the meeting where the agreement was drawn. Prime Minister was also present.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ತೆಲುಗು ಗಂಗಾಕ್ಕೆ ಕೊಟ್ಟಿದ್ದಾರೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಕೊಟ್ಟಿದ್ದಾರೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಈಗಲಾದರೂ ಹೇಳುತ್ತೇನೆ, ಈ ರೀತಿ ನಮ್ಮ ಪಕ್ಷದವರು ೧೯೮೪ರಲ್ಲಿ ತೆಲುಗು ಗಂಗಾ ಯೋಜನೆಗೆ ಒಪ್ಪಿಕೊಂಡಿದ್ದರೆ ಇಷ್ಟೊತ್ತು ನಾವು ಅದನ್ನು ವಿರೋಧ ಮಾಡುವ ಯಾವ ನೈತಿಕ ಹಕ್ಕೂ ನಮಗೆ ಇರುತ್ತಿರಲಿಲ್ಲ. ಅದನ್ನು ಮಾಡುವುದಕ್ಕೆ ಸಾಧ್ಯ ಇಲ್ಲ. ಅದಕ್ಕೆ ದೇವೇಗೌಡರು ಉತ್ತರ ಹೇಳುತ್ತಾರೆ. ದಯವಿಟ್ಟು ಈ ರೀತಿ ಮಿಸ್‌ಲೀಡ್ ಮಾಡಬೇಡಿ ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಇದರಲ್ಲಿ ರಾಜಕೀಯ ಬೇಡ. ನಾವು ನೀವು ಎಲ್ಲಾ ಒಟ್ಟಾಗಿ ಕರ್ನಾಟಕದ......

ಶ್ರೀ ಎಂ. ವೀರಪ್ಪ ಮೊಯಿಲಿ.—ಹಾಗೆ ಹೇಳಿ......

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಶ್ರೀ ಖರ್ಗೆಯವರು ಹೇಳಿದ್ದನ್ನು ನಾನು ಹೇಳಿದೆ. ಅವರು ಕೃಷ್ಣಾ ವಿಚಾರದಲ್ಲಿ ಏನೂ ಮಾಡಲಿಲ್ಲ ಎಂದು ಹೇಳಿದರು. ಅದಕ್ಕೆ ನಾನು ಹೇಳಿದೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನಾನು ನಿಮ್ಮ ಬಜೆಟ್ ಪ್ರಾವಿಷನ್‌ನಲ್ಲಿ ೮೫ ಕೋಟಿ ಎಂದು ತೋರಿಸಿ ೪೦ ಕೋಟಿ ರೂಪಾಯಿ ಖರ್ಚು ಮಾಡಿದ್ದು ಯಾವ ನ್ಯಾಯವೆಂದು ಹೇಳಿದೆ......

ಶ್ರೀ ಹೆಚ್.ಎಲ್. ತಿಮ್ಮೇಗೌಡ.—ದುಡ್ಡನ್ನು ಹೆಚ್ಚು ಪ್ರೊವೈಡ್ ಮಾಡದೇ ಇದ್ದಾಗ ಎಷ್ಟು ದುಡ್ಡು..........

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಕನ್ನಡಿಯಲ್ಲಿರುವುದನ್ನು ಹೋಗಿ ತೋರಿಸಿ ಮಾಡಿದಂತೆ ಮಾಡಿದ್ದೀರಿ......

ಶ್ರೀ ಹೆಚ್. ಎಲ್. ತಿಮ್ಮೇಗೌಡ.— ಇರಿಗೇಷನ್ ಬಗ್ಗೆ ದೇವೇಗೌಡರಿಗೆ ಎಷ್ಟು ಆಸಕ್ತಿ ಇದೆಯೋ, ಅಷ್ಟು ನಮಗೆ ಮತ್ತು ನಿಮ್ಮೆಲ್ಲರಿಗೆ ಇರಬೇಕು ಎಂದು ಅಲ್ಲ. ಕೆಲವರು ಎಷ್ಟು ಜನರಿಗೆ ಜಮೀನು ಇದೆ ಎಂದು ಹೇಳುವವರೂ ಇದ್ದಾರೆ ಏನು ಮಾಡುವುದು? ಆದ್ದರಿಂದ ಇರಿಗೇಷನ್ ಆದರೆ ದೇಶ ಉದ್ಧಾರವಾಗುತ್ತದೆ ಎನ್ನುವ ತಿಳುವಳಿಕೆ ಇದ್ದರೂ ಸಹ ಯಾರದೋ ಮೇಲಿನ ಸಿಟ್ಟಿಗೆ ನೀರಾವರಿಗೆ ಯಾಕೆ ಹೆಚ್ಚಿಗೆ ದುಡ್ಡು ಖರ್ಚು ಮಾಡಬೇಕು ಎನ್ನುವವರೂ ಇದ್ದಾರೆ. ಇದನ್ನು ಪೂರ್ತಿಯಾಗಿ ತಿಳಿದುಕೊಂಡಿರುವವರು ನೀವು. ನಾನು ಮೊದಲೇ ಹೇಳಿದ ಹಾಗೆ ನಾಗಾರ್ಜುನ ಸಾಗರ ಬಂದನ್ನು ಕಟ್ಟುವುದಕ್ಕೆ ಆಂಧ್ರಪ್ರದೇಶದವರು ನ್ಯಾಷನಲ್ ಹೈವೇನಲ್ಲಿ ಬಂದ ದುಡ್ಡನ್ನು ಪೂರ್ತಿಯಾಗಿ ಉಪಯೋಗಿಸಿದರು. ಅವರು ಎಷ್ಟೋ ಅಭಿವೃದ್ಧಿ ಕೆಲಸಗಳನ್ನು ನಿಲ್ಲಿಸಿ ನಮ್ಮ ಸರ್ಕಾರಕ್ಕೂ ಗೊತ್ತಾಗದ ಹಾಗೆ ನಾಗಾರ್ಜುನ ಸಾಗರದಿಂದ ೩೫ ಲಕ್ಷ ಎಕರೆಗೆ ನೀರು ಆಗುವಷ್ಟು ಅಣೆಕಟ್ಟು ಕಟ್ಟಿ ಕ್ರಸ್ಟ್ ಗೇಟ್‌ಗಳನ್ನು ತಯಾರಿಸಲು ಆರ್ಡರ್ ಅನ್ನು ತುಂಗಾಭದ್ರಾ ಸ್ಟೀಲ್ ಪ್ರಾಡಕ್ಟ್ಸ್‌ಗೆ ಕೊಟ್ಟರೆ ನಮಗೆ ಗೊತ್ತಾಗುತ್ತದೆ ಎಂದು ಕಲ್ಕತ್ತಾಕ್ಕೆ ಆರ್ಡರ್ ಕೊಟ್ಟರು. ಅಲ್ಲಿಂದ ಕ್ರಸ್ಟ್ ಗೇಟುಗಳನ್ನು ತರಿಸಿಕೊಂಡ ಮೇಲೆ ಅದು ನಮ್ಮ ಸರ್ಕಾರಕ್ಕೆ ಗೊತ್ತಾಯಿತು.

೩-೦೦ ಪಿ. ಎಂ.

ಸುಮಾರು ೩೫ ಲಕ್ಷ ಎಕರೆಗಳಿಗೆ ನೀರಾವರಿಯಾಗುವಂತಹ ಯೋಜನೆಯನ್ನು ಅವರು ಶ್ರೀ ಕೆ. ಎಲ್. ರಾವ್ ಅವರನ್ನು ಉಪಯೋಗಿಸಿಕೊಂಡು ಮುಗಿಸಿದ್ದಾರೆ. ಈ ಯೋಜನೆಯು ಪೂರ್ತಿಯಾಗುವವರೆಗೂ ಬಚಾವತ್ ಆಯೋಗವನ್ನು ರಚನೆ ಮಾಡಲಿಲ್ಲ. ನಂತರ ಬಚಾವತ್ ಆಯೋಗದ ಮುಂದೆ ಈ ಯೋಜನೆಯ ವಿವರಗಳನ್ನಿಟ್ಟು ರೆಗ್ಯುಲರೈಜ್ ಮಾಡಿಸಿಕೊಂಡರು. ಈಗ ಮತ್ತೆ ಬಚಾವತ್ ಆಯೋಗದ ತೀರ್ಪಿನಲ್ಲಿ ಇಲ್ಲದಿದ್ದರೂ ಸಹ ಶ್ರೀ ಶೈಲಂ ಕಾಲುವೆಯನ್ನು ನೀರಾವರಿಗೆ ತೆಗೆಯುತ್ತಿದ್ದಾರೆ. ಹೀಗೆ ಆಂಧ್ರದವರು ಕೃಷ್ಣಾ ನೀರನ್ನು ಮತ್ತು ತಮಿಳುನಾಡಿನವರು ಕಾವೇರಿ ನೀರನ್ನು ಸಾಕಷ್ಟು ದುಡ್ಡು ಖರ್ಚು ಮಾಡಿ ಬಳಸಿಕೊಳ್ಳುತ್ತಿದ್ದಾರೆ. ನಮ್ಮ ದುರಾದೃಷ್ಟಕ್ಕೆ ನಮ್ಮ ಹಕ್ಕಿನ ನೀರನ್ನು ಇನ್ನೂ ಬಳಸಿಕೊಂಡಿಲ್ಲ. ಇದಕ್ಕಾಗಿ ಎಷ್ಟು ಹಣವನ್ನು ಖರ್ಚು ಮಾಡಬೇಕಾಗಿತ್ತೋ ಅಷ್ಟನ್ನು ಖರ್ಚು ಮಾಡಲು ನಮ್ಮ ಹತ್ತಿರ ದುಡ್ಡು ಇಲ್ಲ. ಈ ಬಗ್ಗೆ ಹಿಂದೆ ಆದದ್ದನ್ನು ಮರೆತು ಇನ್ನು ಮುಂದೆ ನಾವು ಮತ್ತು ನೀವು ನಮ್ಮ ಹಕ್ಕನ್ನು ಉಳಿಸಿಕೊಳ್ಳಲು ಮತ್ತು ಸಂಪನ್ಮೂಲವನ್ನು ಇದಕ್ಕಾಗಿ ಶೇಖರಣೆ ಮಾಡಲು ಪ್ರಯತ್ನ ಮಾಡಬೇಕು. ನಮ್ಮ ರಾಜ್ಯಕ್ಕೆ ಆಗಿರುವಂತಹ ಅನ್ಯಾಯವನ್ನು ನಾವು ತಪ್ಪಿಸಬೇಕು. ನಾವು ಹೆಚ್ಚು ಹೆಚ್ಚು ಸಂಪನ್ಮೂಲವನ್ನು ಹೊಂದಿಸಿಕೊಂಡರೆ ಕಾವೇರಿ ಮತ್ತು ಕೃಷ್ಣಾ ಬೇಸಿನ್‌ನಲ್ಲಿರುವಂತಹ ಎಲ್ಲ ಯೋಜನೆಗಳನ್ನು ಕಟ್ಟಿ ಮುಗಿಸಲು ಸಾಧ್ಯವಾಗುತ್ತದೆ. ನಾವು ನಮ್ಮ ಪಾಲಿನ ೭೦೦ ಟಿ.ಎಂ.ಸಿ.ಯಷ್ಟು ನೀರನ್ನು ಕೃಷ್ಣಾದಲ್ಲಿ ಉಪಯೋಗಿಸಿಕೊಳ್ಳಬೇಕು ಮತ್ತು ಹೆಚ್ಚುವರಿ ನೀರಿನಲ್ಲಿ ಶೇಕಡಾ ೫೦ರಷ್ಟು ಅಂದರೆ ೧೫೬ ಟಿ.ಎಂ.ಸಿ.ಯಷ್ಟು ನೀರನ್ನು ಸಹ ಬಳಸಿಕೊಳ್ಳಲು ನಾವು ಪ್ರಯತ್ನ ಮಾಡಬೇಕು. ಇದಕ್ಕಾಗಿ ಹಣ ಖರ್ಚು ಮಾಡುವಂತಹ ಶಕ್ತಿಯನ್ನು ನಾವು ಮೊದಲು ಪಡೆದುಕೊಳ್ಳಬೇಕು. ಇದಕ್ಕಾಗಿ ನಾವು ಮತ್ತು ನೀವು ಸೇರಿ ಪ್ರಯತ್ನ ಮಾಡೋಣ. ತೆಲುಗುಗಂಗಾ ವಿಚಾರದಲ್ಲಿ ನಾನು ಮೊದಲು ಹೇಳಿದಂತೆ ಆಂಧ್ರದವರು ಕೇಂದ್ರದ ಮಂತ್ರಿಗಳ ಮೇಲೆ ಮತ್ತು ಪ್ರಧಾನ ಮಂತ್ರಿಗಳ ಮೇಲೆ ಸಾಕಷ್ಟು ಪ್ರಭಾವ ಬೀರಬಹುದು. ಆದರೆ ಅದಕ್ಕೆ ಕೇಂದ್ರದವರು ಮಣಿಯದಂತೆ ನಾವು ಮತ್ತು

ನೀವು ಸೇರಿ ಪ್ರಯತ್ನ ಮಾಡಿ ಅದನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡೋಣ ಮತ್ತು ನಮ್ಮ ರಾಜ್ಯಕ್ಕೆ ಅನ್ಯಾಯವಾಗದ ರೀತಿಯಲ್ಲಿ ಪ್ರಯತ್ನ ಮಾಡೋಣ ಎಂಬ ತಕ್ಕಂಥ ಬೇಡಿಕೆಯನ್ನು ತಮ್ಮ ಮುಂದಿಡುತ್ತೇನೆ.

† ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).— ಮಾನ್ಯ ಅಧ್ಯಕ್ಷರೇ, ಇಲ್ಲಿ ನಾವು ತೆಲುಗುಗಂಗಾ ಯೋಜನೆಯ ಬಗ್ಗೆ ಚರ್ಚೆ ಮಾಡುವುದು ಕೇವಲ ಕಂಠಶೋಷಣೆ ಎಂದು ನನಗೆ ಕಾಣುತ್ತಿದೆ. ಏಕೆಂದರೆ, ಇಲ್ಲಿ ಇದರ ಬಗ್ಗೆ ಅನೇಕ ಸಲ ಚರ್ಚೆ ಮಾಡಿದ್ದೇವೆ. ಆದರೆ ಇದರಿಂದ ಏನೂ ಪ್ರಯೋಜನ ಆಗಿಲ್ಲ. ಅವರು ೩೦೦ ಟಿ.ಎಂ.ಸಿ.ಯಷ್ಟು ಹೆಚ್ಚುವರಿ ನೀರನ್ನು ಬಳಸಿಕೊಳ್ಳುತ್ತಿದ್ದರೂ ಸಹ ನಾವು ಸುಮ್ಮನೆ ನೋಡುತ್ತಿದ್ದೇವೆ. ಅವರು ಎಷ್ಟು ಯೋಜನೆಗಳನ್ನು ಕೈಕೊಂಡಿದ್ದಾರೆಂಬ ಬಗ್ಗೆ ವಿವರಗಳನ್ನು ಕೊಟ್ಟಿದ್ದೀರಿ. ಇದರ ಜೊತೆಗೆ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಈ ತೆಲುಗುಗಂಗಾ ಯೋಜನೆ ಬಗ್ಗೆ ಸಾಕಷ್ಟು ವಿವರಗಳನ್ನು ಕೊಟ್ಟಿದ್ದಾರೆ. ಆದರಲ್ಲಿ ಈ ರೀತಿ ಹೇಳಿದ್ದಾರೆ.—

> "ಹೊಸ ವಿವಾದ. — ತೆಲುಗು ಗಂಗಾ ಯೋಜನೆ ಬಗೆಗೊಂದೇ ವಿವಾದ ಸಾಲದೆಂಬಂತೆ ಆಂಧ್ರ ಪ್ರದೇಶದ ಮುಖ್ಯಮಂತ್ರಿ ಹೊಸ ನೀರಾವರಿ ಯೋಜನೆಯೊಂದನ್ನು ಕೈಕೊಳ್ಳುವುದಾಗಿಯೂ ಪ್ರಕಟಿಸಿದ್ದಾರೆ. ೬೦೦ ಕೋಟಿ ರೂ. ಅಂದಾಜು ವೆಚ್ಚದ ಗಲೇರು ನಾಗರಿ ಕಾಲುವೆ ಯೋಜನೆಯನ್ನು ಇನ್ನು ೩೦ ಟಿ.ಎಂ.ಸಿ. ಕೃಷ್ಣಾ ಹೆಚ್ಚುವರಿ ನೀರನ್ನು ಬಳಸಿಕೊಳ್ಳಲು ತಯಾರಿಸಲಾಗಿದೆ. ಕೃಷ್ಣಾ ನದಿ ಶ್ರೀ ಶೈಲಂ ಜಲಾಶಯ ಸೇರುವ ಮುಂಚೆಯೇ ಕಾಲುವೆ ತೋಡಿ ಇಳಿಜಾರಿನ ಗುಂಟ ಗಲೇರು ನದಿಗೆ ಜೋಡಿಸಿ ಅಲ್ಲಿಂದ ಕಡಪಾ ಜಿಲ್ಲೆಯ ವೈಲಾವರಂವರೆಗೆ ಸಾಗುವ ಆ ಕಾಲುವೆ ಕಡಪಾ ಹಾಗೂ ಚಿತ್ತೂರು ಜಿಲ್ಲೆಗಳ ೩ ಲಕ್ಷ ಎಕರೆ ಭೂಮಿಗೆ ನೀರಾವರಿ ಒದಗಿಸುತ್ತದೆ. ಪೆನ್ನಾರ, ಪಾಪಾಗ್ನಿ, ಚೆಯ್ಯಾರಂ, ಸ್ವರ್ಣಮುಖಿ, ಆರಾನಿಯಾದ ಹಾಗೂ ನಾಗರಿನದೀಕೊಳ್ಳಗಳೊಳಗಿಂದ ಆ ಕಾಲುವೆ ಹಾಯ್ದು ಹೋಗುತ್ತದೆ..."

ಇದರಿಂದ ಏನು ಅರ್ಥವಾಗುತ್ತದೆಂದರೆ, ತೆಲುಗು ಗಂಗಾ ಯೋಜನೆ ಒಂದೇ ಅಲ್ಲ, ಇನ್ನೂ ಹಲವಾರು ಯೋಜನೆಗಳನ್ನು ಅವರು ಕೈಕೊಂಡಿದ್ದಾರೆ, ಶ್ರೀ ಶೈಲಂ ರೈಟ್ ಬ್ಯಾಂಕ್ ಬಗ್ಗೆ ಮತ್ತು ಲೆಫ್ಟ್ ಬ್ಯಾಂಕ್ ಬಗ್ಗೆ ಅವರು ಅನೇಕ ಯೋಜನೆಗಳನ್ನು ಕೊಂಡು ಅವುಗಳನ್ನು ಮುಗಿಸಲು ಮುನ್ನುಗ್ಗುತ್ತಿದ್ದಾರೆ. ಅವರು ೨೦೦ ಕೋಟಿ ರೂಪಾಯಿಗಳನ್ನು ಈ ಯೋಜನೆಗೆ ಖರ್ಚು ಮಾಡಿದ್ದಾರೆ. ಇಲ್ಲಿ ಇವರು ಎಷ್ಟು ಖರ್ಚು ಮಾಡಿದ್ದಾರೆಂದು ಮಾನ್ಯ ದೇವೇಗೌಡರು ಹೇಳಬೇಕು. ನಾವು ಏನಿದ್ದರೂ ಇಲ್ಲಿ ಬಿರುಸಾಗಿ ಭಾಷಣ ಮಾಡುತ್ತಿದ್ದೇವೆ. ಆದರೆ ಅಲ್ಲಿ ಪಕ್ಷಬೇಧವಿಲ್ಲದೆ ಹೋರಾಟ ಮಾಡುತ್ತಿದ್ದಾರೆ. ಅಲ್ಲಿನ ಕಾಂಗ್ರೆಸ್ ಶಾಸಕರು ಉಪವಾಸ ಸತ್ಯಾಗ್ರಹ ಮಾಡಿದಾಗ ಆಂಧ್ರ ಬಂದ್ ಆಚರಣೆ ಮಾಡಿದರು. ನಂತರ ಅದಕ್ಕೆ ವಿರುದ್ಧವಾಗಿ ಅಲ್ಲಿನ ಆಡಳಿತ ಪಕ್ಷದ ಸದಸ್ಯರು ದೆಹಲಿಯಲ್ಲಿ ಹೋರಾಟ ಮಾಡಿದರು. ಅವರಿಗೆ ಸಿಂಪಥಿ ತೋರಿಸಲು ಮತ್ತೆ ಎರಡನೇ ಸಲ ಆಂಧ್ರ ಬಂದ್ ಆಚರಿಸಿದರು. ಒಟ್ಟಿನಲ್ಲಿ ಅವರು ತೆಲುಗುಗಂಗಾ ಯೋಜನೆಯನ್ನು ಬೇಗ ಇಂಪ್ಲಿಮೆಂಟ್ ಮಾಡುತ್ತಿದ್ದಾರೆ. ಆದರೆ ನಮ್ಮ ದುರಾದೃಷ್ಟವೆಂದರೆ...

ಶ್ರೀ ಎಂ. ವೀರಪ್ಪ ಮೊಯಿಲಿ.—ಫಸ್ಟ್ ರಾಯಲಸೀಮಾ ವಿಭಾಗದ ಎಂ. ಎಲ್. ಎ. ಗಳು ತೆಲುಗುಗಂಗಾದ್ದು ಕ್ಲಿಯರ್ ಮಾಡಬೇಕು ಎಂದು ಹೇಳಿದ್ದಲ್ಲ, ಅವರು ಹೇಳಿದ್ದು "we want assured irrigation" This is the position. They don't want Telugu Ganga because Telugu Ganga can provide only surplus water. Surplus water cannot provide an asssured water. Rayalseema MLAs demanded for an assured water.

ಶ್ರೀ ಆರ್. ವೆಂಕಟರಾಮಯ್ಯ.—ಇದರಲ್ಲಿ ಮಾನ್ಯ ವೀರಪ್ಪ ಮೊಯಿಲಿಯವರ ವಾದವನ್ನು ನಾನು ಒಪ್ಪುವುದಿಲ್ಲ. ಏಕೆಂದರೆ, ತೆಲುಗು ಪೇಪರ್ಸನ್ನು ಫಾಲೋ ಮಾಡಿದರೆ ಗೊತ್ತಾಗುತ್ತದೆ. ಆಂಧ್ರದ ಬಗ್ಗೆ ನನಗೆ ಕಂಟ್ಯಾಕ್ಟ್ ಜಾಸ್ತಿ ಉಂಟು. ಅಲ್ಲಿ ಅವರು ತೆಲುಗುಗಂಗಾ ಬಗ್ಗೆ ಪೂರ್ತಿ ಕಾವ ಸಂಟ್ರೇಟ್ ಮಾಡಿದರು.

SRI DHARAM SINGH.—Rayalaseema is a neglected area. ಆಂಧ್ರ ಪ್ರದೇಶದಲ್ಲಿರತಕ್ಕಂಥ ಇರಿಗೇಷನ್ ಪ್ರಾಜೆಕ್ಟ್‌ಗಳನ್ನು ಕ್ಲಿಯರ್ ಮಾಡುತ್ತಾ ಇಲ್ಲ ಮಾಡಬೇಕು ಎಂದು ಎನ್. ಟಿ. ರಾಮರಾವ್‌ರವರು ಧರಣಿ ಕುಳಿತಾಗ ಅದಕ್ಕೆ ಟು ಕೌಂಟರ್‌ದಟ್ ಇವರು ಮಾಡಿದರು.

ಶ್ರೀ ಆರ್. ವೆಂಕಟರಾಮಯ್ಯ.—ಆ ಮೇಲೆ ಏನಾಯಿತು ಅಂದರೆ, ಅಲ್ಲಿರುವ ಎಂ ಎಲ್. ಎಗಳನ್ನು ಪೋಲೀಸರು ಅಟ್ಯಾಕ್ ಮಾಡಿದರು. ತೆಲಗು–ಗಂಗಾ ಪ್ರಾಜೆಕ್ಟನ್ನು ಕ್ಲಿಯರ್ ಮಾಡಲಿಲ್ಲ ಎಂದು ದೊಡ್ಡ ದೊಡ್ಡ ಪೋಸ್ಟರ್ಸ್ ಹಾಕಿದರು, ಸೆಂಟ್ರಲ್ ಗವರ್ನಮೆಂಟ್ ಆಂಧ್ರದ ಪ್ರಗತಿಗೆ ಅಡ್ಡಿ ಬರುತ್ತಾ ಇದೆ ಎನ್ನುವ ವಾದವನ್ನು ಮುಂದೆ ಇಡ್ಡಿ ಬಂದ್ ಮಾಡಿದರು. ಅದರಿಂದ ನಮಗೆ ಏನು ಗೊತ್ತಾಗಿದೆ ಎಂದರೆ, ಪ್ರಬಲವಾದ ಜನ ಅಲ್ಲಿ ಚಳುವಳಿ ಮಾಡಿ ತೆಲುಗುಗಂಗಾ ಪ್ರಾಜೆಕ್ಟನ್ನು ಮುಂದುವರಿಸಿಕೊಂಡು ಹೋಗಲು ಎನ್.ಟಿ. ರಾಮರಾವ್‌ರವರ ಕೈ ಬಲ ಆದಹಾಗೆ ಆಯಿತು. ಅಲ್ಲಿ ಒಂದು ಕಡೆ ವಿರೋಧಪಕ್ಷದ್ದೂ ಒಂದೇ ನಿಲುವು ಆಯಿತು, ಆ ಮೇಲೆ ಅಲ್ಲಿರುವ ತೆಲಗುದೇಶಂ ಪಕ್ಷದ್ದೂ ಒಂದೇ ನಿಲುವು ಆಯಿತು. ಇದರಿಂದ ನಾವು ಅರ್ಥಮಾಡಿಕೊಳ್ಳಬೇಕಾಗಿರುವುದು ಏನೆಂದರೆ, ಅಲ್ಲಿ ಈ ರೀತಿಯ ಪ್ರಬಲ ಹೋರಾಟದಿಂದಾಗಿ ತೆಲುಗುಗಂಗಾ ಪ್ರಾಜೆಕ್ಟ್ ಕೆಲಸವನ್ನು ಮುಗಿಸಿಕೊಂಡು ಹೋಗುತ್ತಾ ಇದ್ದಾರೆ ಎಂದು. ನಾನು ಅಂದುಕೊಂಡಿರುವುದು, ೩೦೦ ಟಿಎಂಸಿಯಷ್ಟು ನೀರು ತೆಲುಗುಗಂಗಾ ಪ್ರಾಜೆಕ್ಟ್ ಆಗುತ್ತಲೇ ಅವರಿಗೆ ಸಿಗುತ್ತದೆ, ಇಷ್ಟಾದರೆ ಪರ್ವಾಗಿಲ್ಲ, ಇಷ್ಟರಲ್ಲೇ ಅವರು ಮುಗಿಸಿಲ್ಲ, ಇಷ್ಟಕ್ಕೇ ನಿಲ್ಲಿಸಿಲ್ಲ, ಈಗ ಶ್ರೀಶೈಲಂ ರೈಟ್ ಬ್ಯಾಂಕ್ ಕೆನಾಲ್ ಮತ್ತು ಲೆಫ್ಟ್ ಬ್ಯಾಂಕ್ ಕೆನಾಲ್ ಎರಡನ್ನೂ ಶುರು ಮಾಡಿದ್ದಾರೆ. ಇದನ್ನು ಅವರೇ ಒಪ್ಪಿಕೊಳ್ಳುತ್ತಾರೆ.

<u>Still more ambitious plan of Andhra Pradesh</u>

"The diversion of waters to pennar Basin is not limited to Telugu Ganga Canal alone from the Banakacherla cross regulator near Srisailam Reservoir It is planned to run three canals viz., the Srisailam Right Bank Canal, the Telugu-Ganga Canal and the Srisailam Left Bank Canal (on the Right Bank) In addition, Andhra Pradesh had proposed a Left Bank Canal from Srisailam to utilise 150 TMC before the Tribunal. The Tribunal did not allocate any waters to this project"

ಅದರಿಂದ ನಮಗೆ ಏನಾಗುತ್ತದೆಂದರೆ, ೩೦೦ ಟಿಎಂಸಿ, ಇನ್ನೊಂದು ೧೫೦ ಟಿಎಂಸಿ ಒಟ್ಟು ೪೫೦ ಟಿಎಂಸಿ ನೀರು ಹೋಗುತ್ತದೆ. ನಮಗೆ ಏನಿಲ್ಲ. ನಮ್ಮ ದುರಾದೃಷ್ಟ ಏನೆಂದರೆ, ಹೋದಸಾರಿ ಮಾನ್ಯ ಖಾರ್ಗೆಯವರು ಹೇಳಿದಹಾಗೆ ಸರ್ಕಾರ ಕೊಟ್ಟಿದ್ದು ೫೪ ಕೋಟಿ, ಖರ್ಚು ಮಾಡಿದ್ದು ೪೧ ಕೋಟಿ. ಈಗಲೂ ಅವರು ೬೫೦ ಕೋಟಿ ಬೇಕಾಗಿದೆ ಎಂದು ಹೇಳುತ್ತಾ ಇದ್ದಾರೆ. ಕಾಸ್ಟ್ ದಿನೇ ದಿನೇ ಜಾಸ್ತಿಯಾಗುತ್ತಿದೆ. ವರ್ಷಕ್ಕೆ ೫೪ ಕೋಟಿಯಂತೆ ಖರ್ಚು ಮಾಡಿದರೂ ಕೂಡ ೨೦ ವರ್ಷ ಬೇಕಾಗುತ್ತದೆ, ನಮಗೆ ಕೊಟ್ಟಿರುವ ನೀರನ್ನು ಯೂಟಲೈಸ್ ಮಾಡಿಕೊಳ್ಳುವುದಕ್ಕೆ. ಇದರಿಂದ ನಮಗೆ ಏನು ಪ್ರಯೋಜನ ಎಂದು ಯೋಚನೆ ಮಾಡಿದರೆ ನಿಜವಾಗಿಯೂ ನಮಗೆ ಏನೂ ಉಪಯೋಗವಾಗುವುದಿಲ್ಲ. ನಾನು ಆಗಲೇ ಹೇಳಿದಹಾಗೆ ನಾವು ಸುಮ್ಮನೆ ನಮ್ಮ ಹೊಟ್ಟೆಕಿಚ್ಚನ್ನು ಇಲ್ಲಿ ತೋರಿಸಿಕೊಳ್ಳುತ್ತಿದ್ದೇವೆಯೇ ಹೊರತು ಪ್ರಾಕ್ಟಿಕಲ್ಲಾಗಿ, ಅಬ್ಜೆಕ್ಟೀವಾಗಿ ನಾವು ನೋಡುವಾಗ, ನಿಜವಾಗಿಯೂ ಕೂಡ ನಮ್ಮ ನಿಲುವು ಸರಿಯಿದ್ದರೂ ಆ ನಿಲುವು ಪ್ರಕಾರ ನಡೆದುಕೊಂಡು ಹೋಗಬೇಕಾದರೆ ಏನು ರಿಸೋರ್ಸ್ ಬೇಕು ಆ ರಿಸೋರ್ಸನ್ನು ಒದಗಿಸುತ್ತಾ ಇಲ್ಲ. ಇದು ತೋಳ ಕುರಿಮರಿ ಕತೆಯಾಗಿದೆ. ನಾವು ಮೆಲ್ಗಡೆ ಇರತಕ್ಕವರು. ತೋಳ ಮೇಲ್ಗಡೆ ನೀರು ಕುಡಿಯುತ್ತಿತ್ತು, ಕುರಿಮರಿ ಕೆಳಗೆ ನೀರು ಕುಡಿಯುತ್ತಿತ್ತು...

ಶ್ರೀ ಬಿ. ಎಂ. ಇದಿನಬ್ಬ.—ಇಷ್ಟು ಪ್ರಾಮುಖ್ಯವಾದಂಥ ತೆಲಗುಗಂಗಾದಂಥ ವಿಷಯವನ್ನು ಮಾತನಾಡುವಾಗ, ಇಡೀ ಕರ್ನಾಟಕದ ಜೀವಾಳವಾದಂಥ ವಿಚಾರವನ್ನು ಮಾತನಾಡುವಾಗ ಮಂತ್ರಿಗಳಲ್ಲಿ

ಒಬ್ಬರನ್ನು ಮಾತ್ರ ಕಾಣುತ್ತಾ ಇದ್ದೇವೆ. ಅಲ್ಲೊಬ್ಬರು, ಇಲ್ಲೊಬ್ಬರು ಇದ್ದಾರೆ. ಇದು ಪ್ರಾಮುಖ್ಯವಾದಂಥ ವಿಚಾರವಾಗಿದೆ, ಜೀವನ್ಮರಣದ ಪ್ರಶ್ನೆ ಚರ್ಚೆ ಮಾಡುತ್ತಾ ಇರುವಂಥ ಸಂದರ್ಭದಲ್ಲಿ ಎಲ್ಲರೂ ಇರಬೇಕಾಗಿತ್ತು, ಎಂದು ನಮ್ಮ ಭಾವನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಚುನಾವಣೆ ಹತ್ತಿರ ಬಂದಿದೆಯೆಂದು ಚರ್ಚೆ ಪ್ರಾರಂಭವಾಗಿದೆಯೇ ಹೊರತು ಪ್ರಾಮಾಣಿಕವಾಗಿ ನೀರನ್ನು ಉಪಯೋಗಿಸಿಕೊಳ್ಳಬೇಕು ಎಂದು ಇದ್ದರೆ ಅವರು ಕುಳಿತುಕೊಳ್ಳುತ್ತಾ ಇದ್ದರು. ಪಾಪ, ದೇವೇಗೌಡರು ಮತ್ತು ಆ ಕಡೆ ಕೆಲವರಿಗೆ ಮಾತ್ರ ಆಸಕ್ತಿ ಇದೆ, ಅವರು ಕುಳಿತಿದ್ದಾರೆ.

ಶ್ರೀ ಆರ್. ವೆಂಕಟರಾಮಯ್ಯ.—ದೇವೇಗೌಡರೂ ಇಲ್ಲ.

ಶ್ರೀ ಬಿ.ಎಂ. ಇದಿನಬ್ಬ.—'ಹರಕೆ ಸಲ್ಲಿಸುವುದು' ಎಂದು ಹೇಳುತ್ತಾರೆ, ಆ ರೀತಿ ಕಾಣುತ್ತದೆ.

ಶ್ರೀ ಆರ್. ವೆಂಕಟರಾಮಯ್ಯ.—ಸರ್ಕಾರದ ಈ ನಿರ್ಲಕ್ಷ್ಯತೆಯನ್ನು ನಾವು ಖಂಡಿಸಲೇಬೇಕು. ನೀರು ನಮ್ಮಿಂದ ಹರಿದು ಹೋಗುತ್ತೆ, ಅದನ್ನು ನಿಲ್ಲಿಸಿ ಉಪಯೋಗಿಸಿಕೊಳ್ಳಲೇಬೇಕು.

ಶ್ರೀ ವಿನಯಕುಮಾರ್ ಸೊರಕೆ.—ಮಂತ್ರಿಗಳನ್ನು ಕರೆಸಿ.

ಶ್ರೀ ಎಂ. ಚಂದ್ರಶೇಖರ್.—ಇದುವರೆಗೂ ಇದ್ದರು, ಈಗ ಊಟಕ್ಕೆ ಹೋಗಿದ್ದಾರೆ.

ಶ್ರೀ ಆರ್. ವೆಂಕಟರಾಮಯ್ಯ.—ಅದೃಷ್ಟವಶಾತ್ ಈ ಮಳೆ ಚೆನ್ನಾಗಿ ಆಗಿದೆ. ಹಿಂದಿನ ೫ ವರ್ಷಗಳಲ್ಲಿ ಮಳೆ ಇಲ್ಲದೆ ಬಹಳ ತೊಂದರೆಯನ್ನು ಆ ಭಾಗದ ಜನರು ಅನುಭವಿಸಿದ್ದಾರೆ. ಇವತ್ತು ಈ ಪ್ರಾಜೆಕ್ಟನ್ನು ಪೂರ್ತಿ ಮಾಡಿದರೆ, ಬರಗಾಲಕ್ಕೆ ತುತ್ತಾಗುವ ೩-೪ ಜಿಲ್ಲೆಗಳಲ್ಲಿ ಅಂದರೆ, ಬಿಜಾಪುರ, ಗುಲ್ಬರ್ಗ ಹಾಗೂ ರಾಯಚೂರು ಜಿಲ್ಲೆಗಳ ಪರಿಸ್ಥಿತಿ ಉತ್ತಮಗೊಳ್ಳುತ್ತದೆ. ಅದನ್ನು ಬಿಟ್ಟು ನಾವು ಸುಮ್ಮನೆ ಭಾಷಣಗಳನ್ನು ಮಾಡಿಕೊಂಡು ಕಾಲ ತಳ್ಳುತ್ತಿದ್ದೇವೆ. ಆಂಧ್ರದವರು ರಿಸೋರ್ಸಸ್ ಮೊಬಿಲೈಜೇಷನ್ ಮಾಡಿ, ನಾಗಾರ್ಜುನ ಸಾಗರ ಕಟ್ಟಿದ್ದರು. ಇವತ್ತು ಅದನ್ನು ನೋಡಿದರೆ ಸಂತೋಷವಾಗುತ್ತದೆ. ಇಲ್ಲಿ ಅಷ್ಟೋ ಇಷ್ಟೋ ದುಡ್ಡು ಕೊಟ್ಟರೂ ಅದನ್ನು ಕೂಡ ಸರಿಯಾಗಿ ಖರ್ಚು ಮಾಡುವುದಿಲ್ಲ. ಅಲ್ಲಿ ವಿಪರೀತ ಲೂಪ್‌ಹೋಲ್ಸ್ ಇದೆ, ಕಾಲುವೆಗಳನ್ನು ಈಗ ಏನು ಮಾಡಿದ್ದಾರೆ, ನೀರು ಬಿಟ್ಟ ಕೂಡಲೇ ಅವು ಕಿತ್ತುಕೊಂಡು ಹೋಗುತ್ತವೆ. ನಾನು ಆ ಪ್ರಾಜೆಕ್ಟ್ ಏರಿಯಾಕ್ಕೆ ಮೊನ್ನೆ ಹೋಗಿದ್ದೆ. ತೆಲುಗು ಗಂಗಾ ಯೋಜನೆಗೆ ಏನೇನು ಅಡ್ಡಿ ಆತಂಕಗಳು ಇವೆ ಎಂದು ಹೇಳಿದರು. ನಾವು ಮೊದಲು ಫಂಡ್ಸ್ ಕೊಡಬೇಕು. ಅದನ್ನು ಕೊಡುತ್ತಿಲ್ಲ. ದೇವೇಗೌಡರು ಬ್ಯೂರೋಕ್ರಾಟಿಕ್ಸ್ ಹರಡಲ್ಸ್ ಇದೆ ಎಂದು ಹೇಳಿದರು. ಯಾರೋ ಒಬ್ಬ ಆಫೀಸರ್ ಇರಿಗೇಷನ್ ಪ್ರಾಜೆಕ್ಟ್ ಮುಗಿಸಿದರೆ ಬಡ ರೈತರಿಗೆ ಅನುಕೂಲವಾಗುವುದಿಲ್ಲ, ದೊಡ್ಡ ದೊಡ್ಡ ರೈತರಿಗೆ ಅನುಕೂಲವಾಗುತ್ತದೆಂದೂ, ಈ ಪ್ರಾಜೆಕ್ಟ್‌ಗಳಿಗೆ ದುಡ್ಡು ಕೊಡುವುದು ಬೇಡ ಎಂದು ಅಡ್ಡಿ ಹಾಕಿದ್ದಾರೆಂದೂ, ಪತ್ರಿಕೆಗಳಲ್ಲಿ ಕೂಡ ಇದು ಬಂದಿದೆ. ಬ್ಯೂರೋಕ್ರಾಟಿಕ್ ಅಡೆತಡೆಗಳನ್ನು ಗಮನಕ್ಕೆ ತೆಗೆದುಕೊಳ್ಳದೆ ಆದಷ್ಟು ಬೇಗ ಫಂಡ್ ಒದಗಿಸಿ, ಬಚಾವತ್ ಅವಾರ್ಡ್ ಪ್ರಕಾರ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಇವತ್ತು ಕೇಂದ್ರದಲ್ಲಿ ಶಂಕರಾನಂದರವರು ಇದ್ದಾರೆ. ಇವತ್ತು ನಮ್ಮ ಜನ ನೀರು ಸಿಗುತ್ತದೆಂದು ದೊಡ್ಡ ಆಸೆಯನ್ನು ಇಟ್ಟುಕೊಂಡಿದ್ದಾರೆ. ಈ ಯೋಜನೆಗೆ ಸುಮಾರು ೬೦೦ ಕೋಟಿ ರೂಪಾಯಿ ಬೇಕಾಗುತ್ತದೆಂದು ಹೇಳಿದ್ದಾರೆ. ಇನ್ನೂ ಜಾಸ್ತಿ ಬೇಕಾಗಬಹುದು. ಆದರೂ ಚಿಂತೆಯಿಲ್ಲ, ಈ ಯೋಜನೆಯನ್ನು ಮುಗಿಸಿದರೆ, ಕರ್ನಾಟಕಕ್ಕೆ ಒಂದು ವರವಾಗುತ್ತದೆ. ಈ ದಿಸೆಯಲ್ಲಿ ಮಾನ್ಯ ಮಂತ್ರಿಗಳು ತುರ್ತಾಗಿ ಕೆಲಸ ಮಾಡಬೇಕೇ ಹೊರತು, ಬರೀ ಒಣ ಭಾಷಣ ಮಾಡುವುದರಿಂದ ಏನೂ ಪ್ರಯೋಜನ ಇಲ್ಲವೆಂದು ಹೇಳುತ್ತೇನೆ.

† ಶ್ರೀ ಧರ್ಮಸಿಂಗ್ ನಾರಾಯಣ ಸಿಂಗ್ (ಜೇವರ್ಗಿ).—ಸನ್ಮಾನ್ಯ ಅಧ್ಯಕ್ಷರೇ, ಇವೊತ್ತಿನ ದಿವಸ ಸದನದಲ್ಲಿ ನನಗೆ ಏನು ಅನಿಸುತ್ತಿದೆ ಅಂದರೆ ಈ ಸದನದಲ್ಲಿ ಬಹಳಷ್ಟು ಸಲ ಈ ಒಂದು ತೆಲುಗು ಗಂಗಾ ಪ್ರಾಜೆಕ್ಟ್ ಬಗ್ಗೆ, ಇರಿಗೇಷನ್ ಪ್ರಾಜೆಕ್ಟ್ ಬಗ್ಗೆ ಬಹಳ ಹೆಚ್ಚಿನ ರೀತಿಯಲ್ಲಿ ಚರ್ಚೆಯಾಗಿದೆ. ಈಗ ಮತ್ತೆ ವಿಶೇಷವಾಗಿ ತೆಲುಗು ಗಂಗಾ ಪ್ರಾಜೆಕ್ಟ್‌ಗೆ ಸೆಂಟ್ರಲ್ ಗವರ್ನಮೆಂಟ್ ಕ್ಲಿಯರೆನ್ಸ್ ಕೊಟ್ಟಿರಬಹುದು ಎನ್ನುವ ರೀತಿಯಲ್ಲಿ ಎಲ್ಲಾ ಕಡೆ ಕರ್ನಾಟಕದ ಜನರಲ್ಲಿ, ಶಾಸಕರಲ್ಲಿ ಒಂದು ರೀತಿಯ ಕಳವಳ ಉಂಟಾಗಿದೆ. ಮಾನ್ಯ ದೇವೇಗೌಡರು ೧೯೮೨ರಿಂದಲೂ ಇರಿಗೇಷನ್

ಮಂತ್ರಿಗಳಾಗಿ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದಾರೆ. ನೀರಾವರಿ ವಿಚಾರದಲ್ಲಿ ಅವರು ೧೯೬೭ರಲ್ಲೂ ಕೂಡ ಈ ಒಂದು ರಾಜ್ಯದ ಶಾಸಕರಾಗಿ ಪ್ರತಿಪಾದನೆ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳಾಗಿದ್ದಂಥ ನಿಜಲಿಂಗಪ್ಪನವರ ಕಾಲದಲ್ಲಿ, ಜತ್ತಿಯವರ ಕಾಲದಲ್ಲಿ, ವೀರೇಂದ್ರಪಾಟೀಲ್‌ರವರ ಕಾಲದಲ್ಲಿ ಈ ಎಲ್ಲಾ ಕಾಲಗಳಲ್ಲಿಯೂ ಕೂಡ ಮಾನ್ಯ ದೇವೇಗೌಡರು ಸದಸ್ಯರಾಗಿ, ವಿರೋಧಪಕ್ಷದ ನಾಯಕರಾಗಿ ಪ್ರತಿಪಾದನೆ ಮಾಡಿದ್ದಾರೆ. ನಾನು ನೋಡಿದ ಹಾಗೆ ೧೯೬೭ರಿಂದ ಏನು ನಾನು ಶಾಸಕನಾಗಿ ಕೆಲಸ ಮಾಡುತ್ತಿದ್ದೇನೆ, ಆಗಲೂ ಕೂಡ ವಿರೋಧಪಕ್ಷದ ನಾಯಕರಾಗಿ ಅವರು ಕೆಲಸ ಮಾಡುವಂಥ ಸಂದರ್ಭದಲ್ಲಿ ಈ ಬಗ್ಗೆ ಪ್ರತಿಪಾದನೆ ಮಾಡಿದ್ದಾರೆ. ಮಾನ್ಯ ದೇವರಾಜ್ ಅರಸ್ ಅವರು ಮುಖ್ಯಮಂತ್ರಿಯಾಗಿದ್ದಾಗಲೂ ಕೂಡ ಬಹಳ ಹೆಚ್ಚಿನ ರೀತಿಯಲ್ಲಿ ಪರಿಣಾಮಕಾರಿಯಾದ ರೀತಿಯಲ್ಲಿ. ಕರ್ನಾಟಕ ರಾಜ್ಯದಲ್ಲಿರತಕ್ಕ ರೈತರ ಬಗ್ಗೆ ಕಾಳಜಿ ವಹಿಸಿ, ಮಾತನಾಡುತ್ತಾ ಈ ನೀರಾವರಿಯ ಬಗ್ಗೆ ಎಲ್ಲಿಯವರೆಗೆ ಹೆಚ್ಚಿನ ಆಸಕ್ತಿ ವಹಿಸುವುದಿಲ್ಲವೋ ಅಲ್ಲಿಯವರೆಗೆ ರೈತರ ಸಮಸ್ಯೆ ಕರ್ನಾಟಕ ರಾಜ್ಯದಲ್ಲಿರತಕ್ಕ ನಾಲ್ಕು ಕೋಟಿ ಜನರ ಸಮಸ್ಯೆ ಬಗೆಹರಿಯುವುದಿಲ್ಲ ಎಂದು ಪ್ರತಿಪಾದನೆ ಮಾಡಿದ್ದಾರೆ. ಅವರು ವಿರೋಧಪಕ್ಷದ ನಾಯಕರಾಗಿದ್ದಾಗಲೂ ಸಹ ಪ್ರತಿಪಾದನೆ ಮಾಡಿದ್ದಾರೆ. ತದನಂತರ ಮಾನ್ಯ ಬೊಮ್ಮಾಯಿಯವರು ಮುಖ್ಯಮಂತ್ರಿಗಳಾಗಿದ್ದಾರೆ. ಅವರು ಸಹ ವಿರೋಧಪಕ್ಷದ ನಾಯಕರಾಗಿ ಕೆಲಸ ಮಾಡಿದ್ದಾರೆ ಅವರೂ ಸಹ ಈ ಒಂದು ಇರಿಗೇಷನ್ ಸಮಸ್ಯೆ ಬಂದಾಗ ಅಷ್ಟೇ ರೀತಿಯಲ್ಲಿ ಪ್ರತಿಪಾದನೆ ಮಾಡಿದ್ದಾರೆ. ಮಾನ್ಯ ದೇವೇಗೌಡರಾದ ತಾವು ಸಹ ೧೯೬೭ರಿಂದ ಶಾಸಕರಾಗಿ ಕೆಲಸ ಮಾಡಿದ್ದೀರಿ, ಕರ್ನಾಟಕದ ಎಲ್ಲ ಜನರಿಗೂ ತಮ್ಮ ಗುರುತು ಇದೆ, ಜನರು ಮಾನ್ಯ ದೇವೇಗೌಡರಿಗೆ ನೀರಿನ ಸಮಸ್ಯೆ ಬಗ್ಗೆ ರೈತರ ಸಮಸ್ಯೆ ಬಗ್ಗೆ ಹೆಚ್ಚಿನ ಕಾಳಜಿ ಇದೆ, ಅವರು ಹೆಚ್ಚು ಕಾಳಜಿ ವಹಿಸಿ ಈ ಸಮಸ್ಯೆಗಳ ಬಗ್ಗೆ ಬಹಳ ಆಳವಾಗಿ ಅಧ್ಯಯನ ಮಾಡಿ ಅದರ ಬಗ್ಗೆ ಪರಿಹಾರ ಮಾಡತಕ್ಕ ರೀತಿಯಲ್ಲಿ ಕೆಲಸ ಮಾಡುತ್ತಾರೆಂದು ಹೇಳಿದ್ದಾರೆ. ತದನಂತರ ಈಗಿನ ಮುಖ್ಯಮಂತ್ರಿಗಳಾದ ಬೊಮ್ಮಾಯಿಯವರು ಏನಿದ್ದಾರೆ ಅವರು ಸಹ ವಿರೋಧಪಕ್ಷದ ನಾಯಕರಾಗಿ ಕೆಲಸ ನಿರ್ವಹಿಸಿದ್ದಾರೆ. ಮಾನ್ಯ ಗುಂಡೂರಾವ್ ಅವರು ಮುಖ್ಯಮಂತ್ರಿಯಾಗಿದ್ದಾಗ ಇಲ್ಲಿ ವಿರೋಧಪಕ್ಷದ ನಾಯಕರಾಗಿ ಪ್ರತಿಪಾದನೆಯನ್ನು ಮಾಡಿದ್ದಾರೆ. ಈಗ ತಾವು ೧೯೮೩ರಿಂದ ರೈತರ ಬಗ್ಗೆ ಕಾಳಜಿ ವಹಿಸಿ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದೀರಿ. ಕೃಷ್ಣಾ ಬೇಸಿನ್‌ನಲ್ಲಿರತಕ್ಕ ಪ್ರಾಜೆಕ್ಟ್ ಬಗ್ಗೆಯಾಗಲಿ, ಕಾವೇರಿ ಬೇಸಿನ್‌ನಲ್ಲಿರತಕ್ಕ ಪ್ರಾಜೆಕ್ಟ್ ಬಗ್ಗೆಯಾಗಲಿ ಈ ಎರಡೂ ಸಹ ಕರ್ನಾಟಕ ಜನರ ಜೀವನದ ಕನಸಾಗಿದೆ ಹಾಗೂ ಜೀವಾಳವಾಗಿದೆ. ಅವುಗಳ ಬಗ್ಗೆ ತಾವು ಎಷ್ಟು ಕಾಳಜಿ ವಹಿಸಿದ್ದೀರಿ. ಅವುಗಳ ಕೆಲಸಕಾರ್ಯ ಮಾಡತಕ್ಕ ಜವಾಬ್ದಾರಿಯನ್ನು ಆಕಸ್ಮಿಕವಾಗಿ ದೈವವಶಾತ್ ೧೯೮೩ರಿಂದ ತಮಗೆ ಜನರು ಕೊಟ್ಟಿದ್ದಾರೆ. ೧೯೮೩ರಿಂದ ಇಲ್ಲಿಯವರೆಗೆ ಅಲ್ಪಸ್ವಲ್ಪ ಕಾಲ ತಾವು ತಮ್ಮ ಪಕ್ಷದ ಅಧ್ಯಕ್ಷರಾಗಿ ಮೊದಲು ಆರು ತಿಂಗಳುಗಳ ಕಾಲ ಹೋಗಿರಬಹುದು, ಮೊನ್ನೆ ಎರಡು ಮೂರು ತಿಂಗಳುಗಳ ಕಾಲ ಹೋಗಿರಬಹುದು: ಇನ್ನುಳಿದಂತೆ ಒಟ್ಟು ಏಳು ವರ್ಷಗಳ ಕಾಲ ನೀರಾವರಿ ಇಲಾಖೆಯ ಜವಾಬ್ದಾರಿ ನಿಮಗೆ ಸಿಕ್ಕಿದೆ. ಜನರೂ ಸಹ ತಮ್ಮಿಂದ ಅಷ್ಟೇ ನಿರೀಕ್ಷಣೆಯನ್ನು ಮಾಡುತ್ತಿದ್ದಾರೆ. ೧೯೬೭ರಿಂದ ಶಾಸಕರಾಗಿ, ವಿರೋಧಪಕ್ಷದ ನಾಯಕರಾಗಿ ಈ ಬಗ್ಗೆ ಏನು ಪ್ರತಿಪಾದನೆ ಮಾಡಿದ್ದಾರೆ. ಅಂತಹವರ ಕೈಯಲ್ಲಿ ಜವಾಬ್ದಾರಿ ಸಿಕ್ಕಿದ ಮೇಲೆ ಎಷ್ಟು ಜವಾಬ್ದಾರಿ ವಹಿಸಿ ಕೆಲಸ ಕಾರ್ಯ ಮಾಡಿದ್ದಾರೆಂದು ಜನರು ನೋಡುತ್ತಿದ್ದಾರೆ. ಇವೊತ್ತು ಜನರು ಕೃಷ್ಣಾ ಮೇಲ್ದಂಡೆ ಪ್ರಾಜೆಕ್ಟ್‌ಗಳು ಎಂದು ಮುಗಿಯುತ್ತದೆ. ಎಷ್ಟರಮಟ್ಟಿಗೆ ಕಾರ್ಯ ಆಗಿದೆ ಎಂದು ಪರೀಕ್ಷೆ ಮಾಡುತ್ತಿದ್ದಾರೆ. ಸುಮಾರು ಏಳು ವರ್ಷಗಳ ಕಾಲ ನೀರಾವರಿಯ ಜವಾಬ್ದಾರಿ ತಮ್ಮ ಕಡೆಗೆ ಬಂದಿದೆ. ತಾವು ಪ್ರತಿಯೊಂದು ಬಡ್ಜೆಟ್‌ನಲ್ಲಿಯೂ ಇದರ ಬಗ್ಗೆ ಆದ್ಯತೆ ಕೊಡಬೇಕೆಂದು ಹೇಳಿದ್ದೀರಿ. ಮೊನ್ನೆ ತಮಗೂ ಹೆಗಡೆಯವರಗೂ ರಾಜಕೀಯ ವ್ಯತ್ಯಾಸ ಆದಮೇಲೆ ಅದರ ಬಗ್ಗೆ ರಾಜೀನಾಮೆ ಕೊಟ್ಟಿರಿ ಎಂದು ನಾವು ಭಾವಿಸಿದ್ದೆವು.

ಆದರೆ ಮಾನ್ಯ ಮಂತ್ರಿಗಳು ಏನು ಹೇಳಿದರೆಂದರೆ, ನಮ್ಮಲ್ಲಿ ಗುಂಪುಗಾರಿಕೆ ಏನೂ ಇಲ್ಲ, ನೀರಾವರಿ ಸಮಸ್ಯೆಗಳ ಬಗ್ಗೆ ೩೦೦ ಕೋಟಿ ರೂಪಾಯಿಗಳಿಗೆ ಸರ್ಕಾರ ಆದ್ಯತೆಯನ್ನು ಕೊಡುತ್ತಿಲ್ಲ, ಹಣವನ್ನು ಒದಗಿಸುತ್ತಿಲ್ಲ, ನಾನು ಜನರಿಗೆ ಏನು ಆಶ್ವಾಸನೆಯನ್ನು ಕೊಟ್ಟಿದ್ದೇನೆ, ಅದಕ್ಕೆ ಈ ಸರ್ಕಾರವಾಗಲಿ ಮುಖ್ಯಮಂತ್ರಿಗಳಾಗಲಿ, ಈ ಮಂತ್ರಿಮಂಡಲವಾಗಲಿ ಪ್ರಸ್ತುತ ಪರಿಸ್ಥಿತಿಯಲ್ಲಿ ಕೆಲಸವನ್ನು ಮಾಡುವುದಕ್ಕೆ ಹಣವನ್ನು ಕೊಡುತ್ತಿಲ್ಲ. ಇವರಿಂದಾಗಿ ರೈತರ ಸಮಸ್ಯೆಗಳನ್ನು ನಿವಾರಣೆ ಮಾಡಲು ಸಾಧ್ಯ

ವಿಲ್ಲದೇ ಹೋದುದರಿಂದ ನಾನು ರಾಜೀನಾಮೆಯನ್ನು ಕೊಟ್ಟಿದ್ದೇನೆ ಎಂದು ಮಾನ್ಯ ದೇವೇಗೌಡರು ಹೇಳಿದರು. ಇದನ್ನು ನಾನು ಪತ್ರಿಕೆಯಲ್ಲಿ ಓದಿದ್ದೇನೆ. ತಾವು ಮಂಡ್ಯದಲ್ಲಿ ಏನು ಹೇಳಿದ್ದೀರೆಂದರೆ, ಈಗಿನ ಪ್ರಸ್ತುತ ಮುಖ್ಯಮಂತ್ರಿಗಳು ಏನಿದ್ದಾರೆ ಇವರು ಮಣ್ಣಿನ ಮಗ ಕರ್ನಾಟಕದ ರೈತರ ಬಗ್ಗೆ ಹೆಚ್ಚಿನ ಕಾಳಜಿಯನ್ನು ವಹಿಸಿದ್ದಾರೆ, ನನಗೆ ಆಶ್ವಾಸನೆಯನ್ನು ಕೊಟ್ಟಿದ್ದಾರೆ ಮತ್ತು ನೀರಾವರಿಯ ಬಗ್ಗೆ ಹೆಚ್ಚಿನ ಆದ್ಯತೆ ಕೊಡುತ್ತೇನೆಂದು ನನಗೆ ಅವರು ಭರವಸೆಯನ್ನು ಕೊಟ್ಟ ಮೇಲೆಯೇ ನಾನು ಮಂತ್ರಿಮಂಡಲದಲ್ಲಿ ಸೇರ್ಪಡೆಯಾಗಿರುವುದು ಎಂದು ಹೇಳಿದ್ದೀರಿ : ಮತ್ತು ಮಾನ್ಯ ಬೊಮ್ಮಾಯಿಯವರೂ ಕೂಡ ಹೇಳಿದ್ದಾರೆ ಅವರು ಮುಖ್ಯಮಂತ್ರಿಗಳಾದ ಮೇಲೆ ಮೊದಲನೇ ಸಾರಿ ಪ್ರೆಸ್ ಕಾನ್‌ಫರೆನ್ಸ್‌ನಲ್ಲಿ ಅಟೆಂಡ್ ಮಾಡತಕ್ಕ ಕಾಲದಲ್ಲಿ ಕರ್ನಾಟಕ ರಾಜ್ಯದಲ್ಲಿ ಹಾಲಿ ಇರತಕ್ಕ ಇರಿಗೇಷನ್ ಪ್ರಾಜೆಕ್ಟ್‌ಗಳಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡುತ್ತೇನೆಂದು ಹೇಳಿದ್ದಾರೆ. ಇವತ್ತು ಏನಾಗಿದೆ ಎಂದರೆ ಪ್ರಧಾನ ಮಂತ್ರಿಗಳ ಹತ್ತಿರಕ್ಕೆ ಡೆಲಿಗೇಷನ್ ಹೋಗತಕ್ಕ ಕಾಲದಲ್ಲಿ ೨೦೦೦ನೇ ವರ್ಷಕ್ಕೆ ಈ ಬಚಾವತ್ ಆಯೋಗದ ತೀರ್ಪು ಏನಿದೆ ಇದು ಮುಗಿಯುತ್ತದೆ. ಇದಾದ ಮೇಲೆ ನಮಗೆ ಹೆಚ್ಚಿನ ರೀತಿಯಲ್ಲಿ ಅವಧಿಯನ್ನು ಕೊಡಬೇಕೆಂದು ಕೇಳಿಕೊಂಡಾಗ ಮೊನ್ನೆ ಕೂಡ ತಾವು ಶಾಸಕರ ಸಭೆಯನ್ನು ಕರೆದಾಗ ಹೇಳಿದಿರಿ, ಆಂಧ್ರ ಪ್ರದೇಶದವರು ತಮ್ಮ ಪ್ರಾಜೆಕ್ಟ್‌ನ್ನು ತೀವ್ರವಾಗಿ ಪೂರ್ತಿಗೊಳಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ : ಅದೇ ರೀತಿ ಕರ್ನಾಟಕದವರೂ ಕೂಡ ನಮ್ಮ ಪ್ರಾಜೆಕ್ಟ್‌ಗಳನ್ನು ತೀವ್ರವಾಗಿ ಮುಗಿಸುತ್ತೇವೆ : ಇದಕ್ಕಾಗಿ ಕೊಟ್ಟಿರತಕ್ಕ ಎಲ್ಲ ಹಣವನ್ನೂ ನಾವು ಮುಗಿಸುತ್ತೇವೆಂದು ತಾವು ಸ್ಪಷ್ಟವಾಗಿ ನಮಗೆ ಹೇಳಬೇಕಾಗುತ್ತದೆ. ನಾವು ದೆಹಲಿಗೆ ಡೆಲಿಗೇಷನ್ ಹೋದಾಗ ಈ ಕೆಲಸಗಳಿಗೆ ಯಾವ ರೀತಿ ಆಸಕ್ತಿ ವಹಿಸಿ ಹೆಚ್ಚಿನ ಹಣವನ್ನು ಒದಗಿಸಿಕೊಡುತ್ತೀರೆಂಬುದನ್ನೂ ಕೂಡ ತಾವು ಹೇಳಬೇಕಾಗುತ್ತದೆ. ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ನಿಂದ ನನ್ನ ಕ್ಷೇತ್ರದಲ್ಲಿ ೧.೫ ಲಕ್ಷ ಎಕರೆ ಪ್ರದೇಶಕ್ಕೆ ನೀರು ಸಿಕ್ಕುತ್ತದೆ. ಆದರೆ ಇದರ ಕಾರ್ಯಪ್ರಗತಿ ಹೋಗುತ್ತಿರುವುದನ್ನು ನೋಡಿದರೆ ಇನ್ನು ೫೦ ವರ್ಷಗಳಾದರೂ ಕೂಡ ಈ ಅಪ್ಪರ್ ಕೃಷ್ಣಾ ಯೋಜನೆ ಮುಗಿಯುವುದಿಲ್ಲವೆಂದು ನನಗನ್ನಿಸುತ್ತದೆ. ಇವತ್ತು ಬಜೆಟ್‌ನಲ್ಲಿ ಏನು ೩೦೦ ಕೋಟಿ ರೂಪಾಯಿಗಳನ್ನು ತಾವು ಒದಗಿಸಿದ್ದೀರಿ ತಾವು ಹೇಳಿದ ಮೇಲೆ ಈ ನಮ್ಮ ಹೌಸ್‌ನ ರೆಸಲ್ಯೂಷನ್ ಕೂಡ ಆಗಿದೆ : ಮಾನ್ಯ ಕಡಪಟ್ಟಿಯವರೂ ಇಲ್ಲಿ ಇದ್ದಾರೆ. ಇದನ್ನು ತಾವು ಗಮನದಲ್ಲಿಡಬೇಕು. ೧೯೮೭-೮೮ರ ಸಾಲಿಗೆ ತಾವು ಎಷ್ಟು ಹಣವನ್ನು ನಿಗದಿ ಮಾಡಿದ್ದೀರಿ ? ೮೦ ಕೋಟಿ ರೂಪಾಯಿಗಳನ್ನು ಬಡ್ಜೆಟ್‌ನಲ್ಲಿ ಪ್ರೊವೈಡ್ ಮಾಡಿ ೨೦ ಕೋಟಿ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದೀರಿ. ಅದರಲ್ಲಿ ಎಷ್ಟು ಹಣ ಖರ್ಚಾಗಿದೆ ಎಂಬುದು ಗೊತ್ತಿಲ್ಲ. ಬಜೆಟ್‌ನಲ್ಲಿ ತಾವು ಎಷ್ಟು ಹಣವನ್ನು ಪ್ರೊವೈಡ್ ಮಾಡಿದ್ದೀರಿ ಅಷ್ಟೂ ಹಣವನ್ನೂ ನಿಮ್ಮ ಅಧಿಕಾರಿಗಳು ಪ್ರಾಮಾಣಿಕವಾಗಿ ಖರ್ಚು ಮಾಡಿಲ್ಲ. ತಾವು ಕೊಟ್ಟ ಹಣವನ್ನೆಲ್ಲಾ ಅಲ್ಲಿಗೆ ಖರ್ಚು ಮಾಡಿದ್ದರೆ ಇಷ್ಟು ಹೊತ್ತಿಗೆ ಆ ಇರಿಗೇಷನ್ ಪ್ರಾಜೆಕ್ಟ್ ಕೆಲಸ ಚೆನ್ನಾಗಿ ಆಗುತ್ತಿತ್ತು ಆದರೆ ಆಗಲಿಲ್ಲ. ಇದರ ಬಗ್ಗೆ ತಾವು ನಿರ್ದಿಷ್ಟವಾದ ಉತ್ತರವನ್ನು ಸದನಕ್ಕೆ ಕೊಡಬೇಕು. ಮೊನ್ನೆ ಕಾವೇರಿ ನೀರಿನ ಹಂಚಿಕೆ ವಿಚಾರದಲ್ಲಿ ಮಾನ್ಯ ವೈ. ಕೆ. ರಾಮಯ್ಯನವರು ಪ್ರಸ್ತಾಪ ಮಾಡಿದಾಗ ಮಾನ್ಯ ಬೊಮ್ಮಾಯಿಯವರು ಹೇಳಿದರು, ನಾವು ಎಲ್ಲ ಪಕ್ಷಗಳ ಸದಸ್ಯರೂ ಮಾನ್ಯ ಪ್ರಧಾನ ಮಂತ್ರಿಗಳ ಬಳಿಗೆ ಡೆಲಿಗೇಷನ್ ಹೋಗಿ ಇದಕ್ಕೆ ಹಣವನ್ನು ಕೊಡಬೇಕೆಂದು ಕೇಳಿಕೊಳ್ಳೋಣವೆಂದು ಕೂಡ ತಾವು ಹೇಳಿದ್ದೀರಿ. ಸ್ವಾಮಿ, ನಾನು ತಮಗೆ ಹೇಳುತ್ತೇನೆ, ಇವತ್ತು ಕರ್ನಾಟಕ ರಾಜ್ಯದಲ್ಲಿ ಮಾಜಿ ಮುಖ್ಯ ಮಂತ್ರಿಗಳ ನಿಲುವೇ ಒಂದು ರೀತಿ ಇದೆ. ಮಾನ್ಯ ಬೊಮ್ಮಾಯಿರವರ ನಿಲುವೇ ಒಂದು ರೀತಿ ಇದೆ. ಮಾನ್ಯ ದೇವೇಗೌಡರವರ ನಿಲುವೇ ಒಂದು ರೀತಿ ಇದೆಯೆಂದು ನಮಗೆ ಸಂಶಯ ಬರುತ್ತದೆ. ಮಾನ್ಯ ಮೊಯ್ಲಿಯವರೂ ಕೂಡ ವಿರೋಧ ಪಕ್ಷದ ನಾಯಕರಾಗಿ ಪ್ರಸ್ತಾಪವನ್ನು ಮಾಡಿದ್ದಾರೆ. ಮಾನ್ಯ ರಾಮಕೃಷ್ಣ ಹೆಗಡೆಯವರು ಈಗ ಈ ಸದನದಲ್ಲಿಲ್ಲ. ಆದ್ದರಿಂದ ನಾನು ಅವರ ವಿಚಾರವನ್ನು ಏನೂ ಹೇಳುವುದಕ್ಕೆ ಹೋಗುವುದಿಲ್ಲ. ಹೆಚ್ಚಾಗಿ ಹೇಳುವ ಪ್ರವೃತ್ತಿ ನನಗಿಲ್ಲ ಅವರು ಕಳೆದ ೩-೪ ವರ್ಷಗಳ ಹಿಂದೆ ಎನ್. ಟಿ. ರಾಮರಾವ್‌ರವರ ಜೊತೆ ಮಾತನಾಡಿದ್ದು, ಹೇಳಿಕೆಗಳನ್ನು ಕೊಟ್ಟಿದ್ದು, ಇದೆಲ್ಲವೂ ಪತ್ರಿಕೆಗಳಲ್ಲಿ ಬಂದಿವೆ. ಮೊನ್ನೆ ಬೀದರ್‌ನ ಘಟನೆಯನ್ನು ನೋಡುವುದಕ್ಕೆ ಮಾನ್ಯ ಬೊಮ್ಮಾಯಿಯವರು ಹೆಗಡೆಯವರ ಜೊತೆ ಹೋಗಿದ್ದಾಗ ಅವರು ಹೈದರಾಬಾದ್‌ನಲ್ಲಿ ಒಂದು ಪತ್ರಿಕಾ ಹೇಳಿಕೆಯನ್ನು ಕೊಟ್ಟಿದ್ದಾರೆ. ತಾವು ನಮಗೆ ಏನು ಒಂದು ಬುಕ್ಕನ್ನು ಇಲ್ಲಿ ಕೊಟ್ಟಿದ್ದೀರಿ, ಇದರಲ್ಲಿ ಮಾನ್ಯ ಮುಖ್ಯಮಂತ್ರಿಗಳು ೨೯ನೇ ತಾರೀಖು ಸೆಪ್ಟೆಂಬರ್‌ನಲ್ಲಿ ಮಾನ್ಯ ಪ್ರಧಾನ ಮಂತ್ರಿಗಳಿಗೆ ಬರೆದಿರತಕ್ಕ ಒಂದು ಪತ್ರದ

ವಿಚಾರವನ್ನು ತಿಳಿಸಿದ್ದೀರಿ. ಅದರಲ್ಲಿ ಏನು ಹೇಳಿದ್ದಾರೆಂದರೆ, ತೆಲುಗು-ಗಂಗಾ ಪ್ರಾಜೆಕ್ಟ್ "environmental clearance by the Government of India." ಇದರ ಬಗ್ಗೆ ನಾವು ಡೆಲಿಗೇಷನ್ ಬರುತ್ತಿದ್ದೇವೆ. ಆದ್ದರಿಂದ ಇದಕ್ಕೆ ತಾವು ಕ್ಲಿಯರನ್ಸ್ ಕೊಡಬಾರದೆಂದು ಮಾನ್ಯ ಪ್ರಧಾನ ಮಂತ್ರಿಗಳಿಗೆ ಒಂದು ಪತ್ರವನ್ನು ಬರೆದಿದ್ದಾರೆ. ಇದು ಪತ್ರಿಕೆಯಲ್ಲೂ ಬಂದಿದೆ,

ಈ ರೀತಿಯಾಗಿ ಒಂದು ಹೇಳಿಕೆಯನ್ನು ಕೊಡಲು ಒಂದು ಪ್ರೆಸ್ ಕಾನ್‌ಫರೆನ್ಸ್ ಕರೆದಿದ್ದರು. ಅದರ ಬಗ್ಗೆ ೩೦ನೇ ತಾರೀಖು ನಾನು ಗುಲ್ಬರ್ಗಾದಿಂದ ಹೈದರಾಬಾದ್‌ಗೆ ಹೋದಾಗ ನ್ಯೂಸ್ ಟೈಮ್ಸ್ ಎಂಬ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ರಾಮೋಜಿರಾವ್ ಈ ನಾಡ ಪತ್ರಿಕೆಯಲ್ಲಿ ಪ್ರಕಟವಾಗಿದೆ. ೨ನೇ ತಾರೀಖು ಮಾನ್ಯ ಬೊಮ್ಮಾಯಿಯವರು ಏನು ಹೇಳಿಕೆಯನ್ನು ಕೊಟ್ಟಿದ್ದಾರೆ, ಆ ಹೇಳಿಕೆಯ ಮೇರೆಗೆ ಅಲ್ಲಿರತಕ್ಕಂಥ ಆಫೀಸರುಗಳು ಹೆಡ್ಡಿಂಗ್ಸ್‌ನಲ್ಲಿ ಕೊಟ್ಟಿದ್ದಾರೆ. "Double Talk" is the heading.

"The double talk of Karnataka Chief Minister S. R. Bommai on the Telugu Ganga issue has come as a big surprise to official circles here. It was only last Friday that Mr. Bommai who had come here along with Mr. RamaKrishna Hegde, had told newsmen that Telugu Ganga issue would be sorted out bilaterally by Karnataka and Andhra Pradesh without interference by the Central Government. Answering supplementaries, he had said that he was ready to take the initiative in this regard if an agreement could be reached based on the cooperation between the two opposition ruled States without Central interference. It would be another feather in the cap of opposition unity and the National Front, Mr. Bommai had stated here. He had reiterated that the problem was like a quarrel between two brothers in a family. It was a very small issue in the national context. The 1978 Inter-State Agreement was meant for drinking water supply to Madras, It could be modified by any other agreement, Mr. Bommai had stated. However, in his letter to the Prime Minister which was released to the Press in Bangalore on Thusrday, Mr. Bommai has asked the Central Goverment to prevent Andhra Pradesh from going ahead with the implementation of the project, Mr. Bommai had also protested against the environmental clearance accorded to the Telugu Ganga Project by the Central Government and said that he would have discussion with the Prime Minister on the present Karnataka case. Official sources here felt that Mr. Bommai had virtually gone back on his statement made in Hyderabad. He was now asking for Central interference and did not seem to be ready for bilateral discussion with Andhra Pradesh. As the news of Mr. Bommai's version of Telugu Ganga reached here, a senior Government official

refused to comment on the Karnataka Chief Minister's statement on Thursday saying that "we will reply to the Karnataka Chief Minister at appropriate time at the appropriate level."

ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಇದು ಕೂಡ ಆಂಧ್ರ ಪ್ರದೇಶದಲ್ಲಿ ಒಂದು ದೊಡ್ಡ ಪತ್ರಿಕೆಯಾದ ನ್ಯೂಸ್ ಟೈಮ್ ಎಂಬುದರಲ್ಲಿ ಬಂದಿದೆ, ಅದು ಯಾವ ಕಾಂಟೆಸ್ಟ್‌ ಮೇಲೆ ಹೇಳಿದರೂ ಗೊತ್ತಿಲ್ಲ. ಈರೀತಿಯಾಗಿ ಮಾಜಿ ಮುಖ್ಯಮಂತ್ರಿಗಳು ಹೋದಾಗ ಆಂಧ್ರ ಪ್ರದೇಶದಲ್ಲಿ ಹೇಳಿದ್ದಾರೆ. ಅದಕ್ಕೆ ನಾನು ಹೇಳುವುದೇನೆಂದರೆ ಈ ಸಮಸ್ಯೆಗಳನ್ನು ಬಗೆಹರಿಸಿಕೊಂಡು ಕರ್ನಾಟಕದ ಮುಖ್ಯಮಂತ್ರಿಗಳಾಗಿ, ನೀರಾವರಿ ಮಂತ್ರಿಗಳಾಗಿ ನಿರ್ದಿಷ್ಟವಾದ ನಿಲುವನ್ನು ತೆಗೆದುಕೊಳ್ಳಬೇಕು. ಯಾರೇ ಆಗಲಿ ಕರ್ನಾಟಕದ ಬಗ್ಗೆ ಹೆಚ್ಚಿನ ರೀತಿಯಲ್ಲಿ ಪ್ರತಿಪಾದನೆ ಮಾಡುತ್ತಾರೆ ಎನ್ನುವ ಆಶಯವನ್ನು ಮೂಡಿಸಬೇಕು. ಇವತ್ತು ಮಾಜಿ ಮುಖ್ಯಮಂತ್ರಿಗಳಾಗಿರುವವರು ಆವತ್ತಿನದಿವಸ ಮುಖ್ಯಮಂತ್ರಿಗಳಾಗಿದ್ದು ಹೆಚ್ಚಿನ ರೀತಿಯಲ್ಲಿ ಪ್ರಧಾನಮಂತ್ರಿಗಳನ್ನು ಮತ್ತು ಮಾನ್ಯ ಶಂಕರಾನಂದರವರ ಜೊತೆಯಲ್ಲಿ ನಡೆದ ಮೀಟಿಂಗ್‌ಗಳಲ್ಲಿ ಭಾಗವಹಿಸಿದ್ದರೂ ತಮ್ಮ ನಿಲುವನ್ನು ಸರಿಯಾಗಿ ಪ್ರತಿಪಾದನೆ ಮಾಡುವುದಕ್ಕಾಗಲಿಲ್ಲ. ಆದ್ದರಿಂದ ಈವತ್ತಿನದಿವಸ ಕರ್ನಾಟಕ ಜನರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಕೃಷ್ಣಾ ಪ್ರಾಜೆಕ್ಟ್, ಮತ್ತು ಬೇರೆ ಬೇರೆ ಪ್ರಾಜೆಕ್ಟ್‌ಗಳ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ವಹಿಸಬೇಕು. ಎಷ್ಟೆಷ್ಟು ಹಣವನ್ನು ಒದಗಿಸಿ ಖರ್ಚುಮಾಡಲು ಸಾಧ್ಯವಿರುತ್ತದೆ ಎಂಬುದರ ಬಗ್ಗೆ ಈಗಾಗಲೇ ಮಾನ್ಯ ಮೊಯಿಲಿಯವರು ಮತ್ತು ಮಾನ್ಯ ಖರ್ಗೆಯವರ ಹೇಳಿದ್ದಾರೆ. ತಾವೂ ಕೂಡ ಅವರು ಹೇಳಿದ ಪ್ರಕಾರ ನಿರ್ದಿಷ್ಟವಾಗಿ ಏನು ಮಾಡಿದ್ದೀರಿ, ಎಷ್ಟರಮಟ್ಟಿಗೆ ಮಾಡುವುದಕ್ಕೆ ಹೊರಟಿದ್ದೀರಿ ಸ್ಪಷ್ಟವಾಗಿ ಈ ಸದನಕ್ಕೆ ತಿಳಿಸಬೇಕೆಂದು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ತಮ್ಮ ನಿಲುವಿನ ಬಗ್ಗೆ ಒಂದು ಭಾಗಕ್ಕೆ ಹೇಳಿ ಇನ್ನೊಂದು ಭಾಗಕ್ಕೆ ಹೇಳದ್ದಿದರೆ ಒಂದು ಬಗೆಯ ಅನುಮಾನಕ್ಕೆ ಕಾರಣವಾಗುತ್ತದೆಂದು ಹೇಳಿ ಇದರ ಬಗ್ಗೆ ಸ್ಪಷ್ಟವಾಗಿ ಉತ್ತರವನ್ನು ಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

೩-೩೦ ಪಿ.ಎಂ.

† ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಅಧ್ಯಕ್ಷರೆ, ತೆಲುಗು ಗಂಗಾ ಯೋಜನೆ ಬಗ್ಗೆ ಇಲ್ಲಿ ಚರ್ಚೆಯಾಗುತ್ತಿರುವುದು ನೋಡಿದರೆ, ಈ ತೆಲುಗು ಗಂಗಾ ಯೋಜನೆ ಬಗ್ಗೆ ನೂರಾರು ಬಾರಿ ನಮ್ಮ ಬಾಯಿಂದ ಬಂದಿರುವುದರಿಂದ ಇದು ಕರ್ನಾಟಕದ್ದೇ ಅಥವಾ ಆಂಧ್ರದ್ದೇ ಎಂದು ಅನುಮಾನ ರಾಜ್ಯದ ಜನತೆಗೆ ಬರುತ್ತಿದೆ. ತೆಲುಗು ಗಂಗಾ ಯೋಜನೆಗೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ಅನುಮತಿ ಪಡೆಯುವ ಪ್ರಯತ್ನವನ್ನು ಆಂಧ್ರ ಸರ್ಕಾರ ಮಾಡುತ್ತಿದೆ. ಅದಕ್ಕೆ ಯಾವ ಕಾರಣಕ್ಕೂ ಅನುಮತಿ ಸಿಗಬಾರದು, ಅನುಮತಿ ಸಿಕ್ಕಿದರೆ ಕರ್ನಾಟಕ ರಾಜ್ಯಕ್ಕೆ ದ್ರೋಹ ಮಾಡಿದಂತಾಗುತ್ತದೆ, ಅಲ್ಲಿನ ರೈತರಿಗೆ ಅನ್ಯಾಯವಾಗುತ್ತದೆಂದು ಪ್ರತಿಭಟನೆ ಮಾಡುವುದಕ್ಕೋಸ್ಕರ ಮತ್ತು ನಮ್ಮ ಸರ್ಕಾರದ ನಿಲುವು ಏನಿದೆ ಅದನ್ನು ತಿಳಿಸುವ ಪ್ರಯತ್ನ ಮತ್ತು ಸದನದ ವಿರೋಧ ಪಕ್ಷದ ನಾಯಕರು ಮತ್ತು ಆಡಳಿತ ಪಕ್ಷದ ಮುಖಂಡರು ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ ಯಾವುದೇ ಕಾರಣಕ್ಕೂ ಅನುಮತಿ ಕೊಡಬಾರದೆಂದು ಹೇಳುವ ಸಲುವಾಗಿ ಇಲ್ಲಿ ಚರ್ಚೆ ಪ್ರಾರಂಭವಾಗಿದೆ. ಇಲ್ಲಿ ಪ್ರಶ್ನೆ ಇರತಕ್ಕದ್ದು ದೇವೇಗೌಡರು ಮತ್ತೊಮ್ಮೆ ನೀರಾವರಿ ಸಚಿವರಾಗಿ ಬಾರದೆ ಇದ್ದರೆ ಕೊನೆಯ ದಿವಸ ಇಷ್ಟೊಂದು ಮಹತ್ವದ ಚರ್ಚೆ ಪ್ರಾರಂಭವಾಗುತ್ತಿತ್ತೋ ಅಥವಾ ಇಲ್ಲವೋ ಎಂದು ಅನುಮಾನವಾಗಿದೆ, ದೇವೇಗೌಡರು ಯಾವುದೇ ಕಾರಣಕ್ಕೂ ನೀರಾವರಿ ಯೋಜನೆಗಳ ಕೆಲಸ ನಡೆಯಬೇಕು, ರಾಜ್ಯದ ಜನತೆಗೆ ಅನ್ಯಾಯವಾಗುವುದಕ್ಕೆ ಬಿಡುವುದಿಲ್ಲ, ತೆಲುಗು ಗಂಗಾ ಆಗುವುದಕ್ಕೆ ಬಿಡುವುದಿಲ್ಲವೆಂದು ಬರೀ ಮಾತನಾಡುವುದರಿಂದ ರಾಜ್ಯದ ರೈತರ ಸಮಸ್ಯೆಗಳಾಗಲಿ ನಿಮ್ಮ ಉದ್ದೇಶಗಳಾಗಲಿ ಸಫಲವಾಗುವುದಿಲ್ಲ. ನಾನು ದೇವೇಗೌಡರನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ, ಏನೆಂದರೆ, ಈ ಕಡೆ ಇದ್ದು ಹೋರಾಟ ಮಾಡಿದ ನೀವು ಅಧಿಕಾರಕ್ಕೆ ಬಂದನಂತರ ಸ್ವತಂತ್ರವಾಗಿ ನಿಮ್ಮ ಇಲಾಖೆಯಲ್ಲಿ ತೀರ್ಮಾನ ತೆಗೆದುಕೊಳ್ಳತಕ್ಕ ಶಕ್ತಿ ನಿಮಗೆ ಇತ್ತು, ಮುಖ್ಯ ಮಂತ್ರಿಗಳಾಗಿ ಹೆಗಡೆ ಇರಬಹುದು ಅಥವಾ ಬೊಮ್ಮಾಯಿ ಇರಬಹುದು, ಇಂಥ ಕೆಲಸ ಆಗಬೇಕೆಂದಾಗ ಆಗುವುದಿಲ್ಲವೆಂದು

ಆಗುವುದಿಲ್ಲವೆಂದು ಹೇಳುವ ಧೈರ್ಯ ಅವರಿಗೆ ಇರಲಿಲ್ಲ. ಇಂಥ ಸಂದರ್ಭದಲ್ಲಿ ೬–೭ ವರ್ಷಗಳ ಅವಧಿಯಲ್ಲಿ ನೀರಾವರಿ ಯೋಜನೆಗಳಿಗೆ ನೀವು ಖರ್ಚು ಮಾಡಿದ ಹಣ ಎಷ್ಟು ? ಕೃಷ್ಣಾ ಬೇಸಿನ್‌ನಲ್ಲಿ ನಾವು ಮೇಲೆ ಇದ್ದೇವೆ, ಆಂಧ್ರ ಕೆಳಗಡೆ ಇದೆ. ಬಚಾವತ್ ಆಯೋಗದ ಪ್ರಕಾರ ೮೦೦ ಟಿ.ಎಂ.ಸಿ. ನೀರನ್ನು ಅವರು ಉಪಯೋಗಿಸಿಕೊಂಡಿದ್ದಾರೆ. ೨೦೦೦ ಎಡಿ. ನಂತರ ಏನು ನೀರನ್ನು ಅವರು ಉಪಯೋಗಿಸಿಕೊಳ್ಳಬೇಕಾಗಿತ್ತು ಅದನ್ನು ಈಗಲೇ ಉಪಯೋಗಿಸಿಕೊಂಡಿದ್ದಾರೆ. ಅದನ್ನು ವಾಪಸ್ಸು ತೆಗೆದುಕೊಳ್ಳುವುದು ಎಷ್ಟರಮಟ್ಟಿಗೆ ಸಾಧ್ಯವಾಗುತ್ತದೆಂಬುದನ್ನು ನೋಡಬೇಕಾಗುತ್ತದೆ. ಮುಂದಿನ ಪೀಳಿಗೆಗೆ ನಮ್ಮ ರಾಜ್ಯದಲ್ಲಿ ಜನತಾ ಸರ್ಕಾರವಿದ್ದಾಗೂ, ಕೇಂದ್ರ ಸರ್ಕಾರಕ್ಕೆ ಅನುಮತಿ ಕೊಡಬೇಡಿ ಎಂದು ಹೋರಾಟ ಮಾಡಿದೆವು ಎಂದು ಹೇಳಬೇಕೇ ಹೊರತು ಅದಕ್ಕಿಂತ ಹೆಚ್ಚಿಗೆ ಸಾಧನೆ ಆಗುತ್ತದೆಂದು ನಾನಂತೂ ಭಾವಿಸುವುದಿಲ್ಲ, ತೆಲುಗು ಗಂಗಾ ಯೋಜನೆಯನ್ನು ತೆಗೆದುಕೊಂಡು ೧೨೦ ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಳ್ಳುವ ಯೋಜನೆಯನ್ನು ಅವರು ಏನು ಕೈಗೆತ್ತಿಕೊಂಡಿದ್ದಾರೆ ಅದಕ್ಕೆ ಕೇಂದ್ರ ಸರ್ಕಾರ ಈಗಾಗಲೇ ಅನುಮತಿ ಕೊಟ್ಟಿದೆ. ಅನುಮತಿ ಕೊಡುತ್ತದೋ ಎಂದು ನೀವು ಆಲೋಚನೆ ಮಾಡುತ್ತಿದ್ದರೆ ಆಗಲೇ ಅನುಮತಿ ಕೊಟ್ಟು, ಯೋಜನೆ ಪ್ರಾರಂಭವಾಗಿದೆ. ನಮಗೆ ಕೊಟ್ಟ ೭೦೦, ಟಿ.ಎಂ.ಸಿ. ನೀರಿನಲ್ಲಿ ಅರ್ಧ ಭಾಗವನ್ನು ಕೂಡ ಉಪಯೋಗಿಸಿಕೊಳ್ಳುವುದಕ್ಕೆ ನಮಗೆ ಆಗಲಿಲ್ಲ. ರಾಜ್ಯದ ಜನ ಸ್ವಾವಲಂಬಿಗಳಾಗಿ ಸ್ವತಂತ್ರವಾಗಿ ಏನು ನಿದಬೇಕಾಗಿತ್ತೊ ಅದನ್ನು ನೋಡದೆ ಏನು ಕಾರ್ಯಕ್ರಮಗಳನ್ನು ರೂಪಿಸಿದಿರಿ ಆ ಸಂದರ್ಭದಲ್ಲಿ ಅನೇಕ ಹಿರಿಯರು ಪ್ರತಿಭಟನೆ ಮಾಡಿದಾಗ ಆಡಳಿತ ಪಕ್ಷದ ಕಡೆಯಿಂದ ಬಂದ ಮಾತು ಏನು ? ನಾವು ತೆಗೆದುಕೊಂಡ ಕಾರ್ಯಕ್ರಮ ಆಗಬೇಕು. ಆ ರೀತಿ ನೀರಾವರಿ ಯೋಜನೆಗೆ ನೀರು ಬಿಡುವುದಿಲ್ಲವೆಂದು ಮಾತನಾಡಿದರು. ವಿರೋಧ ಪಕ್ಷದ ನಾಯಕರು ಮತ್ತು ನಿಮ್ಮವರು ಕಳಕಳಿ ಬಿದ್ದವರು ಇರಬಹುದು. ಹೆಗಡೆಯವರನ್ನು ನೂರು ಬಾರಿ ವಿನಂತಿಸಿಕೊಂಡೆ, ಹಣಕಾಸಿನ ಪರಿಸ್ಥಿತಿ ಸರಿಯಿಲ್ಲ. ಯಾವದಕ್ಕೆ ಆದ್ಯತೆ ಕೊಡಬೇಕೋ ಅದಕ್ಕೆ ಕೊಡುತ್ತೇವೆ, ಇದರ ಬಗ್ಗೆ ಚಿಂತನೆ ಮಾಡುವ ವಿಚಾರ ಗೊತ್ತಿಲ್ಲವೆಂದು ಹೇಳುವ ಧೈರ್ಯವನ್ನು ಮುಖ್ಯ ಮಂತ್ರಿಗಳು ಮಾಡಿದರು. ಇದರ ಪರಿಣಾಮ ಕರ್ನಾಟಕ ರಾಜ್ಯದ ಹಣಕಾಸಿನ ಪರಿಸ್ಥಿತಿಯಲ್ಲಿ ಬಂದಿದೆ. ಹಳೆಯ ಕಥೆಗಳನ್ನು ತೆಗೆಯುತ್ತಾ, ಕೆ.ಆರ್.ಎಸ್. ಕಟ್ಟುವಾಗ ವಿಶ್ವೇಶ್ವರಯ್ಯನವರಿಗೆ ಎಷ್ಟು ತೊಂದರೆಗಳು ಬಂದವು. ಅದನ್ನು ನಿಲ್ಲಿಸುವುದಕ್ಕೆ ಏನೇನು ಪ್ರಯತ್ನಗಳು ನಡೆದವು ಎಂಬುದನ್ನೆಲ್ಲ ಹೇಳಿದಿರಿ ಅವರು ಪ್ರಯತ್ನ ಮಾಡದಿದ್ದರೆ ಅದು ಆಗುತ್ತಿರಲಿಲ್ಲ. ವಿಶೇಷವಾಗಿ ನಮ್ಮ ಎಲ್ಲ ನೀರಾವರಿ ಯೋಜನೆಗಳನ್ನು ಉಪಯೋಗ ಮಾಡಿಕೊಳ್ಳಬೇಕು ಅಂದರೆ ವಿಶ್ವೇಶ್ವರಯ್ಯನವರು ಹುಟ್ಟಿ ಬರಬೇಕೋ ಏನೊ ? ಆದ್ದರಿಂದ ದೇವೇಗೌಡರನ್ನು ವಿನಂತಿಸಿಕೊಳ್ಳುವುದೇನೆಂದರೆ ತಮ್ಮ ಕಣ್ಮುಂದೆ ತೆಲುಗು ಗಂಗಾ ಯೋಜನೆ ನಿಲ್ಲಬೇಕು, ಅದಕ್ಕೆ ಕೇಂದ್ರದ ಅನುಮತಿ ಸಿಗಬಾರದು. ಆ ದಿಸೆಯಲ್ಲಿ ಹೋರಾಟ ಮಾಡುವುದಕ್ಕೆ ನಾವು ಸಿದ್ಧರಿದ್ದೇವೆ. ಈ ಕಡೆಯುವರ ವಿರೋಧ ಇಲ್ಲ. ಆ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ನೀವು ಏನು ಕಾರ್ಯಕ್ರಮ ಹಾಕಿಕೊಳ್ಳುತ್ತೀರಿ ? ಅದಕ್ಕೆ ಇಷ್ಟು ಹಣವನ್ನು ತೆಗೆದಿಡುತ್ತೇವೆಂದು ಹೇಳುವ ಕಾರ್ಯಕ್ರಮ ನಿಮ್ಮ ಕಣ್ಮುಂದೆ ಏನಾದರೂ ಇದೆಯೇ ? ಇದು ನಮ್ಮ ಮುಂದಿರತಕ್ಕ ಪ್ರಶ್ನೆ.

ಆದರೆ ಇಲ್ಲಿ ಪ್ರಶ್ನೆ ಬರುವಂತಹದ್ದು. ಬಹುಶಃ ತಮಗೆ ಗೊತ್ತಿದ್ದ ಹಾಗೆ ಮೊದಲನೆಯದಾಗಿ ೧೯೭೬ ರಲ್ಲಿ ಬಚಾವತ್ ಆಯೋಗದ ಮುಂದೆ ಕರ್ನಾಟಕ ಸರ್ಕಾರ ಹೆಚ್ಚು ನೀರನ್ನು ಬಳಸಲು ಆಂಧ್ರ ಪ್ರದೇಶಕ್ಕೆ ನೀಡುವ ಅಧಿಕಾರ ಆಗ ಇದ್ದಂತಹ ಹೆಚ್ಚುವರಿ ನೀರನ್ನು ಸಂಗ್ರಹಿಸಿಟ್ಟು ಕೊಳ್ಳುವ ಸಾಮರ್ಥ್ಯಕ್ಕೆ ಸೀಮಿತವಾಗಿರಬೇಕು. ಎರಡನೇಯದಾಗಿ ನದಿಯ ಮೇಲ್ಗಡೆ ಇರುವ ರಾಜ್ಯಗಳ ಒಪ್ಪಿಗೆ ಇಲ್ಲದೆ ನೀರನ್ನು ಬಯ್ಯುವ ಯಾವುದೇ ಕಾಮಗಾರಿಗಳನ್ನು ತೆಗೆದುಕೊಂಡರೆ ಅವುಗಳನ್ನು ಪ್ರತಿಭಟಿಸಬೇಕಾಗುತ್ತದೆಂದು ಕರ್ನಾಟಕ ಸರ್ಕಾರ ಬಚಾವತ್ ಆಯೋಗದ ಮುಂದೆ ಹೇಳಿದೆ. ಆದರೆ ಅದಕ್ಕವರು ಒಪ್ಪಲಿಲ್ಲ. ಅವರು ಏನು ಹೇಳಿದರು. ಯಾವ ನೀರು ವೇಸ್ಟಾಗಿ ಸಮುದ್ರಕ್ಕೆ ಹರಿದು ಹೋಗುತ್ತದೆ, ಅದನ್ನು ವೇಸ್ಟಾಗಿ ಹರಿದು ಹೋಗುವುದಕ್ಕೆ ಬಿಡುವುದಿಲ್ಲ ಅಂತ ಹೇಳಿದ್ದಾರೆ. ಏನು ಅವರ ಅಭಿಪ್ರಾಯ ಇದು ಸರಿಯೂ ಸಹ ಆಂಧ್ರಪ್ರದೇಶದ ಸರ್ಕಾರ, ಅಲ್ಲಿರುವ ಮುಖ್ಯಮಂತ್ರಿಗಳು ತಮ್ಮ ಪಾಲಿಗೆ ಬಂದಿರುವಂತಹ ೮೦೦ ಟಿಎಂಸಿ ನೀರನ್ನು ಉಪಯೋಗ ಮಾಡಿಕೊಂಡು ೨೦೦೦ ಎಡಿಗೆ ಏನು ಹೆಚ್ಚುವರಿ ನೀರು ಬರುತ್ತದೆ ಅದನ್ನೂ ಉಪಯೋಗ ಮಾಡಿಕೊಳ್ಳುವುದಕ್ಕೆ ಬಹಳವಾಗಿ ಪ್ರಯತ್ನ ಮಾಡುತ್ತಿದ್ದಾರೆ. ನಾವು ಎಷ್ಟೇ ಪ್ರತಿಭಟನೆ ಮಾಡಿದರೂ ಅವರು ಆಗಲೇ ಆ ಯೋಜನೆ

ಯನ್ನು ಪ್ರಾರಂಭ ಮಾಡಿದ್ದಾರೆ. ಇದರಿಂದ ಅವರಿಗೆ ನಾಳೆಯ ದಿವಸ ರೈಟ್ಸ್ ಬರುತ್ತದೆ. ಅವರು ಉಪಯೋಗಿಸಿಕೊಳ್ಳಲಿಲ್ಲ ನಾವು ಉಪಯೋಗ ಮಾಡಿದ್ದೇವೆ ಅಂತ ಅವರು ಹೇಳುತ್ತಾರೆ. ಆಗ ನಾವು ಅವರಿಗೆ ಏನು ಹೇಳುವಂತಹ ಪರಿಸ್ಥಿತಿ ಬರುವುದಿಲ್ಲ. ಆ ದೃಷ್ಟಿಯಿಂದ ಮೇಲ್ಭಾಗದಲ್ಲಿರುವ ನಾವು ನಮ್ಮ ಪಾಲಿನ ಸಂಪೂರ್ಣ ನೀರನ್ನು ಉಪಯೋಗ ಮಾಡಿಕೊಳ್ಳಬೇಕು. ಇದು ಒಂದು ನನ್ನ ತಾಲ್ಲೂಕಿನ ಒಂದು ವಿಚಾರವನ್ನು ಹೇಳಬೇಕಾಗುತ್ತದೆ. ಇದು ಸಂದರ್ಭವೂ ಕೂಡ ಹೌದು ಕಲ್ಲು ಒಡ್ಡು ಯೋಜನೆಯ ಬಗ್ಗೆ ತಾವೇ ಬಂದು ಸ್ಥಳ ಪರಿಶೀಲನೆ ಕೂಡ ಮಾಡಿದಿರಿ ವಿಶ್ವಬ್ಯಾಂಕಿನ ನೆರವೂ ಕೂಡ ಅದಕ್ಕೆ ಮಂಜೂರಾಗಿತ್ತು ಅದಕ್ಕೆ ಆಗಲೇ ೧೫-೨೦ ಲಕ್ಷ ರೂಪಾಯಿಗಳನ್ನೂ ಕೂಡ ಖರ್ಚು ಮಾಡಲಾಗಿತ್ತು. ನಿಮ್ಮ ಇಲಾಖೆಯ ಅಧಿಕಾರಿಗಳೂ ಕೂಡ ಇದು ಒಳ್ಳೆಯ ಯೋಜನೆ ಎಂಬುದಾಗಿ ವರದಿಯನ್ನು ಕೊಟ್ಟಿದ್ದರು. ಆದರೆ ನಿಮ್ಮ ಅರಣ್ಯ ಇಲಾಖೆಯ ಅಧಿಕಾರಿಗಳು, ಯಡಿಯೂರಪ್ಪನವರ ಮೇಲೆ ಸೇಡನ್ನು ತೀರಿಸಿಕೊಳ್ಳುವ ಸಲುವಾಗಿ, ಅಂದರೆ ಹಿಂದೊಮ್ಮೆ ನಾನು ಈ ಸದನದಲ್ಲಿ ಶ್ರೀಗಂಧ ನಷ್ಟವಾಗಿ ಹೋಗುತ್ತಿದೆ ಎಂಬುದಾಗಿ ಹೇಳಿದ್ದರ ಪ್ರಯುಕ್ತ ಅರಣ್ಯ ಇಲಾಖೆಯ ಅಧಿಕಾರಿಗಳು ಪ್ರತಿ ನಿತ್ಯ ಹೊಸ ಹೊಸ ವರದಿಗಳನ್ನು ಸರ್ಕಾರಕ್ಕೆ ಕೊಟ್ಟರು. ಆ ಬಗ್ಗೆ ೪-೫ ವಿವಿಧ ರೀತಿಯ ವರದಿಗಳನ್ನು ಕೊಟ್ಟರು ಕೋಟಿಗಟ್ಟಲೆ ಫಿಗರ್‍ಸನ್ನು ಕೊಡುವುದಕ್ಕೆ ಪ್ರಯತ್ನ ಮಾಡಿದರು. ನಾನು ಕೇಳುತ್ತೇನೆ ಸನ್ಮಾನ್ಯ ದೇವೇಗೌಡರೆ, ಇವತ್ತು ಯಾವ ನೀರಾವರಿ ಯೋಜನೆಗಳನ್ನು ಮಾಡಬೇಕಾದರೂ ೧೦೦ಎಕರೆ ೨೦೦ ಎಕರೆ ೪೦೦ಎಕರೆ ಪ್ರದೇಶದ ಕಾಡು ಮುಳುಗಡೆಯಾಗದೆ ನೀರಾವರಿ ಯೋಜನೆಗಳನ್ನು ಮಾಡುವುದಕ್ಕೆ ಸಾಧ್ಯ ಇದೆಯೇ ಅಂತ ಅಂದರೆ ಎಷ್ಟರಮಟ್ಟಿಗೆ ಈ ನೀರಾವರಿ ಯೋಜನೆಗಳಿಗೆ ಆದ್ಯತೆ ಸಿಕ್ಕಿದೆ ಎಂಬ ಪ್ರಶ್ನೆ ಇರುವಂತಹದ್ದು. ಎಷ್ಟೋ ತೀವ್ರವಾಗಿ ಆಂಧ್ರಪ್ರದೇಶದ ತೆಲುಗು ಗಂಗಾ ಯೋಜನೆಗೆ ಮಂಜೂರಾತಿ ಸಿಕ್ಕಬಾರದು ಅಂತ ಆಗ್ರಹ ಮಾಡಿದ್ದೆವೋ, ನಾವೆಲ್ಲ ಹೋಗಿ ಮಾಡಿದ್ದೇವೋ, ಅದಕ್ಕೆ ಯಾರ ವಿರೋಧವೂ ಇಲ್ಲ. ಜನತೆಯ ವಿರೋಧವೂ ಇಲ್ಲ ಈ ಕಡೆಯವರಾಗಿರಬಹುದು ಆ ಕಡೆಯವರು ಆಗಿರಬಹುದು. ಯಾರದ್ದೇ ವಿರೋಧ ಇಲ್ಲ. ಆದರೆ ನೀವು ಏನು ಮಾಡಿದ್ದೀರಿ ? ನಾವೂ ಅನೇಕ ಸಲ ಮಾತನಾಡುತ್ತೇವೆ. ನಿನ್ನೆ ದಿವಸ ಸ್ವಲ್ಪ ನನಗೆ ಜ್ಞಾನೋದಯವಾಯಿತು. ನಮ್ಮ ಕಾಂಗ್ರೆಸ್ ಮಿತ್ರರು ಪ್ರತಿಭಟನೆ ಮಾಡಿದಾಗ ಅವರು ನೀವು ಏನು ಮಾಡಿದಿರಿ ? ಅದಕ್ಕೆ ನೀವು ನೀವೇನು ಮಾಡಿದಿರಿ ಎಂಬುದಾಗಿ ಇಬ್ಬರು ಕೇಳುವುದಕ್ಕೆ ಪ್ರಯತ್ನ ಮಾಡಿದರು. ಯಾವುದೇ ಒಂದು ರಾಜಕೀಯ ಪಕ್ಷದಿಂದ ನಿಂತು ಮಾತನಾಡುವಾಗ ಕೆಲವು ಸಂದರ್ಭಗಳಲ್ಲಿ ಶಬ್ದಗಳನ್ನು ಉಪಯೋಗಿಸಬಾರದು ಎಂದಿದ್ದರೂ ಉಪಯೋಗಿಸಿಬಿಡಬಹುದು. ಆದರೆ ಅಧಿಕಾರದಲ್ಲಿರುವ ನೀವು ಈ ಸದನದಲ್ಲಿ ಎದ್ದು ನಿಂತುಕೊಂಡು ಪದೇ ಪದೇ ನೀವು ಏನು ಮಾಡಿದ್ದೀರಿ ? ನೀವು ಏನು ಮಾಡಿದ್ದೀರಿ ಎಂದು ಪ್ರಶ್ನಿಸುವುದಕ್ಕಿಂತ, ನೀವು ಏನು ಮಾಡಿದ್ದೀರಿ ಎಂಬುದು ಮುಖ್ಯ ದೇವೇಗೌಡರು ನೀವು ಹೇಳಬಹುದು ಅವರಿಗೆ ನೀವು ಇಷ್ಟು ವರ್ಷ ಅಧಿಕಾರದಲ್ಲಿದ್ದೀರಿ, ನೀರಾವರಿಗೆ ಆದ್ಯತೆಯನ್ನು ಕೊಟ್ಟಿದ್ದು ಇಷ್ಟು. ನಾನು ಕಳೆದ ೬-೭ ವರ್ಷಗಳಿಂದ ಅಧಿಕಾರದಲ್ಲಿದ್ದು, ಇಷ್ಟು ಸಾಧನೆ ಮಾಡಿದ್ದೇನೆ ಇಷ್ಟು ಪ್ರಗತಿಯನ್ನು ಮಾಡಿದ್ದೇನೆ ಅಂತ ಹೇಳುವಂತಹ ಧೈರ್ಯ ಈ ಸರ್ಕಾರಕ್ಕೆ ಇದೆಯೇ ? ಇಲ್ಲ ತೆಲುಗು ಗಂಗಾ ಯೋಜನೆಯನ್ನು ನಿಲ್ಲಿಸಬೇಕು. ಅದಕ್ಕೆ ಕೇಂದ್ರ ಸರ್ಕಾರ ಒಪ್ಪಿಗೆ ಕೊಡಬಾರದೆಂದು ಅದಕ್ಕಾಗಿ ಎಷ್ಟು ಆಗ್ರಹ ಮಾಡಬೇಕೋ ಅದನ್ನು ಮಾಡುವುದಕ್ಕಾಗಿ ಚರ್ಚೆ ಮಾಡಬೇಕಾಗಿದೆ. ಬಚಾವತ್ ಅವಾರ್ಡಿನಿಂದ ನಮ್ಮ ಪಾಲಿಗೆ ನೀರು ಏನು ದೊರೆತಿದೆ ಅದನ್ನು ಸಂಪೂರ್ಣವಾಗಿ ಉಪಯೋಗ ಮಾಡಿಕೊಳ್ಳಬೇಕಾಗಿದೆ. ಅದಕ್ಕೆ ವ್ಯವಸ್ಥೆ ಏನು ಮಾಡುವವರಿದ್ದೀರಿ, ಅದನ್ನು ಹೇಳಬಹುದೇ ಹೊರತು, ಅದನ್ನು ಬಿಟ್ಟು ಯಾವುದೇ ಕಾರಣದಿಂದ ತೆಲುಗು ಗಂಗಾ ಯೋಜನೆಯನ್ನು ಮಾಡುವುದಕ್ಕೆ ಬಿಡುವುದಿಲ್ಲ ಅಂತ ಹೇಳುವುದರಿಂದ ಈ ರಾಜ್ಯದ ರೈತರ ಸಮಸ್ಯೆ ಬಗೆಹರಿಯುವುದಿಲ್ಲ. ಅಷ್ಟಕ್ಕೆ ನಮ್ಮ ಮಾತು ಸೀಮಿತವಾಗಬಾರದು ಈಗಾಗಲೇ ಸಾಕಷ್ಟು ಸಮಯ ವ್ಯಯವಾಗಿದೆ. ಇನ್ನು ಮುಂದೆ ಬರುವ ದಿವಸಗಳಲ್ಲಾದರೂ ನಿಶ್ಚಿತವಾದ ಹಣವನ್ನು ನೀರಾವರಿ ಯೋಜನೆಗಳಿಗೆ ತೆಗೆದಿಡುತ್ತೇವೆ ಅಂತ ಹೇಳಿದರೆ ಅದನ್ನು ಒಪ್ಪಬಹುದು. ಹಿಂದೆ ನಾನು ಮಾತನಾಡುವಾಗ ಚೀಫ್ ಪಾಪುಲಾರಿಟಿ ಪ್ರೋಗ್ರಾಂ ಬಗ್ಗೆ ಹೇಳಿದ್ದೆ. ಅದಕ್ಕೆ ಆಗ ಅದರ ಅಗತ್ಯ ಇಲ್ಲವೇ ಎಂಬ ಪ್ರಶ್ನೆಯನ್ನು ಕೇಳಿದರು. ಅದರ ಅಗತ್ಯ ಇದೆ ಯಾವಾಗ ? ನಮ್ಮ ಹೊಟ್ಟೆ ತುಂಬಿದಾಗ ಬೇರೆ ಎಲ್ಲ ರೀತಿಯ ನೀರಾವರಿ ಯೋಜನೆಗಳನ್ನು ಮುಗಿಸಿದಾಗ ಮಾಡಬಹುದು. ಆದರೆ ಬೇರೆ ಅಗತ್ಯ ಇರುವುದನ್ನು ಬಿಟ್ಟು ನಿಮ್ಮ ಅಧಿಕಾರಿಗಳು ಈ ರೀತಿಯ ಪ್ರಚಾರಕ್ಕೋಸ್ಕರ ಕೋಟಿಗಟ್ಟಲೆ ಹಣವನ್ನು ಕೊಟ್ಟರೆ ಅದರಲ್ಲಿ ಒಂದು ಪೈಸೆ ಕೂಡ ಉಳಿಸುವುದಿಲ್ಲ. ಎಕ್ಸಸ್ ಖರ್ಚು ಮಾಡುತ್ತಾರೆ. ಆದರೆ ಇಂತಹ ದೊಡ್ಡ ದೊಡ್ಡ ಪ್ರಮುಖವಾದ ನೀರಾ

ವರಿ ಯೋಜನೆಗಳನ್ನು ಬಜೆಟ್‌ನಲ್ಲಿ ಸೇರಿಸಿದಾಗಲೂ, ಅದರ ಅಂದಾಜು ಪ್ರಿಪೇರ್ ಆಗಿ ಅದರ ಸ್ಪಷ್ಟ
ಮಂಜೂರಾತಿ ದೊರೆಯುವುದು ಫೆಬ್ರವರಿ ಮಾರ್ಚ್. ಈ ರೀತಿಯಾದ ಕಾರ್ಯಕ್ರಮಗಳು ನಡೆಯು
ತ್ತವೆ. ಈ ರೀತಿ ಮಾಡುವುದರಿಂದ ಈ ರಾಜ್ಯದ ರೈತರಿಗೆ ದ್ರೋಹ ಮಾಡಿದ ಹಾಗೆ ಆಗುತ್ತದೆ.
ಬಹುಶಃ ಈ ರಾಜ್ಯದ ರೈತರು ಮುಂದೆ ಕ್ಷಮಿಸುವುದಿಲ್ಲ. ಆದ್ದರಿಂದ ಇನ್ನು ಮುಂದಾದರೂ ಈ
ತರಹದ ಕಾರ್ಯಕ್ರಮಗಳನ್ನು ಮಾಡದೆ ನೀರಾವರಿ ಯೋಜನೆಗಳಿಗೆ ನಿಶ್ಚಿತವಾದ ಹಣವನ್ನು ಖರ್ಚು
ಮಾಡುತ್ತೇವೆಂದು ಹೇಳಬೇಕು. ಅದನ್ನು ಬಿಟ್ಟು ತೆಲುಗು ಗಂಗಾ ಯೋಜನೆಯನ್ನು ನಿಲ್ಲಿಸಿಬಿಡುತ್ತೇ
ವೆಂದು ಹೇಳಿ ಅದರಿಂದ ತೃಪ್ತಿಪಟ್ಟು ಕೊಳ್ಳುವುದಕ್ಕೆ ಪ್ರಯತ್ನ ಮಾಡದೆ ಮುಂದೆ ಬರುವ ದಿವಸಗಳಲ್ಲಿ
ಬಚಾವತ್ ಆಯೋಗದ ವರದಿಯಿಂದ ನಮಗೆ ಸಿಗಬೇಕಾದ ಸಂಪೂರ್ಣ ನೀರನ್ನು ಉಪಯೋಗ ಮಾಡಿ
ಕೊಳ್ಳದಿದ್ದರೆ ಅದು ದುರದೃಷ್ಟಕರ ಈಗಲಾದರೂ ಆ ಬಗ್ಗೆ ನಿರ್ದಿಷ್ಟವಾದ ಕಾರ್ಯಕ್ರಮಗಳನ್ನು
ಹಾಕಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ತಮ್ಮನ್ನು ವಿನಂತಿ ಮಾಡಿಕೊಳ್ಳುತ್ತೇನೆ.

ಈ ಸಂದರ್ಭದಲ್ಲಿ ಆದಷ್ಟು ಬೇಗ ರಾಜಕೀಯ ಮುಖಂಡರು ನಿಯೋಗವನ್ನು ದೆಹಲಿಗೆ
ಕೊಂಡೊಯ್ದು ಆಗುತ್ತಿರುವ ಅನ್ಯಾಯದ ಬಗ್ಗೆ ಪ್ರಧಾನ ಮಂತ್ರಿಗಳಿಗೆ ಮನದಟ್ಟು ಮಾಡುವ ಪ್ರಯತ್ನ
ಮಾಡಬೇಕು. ಮಾನ್ಯ ಮೊಯಿಲಿಯವರು ಹೇಳಿದಂತೆ ಮಾನ್ಯ ಹಾಲಿ ಮುಖ್ಯಮಂತ್ರಿಗಳು
ಪ್ರಾರಂಭದಲ್ಲಿ ಒಂದು ಮಾತನ್ನು ಹೇಳಿದರು. ತೆಲುಗು-ಗಂಗಾ ವಿಷಯವನ್ನು ನಾವು ಮತ್ತು
ಆಂಧ್ರದವರೇ ಬಗೆಹರಿಸಿಕೊಳ್ಳುತ್ತೇವೆ ಎಂದು ಹೇಳಿದರು. ಆಮೇಲೆ ಮತ್ತೊಂದು ಸ್ಟೇಟ್‌ಮೆಂಟ್
ಬಂತು, ಆ ರೀತಿ ಹೇಳಿಲ್ಲ ಎಂದು. ಇವತ್ತು ಕೇಂದ್ರ ಸರ್ಕಾರ ಮಧ್ಯೆ ಪ್ರವೇಶ ಮಾಡಬೇಕಾದ ಈ
ವಿಷಯದಲ್ಲಿ ಯಾವುದೇ ಮುಖ್ಯಮಂತ್ರಿ ಇದು ನಮಗೂ ಆಂಧ್ರಕ್ಕೂ ಬಿಟ್ಟಿದ್ದು ಎನ್ನುವ ಮಾತನ್ನು
ಆಡಿದರೆ ಮುಂದೆ ಕೇಂದ್ರದಿಂದ ಯಾವುದೇ ಸಹಕಾರವನ್ನು ಅಪೇಕ್ಷೆ ಪಡುವುದಕ್ಕಾಗುವುದಿಲ್ಲ. ಎಲ್ಲಾ
ಪಕ್ಷಗಳು ಒಂದಾಗಬೇಕಾಗಿರುವ ಸಂದರ್ಭದಲ್ಲಿ ಎಲ್ಲಿ ನಮ್ಮ ಐಕ್ಯತೆಗೆ ಭಿನ್ನವಾಗುತ್ತದೋ ಎಂದು,
ದಿಲ್ಲಿಯಲ್ಲಿ ಪೀಠ ಹಿಡಿಯಬೇಕೆನ್ನುವ ಗುಂಗಿನಲ್ಲಿ ಆಂಧ್ರದ ಮುಖ್ಯಮಂತ್ರಿಗಳನ್ನು ಯಾಕೆ ಮೈಮೇಲೆ
ಹಾಕಿಕೊಳ್ಳಬೇಕೆಂದು ಹೇಳಿ ಮೇಲ್ನೋಟಕ್ಕೆ ಇಲ್ಲಿ ಮಾತನಾಡಿ, ನೀನು ಮಾಡಯ್ಯ ಎನ್ನುವ ಸ್ಥಿತಿಗೆ
ಹೋಗಿದ್ದರೆ ಅದು ಜನತೆಗೆ ಮಾಡಿದ ದ್ರೋಹ ಆಗುತ್ತದೆಂದು ಹೇಳುತ್ತೇನೆ. ಈ ರೀತಿಯ ಅನುಮಾನ
ನಮಗೆ ಇದೆ ಈ ಕೆಲಸವನ್ನು ದೇವೇಗೌಡರು ಮಾಡಿದ್ದಾರೆಂದು ನಾನು ಹೇಳುವುದಕ್ಕೆ ಸಿದ್ಧನಿಲ್ಲ.
ಆ ರೀತಿ ಆಗದ ಹಾಗೆ ನೋಡಿಕೊಳ್ಳಿ. ಪ್ರಾಮಾಣಿಕ ಕಳಕಳಿಯಿಂದ ಪ್ರಯತ್ನ ಮಾಡಿ ತೆಲುಗು-ಗಂಗಾ
ಯೋಜನೆ ಆಗದ ಹಾಗೆ ನೋಡಿಕೊಂಡು ಬಚಾವತ್ ಆಯೋಗದ ತೀರ್ಪಿನ ರೀತ್ಯ ನಮ್ಮ ನೀರನ್ನು
ನಾವು ಸಂಪೂರ್ಣವಾಗಿ ಉಪಯೋಗ ಮಾಡಿಕೊಳ್ಳುವ ಕಡೆ ಗಮನಹರಿಸಬೇಕೆಂದು ಹೇಳಿ ನನ್ನ ನಾಲ್ಕು
ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಎಸ್. ಕಡಪಟ್ಟಿ (ಹುನಗುಂದ).—ಸನ್ಮಾನ್ಯ ಅಧ್ಯಕ್ಷರೇ, ತೆಲುಗು-ಗಂಗಾ ಬಗ್ಗೆ
ಅನೇಕ ಹಿರಿಯರು ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ತೆಲುಗು-ಗಂಗಾ ಯೋಜನೆ ಕಾರ್ಯವನ್ನು
ಆಂಧ್ರಪ್ರದೇಶದಲ್ಲಿ ಭರದಿಂದ ನಡೆಸಿದ್ದು, ಅದಕ್ಕೆ ಕೇಂದ್ರ ಸರ್ಕಾರ ಎನ್‌ವಿರೈನ್‌ಮೆಂಟ್ ಕ್ಲಿಯರೆನ್ಸ್
ಕೊಟ್ಟಿದ್ದರಿಂದ ಕರ್ನಾಟಕಕ್ಕೆ ದಿಗ್ಭ್ರಮೆ ಉಂಟು ಮಾಡಿದೆ. ಕೇಂದ್ರ ಸರ್ಕಾರ ತನ್ನ ಕರ್ತವ್ಯದಲ್ಲಿ
ಚ್ಯುತಿ ಮಾಡಿದೆ ಎಂದು ಹೇಳುವುದಕ್ಕಿಂತಲೂ ಈಗ ಒಪ್ಪಿರುವ ಅಗ್ರಿಮೆಂಟ್‌ನಲ್ಲಿ

> "...That the Central Government would make arrangements to inspect the construction during the operational stages and ensure that the withdrawal of water into this water supply scheme from Sri Shailam does not exceed 15 TMC.ft. in a water year and that the system is utillised only for water supply to Madras City and for no other purpose,"

ಎನ್ನುವುದು ಸ್ಪಷ್ಟವಾಗಿದೆ. ಆದ್ದರಿಂದ ಕೇಂದ್ರ ಈ ಬಗ್ಗೆ ನಿಗಾವಹಿಸಬೇಕಾಗಿತ್ತು. ಅದು ಆಗಿಲ್ಲ;
ಇನ್ನೂ ಕೂಡಾ ನಮ್ಮ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಎಲ್ಲಾ ರಾಜಕೀಯ ಪಕ್ಷಗಳ ಮಿತ್ರರ
ಜೊತೆ ಒಂದು ನಿಯೋಗ ಒಯ್ದು ಕೇಂದ್ರದ ಮೇಲೆ ರಾಜ್ಯ ಸರ್ಕಾರದ ಸ್ಥಿತಿಯನ್ನು ಮೊದಲ

ಬಿಂಬಿಸಬೇಕು. ಇಡೀ ದೇಶದಲ್ಲಿ ಕರ್ನಾಟಕದಲ್ಲಿ ನೀರಾವರಿ ಕ್ಷೇತ್ರ ಕಡಿಮೆ ಇದೆ. ಆದರೂ ಕೂಡ ಉತ್ತರದಲ್ಲಿ ಕೃಷ್ಣ ಬೇಸಿನ್‌ನಲ್ಲಿರತಕ್ಕ ಪ್ರದೇಶ ಕರ್ನಾಟಕ ರಾಜ್ಯದಲ್ಲಿ ನೀರಾವರಿ ಬಗ್ಗೆ ಹಿಂದುಳಿದಿದೆ ಎನ್ನುವುದು ಜಗಜ್ಜಾಹೀರಾಗಿದೆ ಅದರಲ್ಲೂ ಇಡೀ ಜಗತ್ತಿನಲ್ಲೇ ಬರಗಾಲಕ್ಕೆ ಪ್ರಸಿದ್ಧಿಯಾದ ಬಿಜಾಪುರ, ರಾಯಚೂರು ಹಾಗೂ ಗುಲ್ಬರ್ಗ ಜಿಲ್ಲೆಗಳಲ್ಲಿ ಶತಮಾನಗಳಿಂದ ಬರಗಾಲ ಅನುಭವಿಸುತ್ತಿರುವ ಕ್ಷೇತ್ರಗಳಾದರೂ ಕೂಡಾ ಯಾರೇ ಅಧಿಕಾರದಲ್ಲಿ ಇರಲಿ ಸಂಪೂರ್ಣವಾಗಿ ಈ ಕೃಷ್ಣ ಕಣಿವೆ ನೀರನ್ನು ಯಾವ ರೀತಿ ಉಪಯೋಗ ಮಾಡಬೇಕಾಗಿತ್ತೋ ಆ ಬಗ್ಗೆ ಸಂಪೂರ್ಣವಾದ ಆಸಕ್ತಿ ಆಸ್ಥೆಯನ್ನು ವಹಿಸಿ ಕೆಲಸ ಮಾಡಿಲ್ಲವೆಂದು ವಿಷಾದದಿಂದ ನಾನು ಹೇಳಬೇಕಾಗುತ್ತದೆ. ಆಂಧ್ರದವರು ೧೫ ನೂರು ಕ್ಯೂಸೆಕ್ಸ್ ನೀರು ಬಿಡುವ ಕಾಲುವೆ ತೋಡುವುದನ್ನು ಬಿಟ್ಟು ೧೧,೫೦೦ ಕ್ಯೂಸೆಕ್ಸ್ ಹರಿಯುವ ಕಾಲುವೆಯನ್ನು ತೋಡಿದಾಗ ಕೇಂದ್ರ ಸರ್ಕಾರಕ್ಕೆ ಇದರ ಬಗ್ಗೆ ಕಲ್ಪನೆ ಇರಲಿಲ್ಲವೇ? ಇನ್ನೂ ಕೂಡಾ ಆ ಕಡೆ ಸ್ನೇಹಿತರು ಇದರಲ್ಲಿ ರಾಜಕೀಯ ಬೆರಸದೇ ಇದು ರಾಜ್ಯದ ಹಿತ, ಕರ್ನಾಟಕ ಜನತೆಯ ಹಿತವೆನ್ನುವುದನ್ನು ದೃಷ್ಟಿಯಲ್ಲಿಟ್ಟುಕೊಂಡು ಯಾವುದೇ ಕಾರಣದಿಂದ ಇದರಲ್ಲಿ ರಾಜಕೀಯವನ್ನು ಮಾಡದೇ ಕರ್ನಾಟಕ ಹಿತವನ್ನು ಮಾತ್ರ ಲಕ್ಷ್ಯದಲ್ಲಿಟ್ಟುಕೊಂಡು ಕರ್ನಾಟಕಕ್ಕೆ ಬಚಾವತ್ ಆಯೋಗದಿಂದ ಕೊಡಮಾಡಿದ ಸಂಪೂರ್ಣ ನೀರನ್ನು ಬಳಸಿಕೊಳ್ಳಲು ಸಂಪೂರ್ಣವಾದ ಸಹಾಯ ಸಹಕಾರವನ್ನು ಕೊಡಬೇಕು. ಎಂದರೆ ೭೦೦ ಟಿಎಂಸಿಯಲ್ಲಿ ೫ ಟಿಎಂಸಿ ಮದ್ರಾಸಿಗೆ ಬಿಟ್ಟರೆ ಮಿಕ್ಕ ೬೯೫ ಟಿಎಂಸಿ ಜೊತೆಗೆ ೨೦೦೦ನೇ ವರ್ಷದ ನಂತರ ಬರುವ ೧೬೬ ಟಿಎಂಸಿ ಬಗ್ಗೆ ಕೂಡಾ ದೇವೇಗೌಡರಂತಹ ಎಂಜಿನಿಯರ್ ಕೂಡಾ ೧೦-೧೧ ವರ್ಷಗಳಲ್ಲಿ ಪ್ರತಿವರ್ಷ ನಾವು ಇಷ್ಟು ನೀರು ಉಪಯೋಗ ಮಾಡುತ್ತೇವೆ. ಇಂತಿಂತಹ ಪ್ರಾಜೆಕ್ಟ್ ಮಾಡುತ್ತೇವೆ ಎನ್ನುವುದನ್ನು ಇವತ್ತಿನವರೆಗೂ ಕೂಡಾ ಹೇಳಿಲ್ಲವೆಂಬುದನ್ನು ವಿಷಾದದಿಂದ ಹೇಳಬೇಕಾಗುತ್ತದೆ. ಅದನ್ನು ಇನ್ನೂ ತಯಾರು ಮಾಡಿಲ್ಲ. ಅದನ್ನು ತಯಾರು ಮಾಡಿಸಬೇಕು. ಅದನ್ನು ತಯಾರು ಮಾಡಿ ಆಮೇಲೆ ಬಡ್ಜೆಟ್‌ನಲ್ಲಿ ಪ್ರತಿವರ್ಷ ಇಷ್ಟಿಷ್ಟು ಹಣ ಕೊಡಬೇಕೆಂದು ಹೇಳಿ ಮಿಕ್ಕ ರೊಕ್ಕಕ್ಕೆ ಬೇಕೆಂದ್ರೆ ಕೇಂದ್ರಸರ್ಕಾರದ ಮೊರೆ ಹೋಗಬೇಕಾಗಿತ್ತು. ದುರ್ದೈವದಿಂದ ನಾವು ೨೦೦೦ದ ಇಸವಿಯ ಹೊತ್ತಿಗೆ ಎಷ್ಟು ನೀರನ್ನು ಉಪಯೋಗ ಮಾಡುತ್ತೇವೆ, ಯಾವ್ಯಾವ ವರ್ಷ ಎಷ್ಟೆಷ್ಟು ಉಪಯೋಗ ಮಾಡುತ್ತೇವೆನ್ನುವ ನಿಖರವಾದ ಪ್ಲಾನ್ ನಮ್ಮಲ್ಲಿ ಇಲ್ಲ. ೨೦೦೦ದ ಇಸವಿ ನಂತರ ೧೬೬ ಟಿಎಂಸಿ ನೀರನ್ನು ಉಪಯೋಗ ಮಾಡಿಕೊಳ್ಳುವುದು ದೂರ ಉಳಿಯಿತು. ಈಗಲಾದರೂ ಏನಾದರೂ ತಾಕೀತು ಮಾಡಿ ನಾವು ನಮ್ಮ ಪಾಲಿನ ನೀರನ್ನು ಉಪಯೋಗ ಮಾಡಿಕೊಳ್ಳಬೇಕು. ನಮ್ಮ ನೀರನ್ನು ಕಬಳಿಸುತ್ತಿರುವ ಸಂದರ್ಭದಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ತೀವ್ರಗತಿಯಲ್ಲಿ ಕಾರ್ಯಕ್ರಮವನ್ನು ಹಾಕಿಕೊಂಡು ತೀರ್ಮಾನವನ್ನು ತೆಗೆದುಕೊಳ್ಳಲಿಕ್ಕೆ ಒಂದು ನಿರ್ದಿಷ್ಟವಾದ ಆದೇಶವನ್ನು ಕೊಡಬೇಕು. ನಂತರ ಅದನ್ನು ಸದನದಲ್ಲಿ ಮಂಡಿಸಬೇಕು. ಪ್ರತಿ ವರ್ಷ ನಾವು ಇಷ್ಟು ಹಣವನ್ನು ಖರ್ಚು ಮಾಡುತ್ತೇವೆ ಈ ವರ್ಷ ಇಷ್ಟು ನೀರನ್ನು ಉಪಯೋಗ ಮಾಡಿಕೊಳ್ಳುತ್ತೇವೆ, ಇಷ್ಟು ಟಿಎಂಸಿ ನೀರನ್ನು ಉಪಯೋಗ ಮಾಡಿಕೊಳ್ಳುತ್ತೇವೆಂಬುದನ್ನು ಹೇಳಬೇಕು. ನಮಗೆ ಕೊಟ್ಟ ಮೊತ್ತದ ನೀರನ್ನು ೪೦೦ ಟಿಎಂಸಿ ಕಡಿಮೆ ಉಪಯೋಗ ಮಾಡುತ್ತಿದ್ದೇವೆ. ಈಗ ಸಂಪೂರ್ಣ ನಮ್ಮ ಕೈಮೇಲೆ ಇರುವಂತಹ ಪ್ರಾಜೆಕ್ಟ್‌ಗಳ ನೀರನ್ನು ಉಪಯೋಗ ಮಾಡಿಕೊಂಡರು ೭೫೦ ಟಿಎಂಸಿಗಿಂತ ಹೆಚ್ಚಿಗೆ ಉಪಯೋಗ ಮಾಡಿಕೊಳ್ಳಲಿಕ್ಕೆ ಆಗುವುದಿಲ್ಲ. ೭೩೪ ಟಿಎಂಸಿ ನೀರಿನಲ್ಲಿ ೧೦೦ ಟಿಎಂಸಿ ನೀರು ೨೦೦೦ದ ಇಸವಿಯೊಳಗೆ ಉಪಯೋಗ ಮಾಡಿಕೊಳ್ಳುವ ಪರಿಸ್ಥಿತಿಯಲ್ಲಿ ನಾವಿಲ್ಲ. ಆದ್ದರಿಂದ ದಯಮಾಡಿ ಕೈಯಲ್ಲಿರುವ ಆನ್‌ಗೋಯಿಂಗ್ ಪ್ರಾಜೆಕ್ಟ್‌ಗಳು ಏನಿವೆ ಅವುಗಳ ಮೂಲಕ ೧೦೦ ಟಿಎಂಸಿ ನೀರನ್ನು ಉಪಯೋಗ ಮಾಡುವ ಯೋಜನೆಗಳನ್ನು ೧೯೯೦ರೊಳಗೆ ಮುಗಿಸಿದರೆ ನಂತರ ಮುಂಬರುವ ಎಕ್ಸೆಸ್ ವಾಟರ್ ನಮಗೆ ಸಿಗುವ ಸಾಧ್ಯತೆಯಿದೆ. ಹೆಚ್ಚುವರಿ ನೀರನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡಿಕೊಳ್ಳುವುದಕ್ಕೆ, ಆ ಕಾರ್ಯವನ್ನು ಮಾಡಲಿಕ್ಕೆ ತಾವು ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ಶತಮಾನಗಳಿಂದ ವಂಚಿತರಾಗಿರತಕ್ಕ, ಶಾಶ್ವತವಾಗಿ ಬರಗಾಲದಲ್ಲಿರುವಂತಹ ಪ್ರದೇಶಗಳಿಗೆ ನಾವು ವಂಚನೆ ಮಾಡಿದಂತಾಗುತ್ತದೆ. ಒಮ್ಮೆ ನಾವು ಆಂಧ್ರ ಪ್ರದೇಶಕ್ಕೆ ನೀರಿನ ಹಕ್ಕನ್ನು ಕೊಡಮಾಡಿದರೆ ಮುಂದೆ ಅವರಿಗೆ ಹೋಗುತ್ತದೆ. ಆಗ ನಮಗೆ ಆ ಹಕ್ಕು ಸಿಗುವುದಿಲ್ಲ. ನಮ್ಮ ಸಂಸ್ಕೃತಿಯ ಪ್ರಕಾರ ಹೆಣ್ಣುಮಗಳ ಮಾನ ಹೋದರೆ ನಮ್ಮ ಮನಸ್ಸಿಗೆ ಯಾವ ರೀತಿ ನೋವು ಮಾಡಿಕೊಳ್ಳುತ್ತೇವೆ. ಅದೇ ರೀತಿ ನಮ್ಮ ನೀರನ್ನು ಅವರು ತೆಗೆದುಕೊಂಡರೆ ಆಗುತ್ತದೆಂದು ತಿಳಿದುಕೊಂಡು ಕೆಲಸ ಮಾಡಬೇಕು, ಅದರಲ್ಲಿ ಪ್ರಾಮಾಣಿಕ ಕಳಕಳಿಯಿಂದ ಮಾತನಾಡುವ ಮಾನ್ಯ ದೇವೇಗೌಡರು ಒಂದು ತೀರ್ಮಾನಕ್ಕೆ ಬಂದು ಈ

ಯೋಜನೆಗಳನ್ನು ಕಾರ್ಯ ರೂಪಕ್ಕೆ ತರಬೇಕು. ಸುಮ್ಮನೆ ಹಣ ಬರುವುದಿಲ್ಲ. ಒಣ ಮಾತು ಹೇಳಿದರೆ ರಾಜ್ಯದ ಜನತೆ ನಂಬುವುದಿಲ್ಲ. ತಮ್ಮ ತೀರ್ಮಾನದಲ್ಲಿ ಒಂದು ನಂಬಿಕೆ ಬರಬೇಕು. ಸಭೆ ಮತ್ತು ಮಾತಿನಲ್ಲಿ ಇದು ಆಗಬಾರದೆಂದು ನಾನು ದೇವೇಗೌಡರಲ್ಲಿ ತಮ್ಮ ಮೂಲಕ ವಿನಂತಿ ಮಾಡಿ ಕೊಳ್ಳುತ್ತೇನೆ. ಈಗ ಕೇಂದ್ರ ಸರ್ಕಾರಕ್ಕೆ ಆ ಕಡೆಯ ನಮ್ಮ ಹಿರಿಯ ಮಿತ್ರರು ತಮ್ಮ ಪ್ರಭಾವವನ್ನು ಬೀರಬೇಕು. ಹಿಂದೆ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳು ಕೇಂದ್ರ ಸರಕಾರಕ್ಕೆ ನೀರಾವರಿ ಯೋಜನೆಗಳಿಗೆ ನಮಗೆ ಹಣ ಸಹಾಯ ಕೊಡಿ, ಪ್ರತಿವರ್ಷ ನಮಗೆ ೨೫೦ ಕೋಟಿ ರೂಪಾಯಿಗಳನ್ನು ಕೊಡಿ, ನಾವು ೬ನೇ ವರ್ಷದಿಂದ ನಿಮಗೆ ಎಣ್ಣೆಕಾಳುಗಳನ್ನು ಬೆಳೆದುಕೊಡುತ್ತೇವೆ ಎಂದು ಹೇಳಿದ್ದಾರೆ. ಈ ಬಗ್ಗೆ ಕೇಂದ್ರ ಸರ್ಕಾರದವರು ಇವತ್ತು ಕೂಡ ಉತ್ತರ ಕೊಟ್ಟಿಲ್ಲ, ಅದು ನಮ್ಮ ದುರ್ದೈವ. ನಮ್ಮ ಸ್ನೇಹಿತರು ಹಾಗೂ ಮಿತ್ರರು ಹೇಳಿದ ಹಾಗೆ ಕರ್ನಾಟಕ ರಾಜ್ಯ ಎಣ್ಣೆಕಾಳುಗಳನ್ನು ಬೆಳೆಯಲಿಕ್ಕೆ ಸೂಕ್ತವಾದ ಪ್ರದೇಶ, ಆದ್ದರಿಂದ ಕೇಂದ್ರ ಸರ್ಕಾರದ ಮೇಲೆ ತಮ್ಮ ಪ್ರಭಾವವನ್ನು ಬೀರಿ, ಕರ್ನಾಟಕ ರಾಜ್ಯಕ್ಕೆ ೫ ವರ್ಷಗಳಲ್ಲಿ ಪ್ರತಿ ವರ್ಷ ೩೫೦ ಕೋಟಿ ರೂಪಾಯಿ ಕೊಟ್ಟರೆ ೬ನೇ ವರ್ಷದಲ್ಲಿ ೩೫೦ ಕೋಟಿ ರೂಪಾಯಿ ಜೊತೆಗೆ ಬಡ್ಡಿ ಸಮೇತ ಎಣ್ಣೆಕಾಳುಗಳ ರೂಪದಲ್ಲಿ ನಾವು ಕೊಡಬಹುದು, ಆ ಯೋಜನೆಗಳ ಅಡಿಯಲ್ಲಿ ಬರತಕ್ಕ ಜನರಿಗೆ ಎಣ್ಣೆಕಾಳುಗಳನ್ನು ಬೆಳೆಯಬೇಕೆಂದು ನಾವು ಕಡ್ಡಾಯ ಮಾಡಲಿಕ್ಕೆ ಶಕ್ಯವಿದೆ. ಈ ರೀತಿ ಮಾಡಿದರೆ ನಮ್ಮ ನೀರಾವರಿ ಯೋಜನೆಗಳು ಉಳಿದುಕೊಳ್ಳುತ್ತವೆ ಆ ಪ್ರದೇಶಗಳಲ್ಲಿ ೮೦೦-೧೦೦೦ ಕೋಟಿ ರೂಪಾಯಿ ಬೆಲೆಬಾಳುವ ಎಣ್ಣೆಕಾಳುಗಳನ್ನು ಬೆಳೆಯಬಹುದು. ಎಣ್ಣೆಕಾಳುಗಳಿಗಾಗಿ ಇವತ್ತು ನಾವು ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಬೇರೆ ದೇಶಗಳಿಂದ ಆಮದು ಮಾಡಿಕೊಳ್ಳುತ್ತಿದ್ದೇವೆ. ಆ ದೃಷ್ಟಿಯಿಂದ ಕೇಂದ್ರ ಸರ್ಕಾರ ಎಣ್ಣೆಕಾಳು ಯೋಜನೆಯನ್ನು ಜಾರಿಗೆ ತರಬೇಕು. ಆ ದೃಷ್ಟಿಯಿಂದ ಆ ಕಡೆಯ ಸ್ನೇಹಿತರು ಹಾಗೂ ಮಂತ್ರಿಗಳು ಕೇಂದ್ರದ ಮನವೊಲಿಸಿ ನಮ್ಮ ನೀರಾವರಿಗೆ ಹೆಚ್ಚಿನ ಆದ್ಯತೆಯನ್ನು ಕೊಡಲಿಕ್ಕೆ ಹಣವನ್ನು ಬಿಡುಗಡೆ ಮಾಡಲಿಕ್ಕೆ ಪ್ರಯತ್ನ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಈ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಹಣಕಾಸಿನ ಇತಿಮಿತಿ ನಮಗೆಲ್ಲರಿಗೂ ಗೊತ್ತಿರುವ ವಿಷಯ. ಪ್ರಯಾರಿಟಿಯನ್ನು ಯಾವುದಕ್ಕೆ ಕೊಡಬೇಕು ಎನ್ನುವುದರ ಬಗ್ಗೆ ಅಭಿಪ್ರಾಯ ಭೇದ ಇರಬಹುದು. ಆಧ್ಯತೆಯನ್ನು ಯಾವುದಕ್ಕೆ ಕೊಡಬೇಕೆನ್ನುವುದರ ಬಗ್ಗೆ ಇನ್ನೂ ಸಂಪೂರ್ಣವಾದ ಪರಿಜ್ಞಾನ ಮೂಡಿಲ್ಲ. ದೇಶ ಯಾವ ದಿಕ್ಕಿನಲ್ಲಿದೆ, ಅಭಿವೃದ್ಧಿ ಕಾರ್ಯಗಳಿಗೆ ನಾವು ಹೆಚ್ಚಿನ ಹಣ ಖರ್ಚು ಮಾಡಬೇಕು ಎನ್ನುವಾಗ ನಾನ್ ಪ್ರೊಡಕ್ಟಿವ್ ಎಕ್ಸ್‌ಪೆಂಡಿಚರ್ ಕಡಿಮೆ ಮಾಡಬೇಕೆಂದು ಬಾಯಲ್ಲಿ ಹೇಳುತ್ತೇವೆಯೇ ಹೊರತು ರಾಜ್ಯದ ಹಾಗೂ ಕೇಂದ್ರ ಸರ್ಕಾರ ಕೂಡ ಅದನ್ನು ಅಮಲಿನಲ್ಲಿ ತರುವುದಕ್ಕೆ ವಿಫಲವಾಗಿದೆ. ಈ ದೃಷ್ಟಿಯಿಂದ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರ ನೀರಾವರಿ, ವಿದ್ಯುಚ್ಛಕ್ತಿಗೆ ಹೆಚ್ಚಿನ ಅನುಕೂಲವನ್ನು ಒದಗಿಸಿಕೊಟ್ಟು ಈ ರಾಜ್ಯ ತನ್ಮೂಲಕ ರಾಷ್ಟ್ರವನ್ನು ಸಂಮೃದ್ಧವಾದ ನಾಡನ್ನಾಗಿ ಮಾಡುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ನನ್ನ ಎದುರಿಗೆ ಇರುವ ಒಂದು ವರದಿ ಪ್ರಕಾರ ಬಿಜಾಪುರ ಜಿಲ್ಲೆಯಲ್ಲಿ ಕೇಂದ್ರ ಸರ್ಕಾರ ಡಿಫೆನ್ಸ್ ಕಾಲೋನಿ ಸಲುವಾಗಿ ೫೦ ಎಕರೆ ಪ್ರದೇಶವನ್ನು ಗುರುತಿಸಿದೆ ಈ ಬಗ್ಗೆ ಎರಡೂವರೆ ಸಾವಿರ ಕೋಟಿ ರೂಪಾಯಿ ಖರ್ಚು ಮಾಡಬೇಕೆಂದಿದೆಯೆಂದು ಪತ್ರಿಕೆಯಲ್ಲಿ ಬಂದಿದೆ. ಎರಡೂವರೆ ಸಾವಿರ ಕೋಟಿ ಖರ್ಚು ಮಾಡಿ ಡಿಫೆನ್ಸ್ ಪ್ರೋಗ್ರಾಮ್ ಮಾಡಿದ್ದೀರಿ. ಬಿಜಾಪುರ ಜಿಲ್ಲೆ ಜಮೀನು ಕೊಡಲಿಕ್ಕೆ, ತ್ಯಾಗಕ್ಕೆ ನಾವು ಹಿಂದೆ ಮುಂದೆ ನೋಡಿಲ್ಲ. ಬಂಗಾಲದ ಬವಣೆಯನ್ನು ಅನುಭವಿಸಿ, ಗೋವಾ, ದಾಂಡೇಲಿಗೆ ಮ್ಯಾಂಗನೀಸ್ ಅದಿರನ್ನು ಹೊರಲಿಕ್ಕೆ ಜನರು ಹೋದರೂ ಶ್ರೀಮತಿ ಇಂದಿರಾಗಾಂಧಿಯವರನ್ನು ಬಂಗಾರದಲ್ಲಿ ತೂಗಿದಂಥ ಜಿಲ್ಲೆ ಬಿಜಾಪುರ. ತ್ಯಾಗಕ್ಕೆ ನಾವು ಎಂದಿಗೂ ಹಿಂದೆ ಮುಂದೆ ನೋಡುವುದಿಲ್ಲ. ಆದರೆ ಬಿಜಾಪುರ ಜಿಲ್ಲೆಯಲ್ಲಿ ಡಿಫೆನ್ಸ್ ಕಾಲೋನಿಯನ್ನು ಕೇಂದ್ರ ಸರ್ಕಾರ ಮಾಡಬಹುದು. ಇದರ ಬಗ್ಗೆ ಎರಡನೇ ಅಭಿಪ್ರಾಯ ಇಲ್ಲ. ಅದು ಅವಶ್ಯಕ. ಆದರೆ ನಾನು ಹೇಳುವುದೇನೆಂದರೆ ಬಿಜಾಪುರ ಜಿಲ್ಲೆಗೆ ಒಂದು ಲಿಫ್ಟ್ ಇರಿಗೇಶನ್ ಅನ್ನು ಮಾಡಿಕೊಟ್ಟು ಆಮೇಲೆ ಡಿಫೆನ್ಸ್‌ಗೆ ಎರಡು ಸಾವಿರ ಕೋಟಿಯಲ್ಲ. ಮೂರು ಸಾವಿರ ಕೋಟಿ ಖರ್ಚು ಮಾಡಿದರೆ ಪರವಾಗಿಲ್ಲ. ಈ ದೃಷ್ಟಿಯಿಂದ ನಮ್ಮ ಮಾನ್ಯ ನೀರಾವರಿ ಸಚಿವರು ಕೇಂದ್ರ ಸರ್ಕಾರದ ಗಮನವನ್ನು ಸೆಳೆಯಬೇಕೆಂದು ಹೇಳುತ್ತೇನೆ. ಬಿಜಾಪುರದ ಪರಿಸ್ಥಿತಿ ಏನಿದೆ ಎಂದು ಸನ್ಮಾನ್ಯ ದೇವೇಗೌಡರಿಗೆ ಗೊತ್ತಿದೆ. ಶ್ರೀ ವೆಂಕಟರಾಮಯ್ಯನವರು ಹೇಳಿದರು ಅಲ್ಲಿಗೆ ಹೋಗಿಬಂದಿದ್ದೇನೆ ಎಂದು. ಈ ಕಾರಣದಿಂದ ಬಿಜಾಪುರ ಜಿಲ್ಲೆಗೆ ಈ

ಕೃಷ್ಣಾ ಕಣಿವೆಯ ಸಂಪೂರ್ಣವಾದ ನೀರು ಉಪಯೋಗ ಆದರೆ ಬಿಜಾಪುರ ಜಿಲ್ಲೆಗೆ ಉಪಯೋಗ ಆಗುತ್ತದೆ. ಬಿಜಾಪುರ ಕರ್ನಾಟಕದ ಪಂಜಾಬ್ ಆಗುತ್ತದೆ. ಇಲ್ಲದೇ ಹೋದರೆ ಬಿಜಾಪುರದ ಜನತೆ ಶ್ರೀ ದೇವೇಗೌಡರನ್ನು ಶಪಿಸದೆ ಬಿಡುವುದಿಲ್ಲ. ಈ ಸಲವೇ ಮಾಡಿಸುತ್ತೇನೆ, ಇಲ್ಲದಿದ್ದರೆ ಮುಖ ತೋರಿಸುವುದಿಲ್ಲವೆಂದು ಅವರು ಹೇಳಿದ್ದಾರೆ. ಈ ದೃಷ್ಟಿಯಿಂದ ಶ್ರೀ ದೇವೇಗೌಡರು ಮನಸ್ಸು ಮಾಡಿದರೆ, ಛಲ ಬೇಕು ಶರಣಂಗೆ ಎನ್ನುವಂತೆ, ಶ್ರೀ ದೇವೇಗೌಡರಿಗೆ ಛಲ ಇದೆ. ಇದು ಸಂಪೂರ್ಣವಾಗಿ ಸದುಪಯೋಗ ಆಗಬೇಕು. ಅವರು ಹತ್ತು ವರ್ಷದೊಳಗೆ ಹೆಚ್ಚೆಂದರೆ ೧೯೯೮ರ ಒಳಗೆ ಈ ೭೩೪ ಟಿ.ಎಂ.ಸಿ. ನೀರನ್ನು ಉಪಯೋಗ ಮಾಡುತ್ತೇವೆ. ಅನಂತರ ನನ್ನ ಹತ್ತಿರ ಈ ಪ್ರೊಜೆಕ್ಟ್ ಇದೆ. ಈ ಎಸ್ಟಿಮೇಟ್ ಇದೆ. ಇಷ್ಟು ಏರಿಯಾ ಪ್ರತಿವರ್ಷ ನೀರಾವರಿಯಾಗುತ್ತದೆ ಎಂದು ಟೈಬಲ್ ಮಾಡಿಕೊಟ್ಟು ಹಾಗೆ ಮಾಡಿಕೊಡಬೇಕು. ಆಮೇಲೆ ಇದನ್ನು ಕಾರ್ಯರೂಪದಲ್ಲಿ ತರಬೇಕು. ಆಮೇಲೆ ೧೬೩ ಟಿಎಂಸಿ ನೀರನ್ನು ಉಪಯೋಗ ಮಾಡಲಿಕ್ಕೆ ೧೯೯೮-೯೯ರೊಳಗೆ ಕಾರ್ಯ ಕೂಡ ಪ್ರಾರಂಭ ಮಾಡಬೇಕು. ಈ ದೃಷ್ಟಿಯಲ್ಲಿ ಶ್ರೀ ದೇವೇಗೌಡರು ಮಾಡಬಹುದು ಎಂದು ಆಸೆ ವ್ಯಕ್ತ ಮಾಡಿ ಈ ದೃಷ್ಟಿಯಲ್ಲಿ ಈ ತೆಲುಗುಗಂಗಾ ಬಗ್ಗೆ ರಾಜ್ಯದ ಒಂದು ನಿಯೋಗವನ್ನು ದೆಹಲಿಗೆ ಒಯ್ಯಲಿಕ್ಕೆ, ಲೋಕಸಭಾ ಸದಸ್ಯರನ್ನು ಕರೆದುಕೊಂಡು ಹೋಗುವುದಕ್ಕೆ ವ್ಯವಸ್ಥೆ ಮಾಡಿದರೆ ತಪ್ಪೇನೂ ಇಲ್ಲ.

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರು.—ಬೇಗ ಮುಗಿಸಿ.

ಶ್ರೀ ಎಸ್.ಎಸ್. ಕಡಪಟ್ಟಿ.—ಮುಂಜಾನೆ ಗಮನ ಸೆಳೆಯುವ ಸೂಚನೆಗೆ ಒಂದು ತಾಸು ಕೊಟ್ಟಿದ್ದೀರಿ. ಇದು ಕೃಷ್ಣಾ ಬೇಸಿನ್‌ಗೆ ಸಂಬಂಧಪಟ್ಟಿದ್ದು. ಇನ್ನು ಐದು ನಿಮಿಷಗಳಲ್ಲಿ ಮುಗಿಸುತ್ತೇನೆ. ಯಾವ ಯಾವ ಕೆಲಸಗಳಿಗೆ ಎಸ್ಟಿಮೇಟ್ಸ್ ಎಷ್ಟು ಆಗುತ್ತದೆ, ಎಷ್ಟು ಎಕರೆ ನೀರಾವರಿ ಮಾಡುತ್ತೇವೆ ಎನ್ನುವಂಥ ಸಂಪೂರ್ಣ ವಿವರಗಳನ್ನು ಕೊನೆಯಪಕ್ಷ ನಾಳೆ ಬರುವಂಥ ಬಜೆಟ್ ಅಧಿವೇಶನದಲ್ಲಿ ನಮೂದು ಮಾಡಬೇಕು. ಆಮೇಲೆ ಆ ವರ್ಷ ಬಜೆಟ್‌ನಲ್ಲಿ ಕೊಟ್ಟಂಥ ಹಣವನ್ನು ಪೂರ್ತಿಯಾಗಿ ಖರ್ಚು ಮಾಡಬೇಕು. ಸನ್ಮಾನ್ಯ ದೇವೇಗೌಡರಿಗೆ ಇನ್ನೊಂದು ವಿಚಾರ ಹೇಳುವುದೇನೆಂದರೆ, ನಮ್ಮ ಹಾಗೂ ನೆರೆ ರಾಜ್ಯ ಮಹಾರಾಷ್ಟ್ರಕ್ಕೆ ಒಂದು ಅಂತರ ಇದೆ. ನಮ್ಮ ಮುಳವಾಡ ಏತ ನೀರಾವರಿ ಯೋಜನೆ ಚಿತ್ರ ನಮ್ಮ ಮುಂದೆ ಇದೆ. ಆದರೆ, ನೆರೆಯ ಮಹಾರಾಷ್ಟ್ರದಲ್ಲಿ ಕೌಟೀ ಮಹಂಕಾಳ ಹಾಗೂ ಇನ್ನೂ ಬೇರೆ ಲಿಫ್ಟ್ ಇರಿಗೇಷನ್ ಪ್ರಾಜೆಕ್ಟ್‌ಗಳ ನಕಲುಗಳು ನನ್ನ ಕಡೆ ಬಂದಿವೆ. ನಮಗೂ ಅವರಿಗೂ ೧೦೦ಕ್ಕೆ ೫೦ರಷ್ಟು ಕಡಿಮೆ ಇವೆ. ತಾವೂ ಕೂಡ ಇಂಜಿನಿಯರ್ ಇದ್ದೀರಿ, ಇದನ್ನು ನೋಡಿ ಅದಷ್ಟು ಕಡಿಮೆ ಖರ್ಚಿನಲ್ಲಿ, ಏನು ಮಾಡುವುದಕ್ಕೆ ಶಕ್ಯವಿದೆ ಎನ್ನುವುದನ್ನು ತಾವು ಮನಸ್ಸು ಮಾಡಿದರೆ ಮಾಡಬಹುದು. ಇನ್ನೊಂದು ತಮ್ಮಲ್ಲಿ ವಿನಂತಿ ಏನೆಂದರೆ, ನಾಳೆ ನಿಯೋಗದ ಜೊತೆ ಹೋದಾಗ ಜಾಗತಿಕ ಬ್ಯಾಂಕ್‌ನಲ್ಲಾಗಲೀ, ಅಥವಾ ಇನ್ನಿತರ ಮೂಲಗಳಿಂದ ನಾವು ಕೇಂದ್ರ ಸರ್ಕಾರದಿಂದ ಸಾಲವನ್ನು ಪಡೆಯುವಾಗ, ಕೇಂದ್ರ ಸರ್ಕಾರ ೧೫ ಪರ್ಸೆಂಟ್ ಹಣ ಇಟ್ಟುಕೊಂಡು......

ಅಧ್ಯಕ್ಷರು.—ಪೂರ್ಣ ಮಾಡಿ, ೭೦ರ ನಿಯಮದ ಪ್ರಕಾರ ಇನ್ನೂ ಎರಡು ವಿಷಯಗಳ ಮೇಲೆ ಚರ್ಚೆ ಇದೆ, ಆದ್ದರಿಂದ ಬೇಗ ಮುಗಿಸಿ ಮುಖ್ಯವಾದುದನ್ನು ಮಾತ್ರ ಹೇಳಿ.

ಶ್ರೀ ಎಸ್.ಎಸ್. ಕಡಪಟ್ಟಿ.—ರಾಜ್ಯ ಸರ್ಕಾರಕ್ಕೆ ಹಣಕಾಸಿನ ಇತಿಮಿತಿಯೊಳಗೆ ತೊಂದರೆ ಇದೆ ಎಂಬ ಕಲ್ಪನೆ ನನಗಿದೆ. ನಾವು ೧೦೦ ರೂಪಾಯಿ ಖರ್ಚು ಮಾಡಿ, ಕೇಂದ್ರ ಸರ್ಕಾರದಿಂದ ೭೫ ರೂಪಾಯಿ ಸಾಲದ ಹಣ ಪಡೆಯಬೇಕು. ರಾಜ್ಯ ಸರ್ಕಾರದ ಹಣಕಾಸಿನ ಇತಿಮಿತಿಯೊಳಗೆ ನೂರು ರೂಪಾಯಿ ಖರ್ಚು ಮಾಡಿದಾಗ ಜಾಗತಿಕ ಬ್ಯಾಂಕ್‌ನಿಂದ ಬರತಕ್ಕ ಹಣ ೭೫ ರೂಪಾಯಿಗಳು ಯಾವುದೇ ರಾಜ್ಯ ಸರ್ಕಾರಕ್ಕೆ ಆಗಲೀ ಹಣಕಾಸಿನ ಇತಿಮಿತಿ ಇದೆ, ಆದರೆ ರಾಜ್ಯ ಸರ್ಕಾರಕ್ಕೆ ಅಷ್ಟು ಯೋಗ್ಯತೆ ಇಲ್ಲವೇ? ನೂರು ರೂಪಾಯಿ ಖರ್ಚು ಮಾಡಿ, ೭೫ ರೂಪಾಯಿ ತೆಗೆದುಕೊಳ್ಳುವುದು ಕಷ್ಟವಾಗುತ್ತದೆ. ಯಾವುದೇ ಸಾಲ ಕೊಟ್ಟರೂ ಉಪಯೋಗ ಮಾಡುವಂಥ ಶಕ್ತಿಯು ಕೂಡ ಬರುವುದಿಲ್ಲ. ಈ ಕಾರಣದಿಂದ ಕೇಂದ್ರ ಸರ್ಕಾರ ಏನು ೧೫ ಪರ್ಸೆಂಟ್ ಹಣ ಇಟ್ಟುಕೊಳ್ಳುತ್ತಾರೆ, ಅದನ್ನು ಸಂಪೂರ್ಣವಾಗಿ ಬಿಡುಗಡೆ ಮಾಡಬೇಕು. ಬೇರೆ ಮೂಲಗಳಿಂದ ಯಾವುದೇ ಬಡ್ಡಿಯಿಂದ ಹಣ ಕೊಡುತ್ತಾರೆ, the same interest should be charged to the State

Government in respect of the projects taken up in the State. ಈ ಕಾರಣ ನಮ್ಮ ವಿರೋಧಪಕ್ಷದ ನಾಯಕಿಯರು ಕೂಡ ಕೇಂದ್ರ ಸರ್ಕಾರದ ಮನವೊಲಿಸಿ, ಕೇಂದ್ರ ಸರ್ಕಾರಕ್ಕೆ, ರಾಜ್ಯ ಸರ್ಕಾರಗಳ ಹಣಕಾಸಿನ ಪರಿಸ್ಥಿತಿ ನಾಜೂಕಾಗಿರುವಂಥ ಪರಿಸ್ಥಿತಿಯಲ್ಲಿ ತೊಂದರೆ ಕೊಡಬಾರದು ಎಂದು ಶ್ರೀಮತಿ ನಾಗರತ್ನಮ್ಮನವರು, ಅವರು ಹಿರಿಯರು, ಈ ರಾಜ್ಯದ ಜನತೆಯ ಕಷ್ಟವನ್ನು ನಿವಾರಣೆ ಮಾಡುವುದಕ್ಕೆ ಸಹಾಯ ಮಾಡಬೇಕೆಂದು ಸನ್ಮಾನ್ಯ ಅಧ್ಯಕ್ಷರ ಮೂಲಕ ವಿನಂತಿ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

(ಗೊಂದಲ)

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ನಮಗೂ ಅವಕಾಶ ಕೊಡಬೇಕು, ನಾವೂ ಕೂಡ ಆ ಭಾಗದವರು, ನಮಗೂ ಮಾತನಾಡಲು ಅವಕಾಶ ಕೊಡಬೇಕು.

ಅಧ್ಯಕ್ಷರು.—ಇವತ್ತು ರಾತ್ರಿ ೮ ಗಂಟೆಯಾಗಲಿ ನನ್ನದೇನೂ ತಕರಾರು ಇಲ್ಲ, ನೀವು ಬೇಕಾದ್ದು ಮಾತನಾಡಿ ನನಗೆ ಸಿಟ್ಟಿಲ್ಲ, ನನಗೂ ಜವಾಬ್ದಾರಿ ಇದೆ, ೬೮ರ ನಿಯಮದ ಇನ್ನೂ ಎರಡು ಚರ್ಚೆ ಇವೆ. ಎರಡಕ್ಕೆ ಒಂದೊಂದು ತಾಸು ಕೊಟ್ಟರೂ, ಎರಡು ತಾಸು ಆಗುತ್ತದೆ, ನಂತರ ಮಂತ್ರಿಗಳ ಉತ್ತರ ಕೊಡುವುದರಲ್ಲಿ ಆರೂವರೆ ಅಥವಾ ಏಳು ಗಂಟೆಯವರೆಗೂ ಹೋಗುತ್ತದೆ.

೪-೦೦ ಪಿ.ಎಂ.

ಆದ್ದರಿಂದ ನಾವು ಇಲ್ಲಿ ಟೈಮ್ ಪ್ರಕಾರ ಮುಗಿಸಬೇಕಾಗುತ್ತದೆ. ಅದಕ್ಕೆ ಏನು ಮಾಡಬೇಕು ಎಂದರೆ ಎಲ್ಲರೂ ಎಷ್ಟೆಷ್ಟು ಬೇಕೋ ಅಷ್ಟಷ್ಟೇ ಮಾತನಾಡಬೇಕು. ೫ ಮಿನಿಟ್ ಮಾತನಾಡಿರಿ ಎಂದರೆ ೫೦ ಮಿನಿಟ್ ಮಾತನಾಡುತ್ತೀರಿ. ಈ ರೀತಿ ಆದರೆ ಹೇಗೆ ಮುಗಿಸುವುದಕ್ಕೆ ಆಗುತ್ತದೆ, ಆಯಿತು ಖೇಡ್‌ರವರೇ ಐದು ನಿಮಿಷ ಮಾತನಾಡಿ.

† ಶ್ರೀ ಎನ್. ಎಸ್. ಖೇಡ್ (ಇಂಡಿ).—ಮಾನ್ಯ ಸಭಾಧ್ಯಕ್ಷರೇ, ಈ ಒಂದು ತೆಲುಗು ಗಂಗಾ ವಿಷಯದಲ್ಲಿ ಈ ಮನೆಯ ಎಲ್ಲಾ ಸದಸ್ಯರೂ ಯಾವುದೇ ಪಕ್ಷ ಬೇಧವಿಲ್ಲದೆ, ಯಾವುದೇ ರೀಜನಲ್ ಇಂಬ್ಯಾಲೆನ್ಸ್ ಇಲ್ಲದೆ ತಮ್ಮ ಸಂಪೂರ್ಣ ಸಹಕಾರವನ್ನು ತಮಗೆ ತಿಳಿಸಿದ್ದಾರೆ. ಇದರಲ್ಲಿ ಯಾವುದೇ ಭಿನ್ನಾಭಿಪ್ರಾಯ ಇಲ್ಲ. ತೆಲುಗು ಗಂಗಾ ಬಗ್ಗೆ ಒಂದೇ ಒಂದು ಕೂಗು ಇದೆ, ಅದೇನೆಂದರೆ ನಮಗೆ ಬರಬೇಕಾಗಿರತಕ್ಕ ೭೦೦ ಟಿ.ಎಂ.ಸಿ. ಪ್ಲಸ್ ೧೬೬ ಟಿ.ಎಂ.ಸಿ. ಸರ್‌ಪ್ಲಸ್ ವಾಟರ್ ಏನಿದೆ ಅದು ನಮ್ಮ ನ್ಯಾಯಬದ್ಧವಾದ ಹಕ್ಕು. ಈ ನೀರಿನ ಬಳಕೆ ಸಂಪೂರ್ಣವಾಗಿ ಆಗಲೇ ಬೇಕೆಂಬುದು ಒಂದು ಕಡೆ. ಈ ಒಂದು ಯೋಜನೆಗಳ ಮುಖಾಂತರ ನಮ್ಮ ನೀರಿನ ಹಕ್ಕನ್ನು ನಾವು ಸಾಧಿಸಬೇಕಾದರೆ, ಅದನ್ನು ನಾವು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕು. ಹಾಗಾದರೆ ಮಾತ್ರ ಆ ನೀರು ನಮ್ಮಲ್ಲಿ ಉಳಿಯುವುದಕ್ಕೆ ಸಾಧ್ಯ. ಇಲ್ಲದೇ ಹೋದರೆ ನಾವು ಈ ಸಭೆಯಲ್ಲಿ ಅಥವಾ ಯಾವುದೇ ಬಹಿರಂಗ ಸಭೆಯಲ್ಲಿ ಅಥವಾ ಪತ್ರಿಕೆಗಳ ಮುಖಾಂತರ ಯಾವ ಹೇಳಿಕೆಯನ್ನು ಕೊಟ್ಟರೂ ಯಾವುದೇ ನಿರ್ಣಯ ಮಾಡಿದರೂ ಆ ನೀರು ಉಳಿಯುವುದಕ್ಕೆ ಸಾಧ್ಯವಿಲ್ಲ. ಇವತ್ತು ತೆಲುಗು ಗಂಗಾ ಬಗ್ಗೆ ಬಹಳ ಕ್ಲಿಷ್ಟವಾದ ಸಮಸ್ಯೆ ಉದ್ಭವವಾಗಿದೆ.

ಶ್ರೀ ರಾಜವರ್ಧನ್ (ಕಾಂಗ್ರೆಸ್ ಸದಸ್ಯರನ್ನುದ್ದೇಶಿಸಿ).—ಅಲ್ಲಿ ಏನೋ ರಾಜಕೀಯ ಚರ್ಚೆ ನಡೆಯುತ್ತಿದೆ. ಗುಂಪು ಗುಂಪಾಗಿ ರಾಜಕೀಯ ಚರ್ಚೆ ನಡೆಸುತ್ತಿದ್ದಾರೆ.

ಅಧ್ಯಕ್ಷರು.—ನೀವು ಏನು ಮಾಡುತ್ತೀರಿ ಅದನ್ನೇ ಅವರು ಮಾಡುತ್ತಿದ್ದಾರೆ. ಈಗ ಕುಳಿತುಕೊಳ್ಳಿ.

ಶ್ರೀ ಎನ್. ಎಸ್. ಖೇಡ್.—ಇದು ಇಡೀ ರಾಜ್ಯದ ಸಮಸ್ಯೆ ಎಂದು ಎಲ್ಲಾ ಶಾಸಕ ಮಿತ್ರರೂ ತಿಳಿಯಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ. ನಮ್ಮ ಪಾಲಿಗೆ ಇರತಕ್ಕಂಥ ಏಳುನೂರು ಟಿ.ಎಂ.ಸಿ. ನೀರನ್ನು ನಾವು ಉಪಯೋಗ ಮಾಡದೇ, ಆರ್ಥಿಕ ಮುಗ್ಗಟ್ಟಿನಿಂದ ಹೊಗಳಾಡುತ್ತಾ ಇರುವಂತಹ ಕ್ಲಿಷ್ಟವಾದ ಪರಿಸ್ಥಿತಿಗೆ ಬಂದು ಮುಟ್ಟಿದ್ದೇವೆ. ಈ ಒಂದು ಸಮಸ್ಯೆಯ ಪೋಸ್ಟ್‌ಮಾರ್ಟಮ್ ಮಾಡುವುದಕ್ಕೆ ಹೋದರೆ ಯಾರ ತಲೆಗೆ ಇದು ಬರುತ್ತದೋ ಗೊತ್ತಿಲ್ಲ, ಇದು ಬೇಕಾಗಿಯೂ ಇಲ್ಲ. ಅವರು ಅಧಿಕಾರದಲ್ಲೇ ಇರಲಿ, ನಾವು ಅಧಿಕಾರದಲ್ಲೇ ಇರಲಿ

ಏನೋ ತಪ್ಪುಗಳು ಆಗಿರಬಹುದು. ಅದು ಬೇರೆ. ಆದರೂ ಕೂಡಾ ನಾವು ಇವತ್ತೂ ಎಚ್ಚೆತ್ತು ಕೊಳ್ಳುವಂತಹ ಯಾವ ಸೂಚನೆಗಳೂ ಕಂಡು ಬರುತ್ತಿಲ್ಲ ಕೇವಲ ಸಭೆಗಳ ಮುಖಾಂತರವಾಗಲೀ, ಬೇರೆ ಮಾಧ್ಯಮಗಳ ಮುಖಾಂತರವಾಗಲೀ, ಭಾಷಣಗಳನ್ನು ಮಾಡಿ, ಹೇಳಿಕೆಗಳನ್ನು ಕೊಟ್ಟು, ನಮ್ಮ ನಮ್ಮ ಕರ್ತವ್ಯ ನಿಭಾಯಿಸುತ್ತೇವೆ ಎಂಬ ಮಟ್ಟಕ್ಕೆ ಬಂದರೆ, ಅದರಿಂದ ನಮ್ಮ ಈ ಕಳಕಳಿಯ ಸಮಸ್ಯೆ ಬಗೆಹರಿಯುವುದಿಲ್ಲ. ಆದಕ್ಕಾಗಿ ಸ್ವಲ್ಪ ಸಮಯದ ಹಿಂದೆ ಮಾನ್ಯ ಶಾಸಕ ಮಿತ್ರರಾದ ಕಡಪಟ್ಟಿ ಯವರು ಹೇಳಿದಂತೆ, ಒಂದು ಟೈಮ್‌ಬೌಂಡ್ ಪ್ರೋಗ್ರಾಂ ಮತ್ತು ಕಾನ್‌ಕ್ರೀಟ್ ಪ್ರಪೋಸಲ್ಸ್ ಇಟ್ಟು ಕೊಂಡು ಯಾರೇ ಮುಖ್ಯಮಂತ್ರಿಗಳಾಗಿರಲಿ, ಯಾವುದೇ ಪಕ್ಷದ ಸರಕಾರ ಇರಲಿ, ಯಾರೇ ಅಧಿಕಾರದ ಚುಕ್ಕಾಣಿಯನ್ನು ಹಿಡಿದಿರಲಿ, ಇದನ್ನು ಮಾಡುವಂತಹ ಕಾರ್ಯಕ್ರಮ ಹಾಕಿಕೊಂಡಾಗ ಮಾತ್ರ ಎರಡು ಸಾವಿರದ ಇಸವಿ ವರ್ಷದೊಳಗೆ ಇದನ್ನು ಮುಗಿಸಿದರೆ ಮಾತ್ರ, ಇದರ ಸದುಪಯೋಗ ಖಂಡಿತ ಆಗುತ್ತದೆ. ಇಲ್ಲದೇ ಹೋದರೆ ಇದು ಆಗುವುದಿಲ್ಲ. ಈಗಾಗಲೇ ಮಾನ್ಯ ಹಿರಿಯ ಸದಸ್ಯರು ಗಳಾದಂಥ ಮಾನ್ಯ ಖರ್ಗೆಯವರು ಮತ್ತು ವೀರಪ್ಪಮೊಯಿಲಿಯವರು ಇದರ ಬಗ್ಗೆ ಸ್ಪಷ್ಟವಾದ ಚಿತ್ರವನ್ನು ನಮ್ಮ ಮುಂದೆ ಇಟ್ಟಿದ್ದಾರೆ. ? ಯಾವಾಗ ಈ ನೀರಿನ ಹಕ್ಕನ್ನು ಬಳಸಿಕೊಳ್ಳಬೇಕಾಗು ತ್ತದೆ ಅದು ಯಾವಾಗ ಬರುವುದಿಲ್ಲ ಎಂಬುದನ್ನು ಹೇಳಿದ್ದಾರೆ. ಇದನ್ನು ಬಳಸಿಕೊಳ್ಳದೇ ಹೋದಲ್ಲಿ ಖಂಡಿತವಾಗಿ ನೀವು ಆ ಪಾಪಕ್ಕೆ ಗುರಿಯಾಗುತ್ತೀರಿ. ಇವತ್ತು ನಮ್ಮ ಸರಕಾರ ಇರಬಹುದು ನಾಳೆ ಬೇರೆ ಸರಕಾರ ಬರಬಹುದು, ಯಾರೇ ಅಧಿಕಾರದಲ್ಲಿ ಇರಲಿ, ದಕ್ಷರಾದವರು ಇವತ್ತು ಒಟ್ಟಾಗಿ ರಾಜ್ಯದ ಹಣಕಾಸಿನ ಮೂಲವನ್ನು ಎತ್ತರಿಸತಕ್ಕಂಥ ವ್ಯವಸ್ಥೆ ಮಾಡಬೇಕು. ಇನ್ನು ಹತ್ತು ವರ್ಷಗಳ ಅವಧಿಯಲ್ಲಿ ಖಂಡಿತವಾಗಿ ಸರಿಯಾದ ಯೋಜನೆಗಳನ್ನು ಹಾಕಿಕೊಂಡು, ನಮ್ಮ ನೀರನ್ನು ಪರರಾಜ್ಯಕ್ಕೆ ಹೋಗದಂತೆ ಕೂಡಿಡುವಂತಹ ಒಂದು ವ್ಯವಸ್ಥೆಯನ್ನು ಮಾಡಬೇಕು. ಈ ದಿಸೆಯಲ್ಲಿ ನಾವು ಯಾವ ಸೂಚನೆಯನ್ನು ಮಾಡುತ್ತೇವೆ ಎಂಬ ಬಗ್ಗೆ ಒಂದು ಸ್ಪಷ್ಟವಾದ ನಿಲುವನ್ನು ತೆಗೆದುಕೊಳ್ಳಬೇಕು. ಜಮೀನುಗಳಿಗೆ ನೀರನ್ನು ಬಿಟ್ಟರೆ ಒಂದು ವರ್ಗದ ಜನ ಉದ್ಧಾರವಾಗುತ್ತಾರೆ, ಕೇವಲ ರೈತರಷ್ಟೇ ಶ್ರೀಮಂತರಾಗುತ್ತಾರೆ ಎಂಬ ಉದ್ದೇಶ ಅಥವಾ ಪಾಲಿಸಿ ಇಟ್ಟುಕೊಂಡ ಯಾವ ಸರಕಾರವೂ ಅಧಿಕಾರ ದಲ್ಲಿರುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಒಂದು ಕಳಕಳಿಯನ್ನು ಇಟ್ಟುಕೊಂಡು ಈ ಸಭೆಯನ್ನು ಕಾನ್‌ಫಿಡೆನ್ಸ್‌ಗೆ ತೆಗೆದುಕೊಂಡು, ಹಣವನ್ನು ಕ್ರೋಢೀಕರಿಸಿ, ಒಂದು ಟೈಮ್ ಬೌಂಡ್ ಪ್ರೋಗ್ರಾಂ ಹಾಕಿಕೊಂಡು, ಅಂದರೆ ಹತ್ತು ವರ್ಷಕ್ಕೆ ಒಂದು ಟೈಮ್ ಬೌಂಡ್ ಪ್ರೋಗ್ರಾಂ ಹಾಕಿಕೊಂಡು ಮುಗಿಸ ಬೇಕು. ಹೋದ ವರ್ಷ ಈ ಯೋಜನೆಗಳಿಗೆ ೩೦೦ ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಕೊಡಬೇಕೆಂಬ ನಿರ್ಧಾರವನ್ನು ಮಾಡಿ, ಅದಕ್ಕೆ ಹೋದ ಅಧಿವೇಶನದಲ್ಲಿ ಒಪ್ಪಿಗೆಯನ್ನೂ ಕೂಡಾ ಕೊಟ್ಟಿದ್ದೇವೆ.

ಆದರೆ ೩೦೦ ಕೋಟಿ ರೂಪಾಯಿಗಳನ್ನು ನೀರಾವರಿಗೆ ಬಡ್ಜೆಟ್‌ನಲ್ಲಿ ಸೇರಿಸದೆ ಇರುವುದನ್ನು ನೋಡಿದರೆ ನಾಚಿಕೆಯಾಗುತ್ತದೆ. ೩೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲು ಯೋಗ್ಯತೆ ಇಲ್ಲದಂತಹ ಸರ್ಕಾರ ಆಡಳಿತ ನಡೆಸುತ್ತಿದೆ ಎಂದು ಹೇಳುವುದಕ್ಕೆ ನಮಗೆ ನಾಚಿಕೆಯಾಗುತ್ತದೆ. ಯಾರಿಗೆ ಬೇಕು ಇಂತಹ ಕೆಟ್ಟ ಸರ್ಕಾರ ಜನರ ಮುಂದೆ ನಾವು ಇದನ್ನೆಲ್ಲಾ ಹೇಳಬೇಕಾಗುತ್ತದೆ. ಈ ವಿಷಯದಲ್ಲಿ ಯಾರೇ ಆಗಿರಲಿ ಸರಿಯಾದ ಯೋಜನೆಯನ್ನು ಕಾರ್ಯಕ್ರಮವನ್ನು ಹಾಕಿಕೊಳ್ಳಿ ಎಂದು ನಾವು ಹೇಳಬೇಕಾಗುತ್ತದೆ. ಹೆಸರಿಗೆ ಮಾತ್ರ ೩೦೦ರಿಂದ ೪೦೦ ಕೋಟಿ ರೂಪಾಯಿಗಳು ಇಡುತ್ತೇವೆಂದು ಹೇಳಿದರೆ ಕೆಲಸ ಆಗುವುದಿಲ್ಲ. ಇವತ್ತು ನಮ್ಮ ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವಂತಹ ಅಧಿಕಾರಿ ಗಳು ಕೂಡ ನಮ್ಮ ರಾಜ್ಯದ ಯೋಜನೆಗಳ ಬಗ್ಗೆ ಆಸಕ್ತಿ ವಹಿಸಿ ಕೆಲಸ ಮಾಡಬೇಕಾಗುತ್ತದೆ. ಒಟ್ಟಿನಲ್ಲಿ ಈ ಯೋಜನೆ ನಾನು ಮೊದಲೇ ಹೇಳಿದ ಹಾಗೆ ಇನ್ನು ೧೦ ವರ್ಷಗಳಲ್ಲಿ ಮುಕ್ತಾಯವಾಗಬೇಕು. ಇಲ್ಲದಿದ್ದರೆ ತೆಲುಗು ಗಂಗಾ ಯೋಜನೆ ಮುಖಾಂತರ ಆಂಧ್ರದವರು ನೀರು ತೆಗೆದುಕೊಂಡು ಹೋಗು ತ್ತಾರೆ. ಅದಕ್ಕೆ ನಾವು ಅವಕಾಶ ಕೊಡಬಾರದು. ಈ ಬಗ್ಗೆ ಮಾನ್ಯ ಸದಸ್ಯರಾದ ಶ್ರೀಮಾನ್ ವೀರಪ್ಪಮೊಯ್ಲಿಯವರು ಸವಿಸ್ತಾರವಾಗಿ ಹೇಳಿದ್ದಾರೆ. ಏನೇ ಮಾಡಿ ಈ ತೆಲುಗು ಗಂಗಾ ಯೋಜನೆ ಕಾರ್ಯಗತಗೊಳ್ಳುವುದಕ್ಕೆ ನಮ್ಮ ಸರ್ಕಾರದವರು ಬಿಡಬಾರದೆಂದು ಹೇಳಿ ನನಗೆ ಇಷ್ಟು ಮಾತನಾ ಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಾಬುರೆಡ್ಡಿ ವಿ, ತುಂಗಳ ಬಿಳಗಿ.—ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಈ ಚಿಕ್ಕ ಅಧಿವೇಶನದ ಕೊನೆಯ ದಿನ ಜ್ವಲಂತವಾದ ಸಮಸ್ಯೆಯನ್ನು ನಾವು ಪ್ರಸ್ತಾಪ ಮಾಡುತ್ತಿದ್ದೇವೆ. ಮುಖ್ಯ

ವಾಗಿ ತಾವು ನನಗೆ ಈ ವಿಷಯದ ಬಗ್ಗೆ ಮಾತನಾಡಲು ಅವಕಾಶ ಮಾಡಿ ಕೊಟ್ಟಿದ್ದೀರಿ ಅದಕ್ಕೆ ನಾನು ತಮಗೆ ಅಭಿನಂದನೆಗಳನ್ನು ಸಲ್ಲಿಸಬೇಕಾಗಿದೆ. ಈ ತೆಲುಗು ಗಂಗಾ ಯೋಜನೆಯು ವಿವಾದದ ಸಂಗತಿ ಎಂಬುದು ಸರ್ವೇ ಸಾಮಾನ್ಯವಾಗಿದೆ. ಇತ್ತೀಚೆಗೆ ಇಲ್ಲಿ ಏನಾಗಿದೆ ಎಂದರೆ ಸುಪ್ರೀಂ ಕೋರ್ಟ್‌ನವರು ಕೇಂದ್ರ ಸರ್ಕಾರಕ್ಕೆ ಒಂದು ನೋಟೀಸ್ ಕೊಟ್ಟಿರುವುದು ತಮಗೂ ಗೊತ್ತಿದೆ. ಸುಪ್ರೀಂ ಕೋರ್ಟಿನವರು ತೆಲುಗು ಗಂಗಾ ವಿವಾದವನ್ನು ಬಗೆಹರಿಸಿಕೊಳ್ಳಬೇಕೆಂದು ಹೇಳಿ ಕೇಂದ್ರ ಸರ್ಕಾರಕ್ಕೆ ನೋಟೀಸ್ ಕೊಟ್ಟ ಮೇಲೆ ನಮ್ಮಂತಹ ಅನೇಕ ಜನರಿಗೆ ಗಾಬರಿಯಾಗಿದೆ. ನೀರಾವರಿ ಬಗ್ಗೆ ಸ್ವಲ್ಪ ಕಾಳಜಿ ಇರುವ ಜನ ನಾವು ಕಾರಣ ನಾವು ಕೃಷ್ಣಾ ನದಿ ದಡದಿಂದ ಬಂದವರಾಗಿದ್ದೇವೆ. ಹಾಗೂ ನಾವು ಘಟಪ್ರಭಾ ನದಿ ದಡದಿಂದ ಬಂದವರಾಗಿದ್ದೇವೆ. ಆದ್ದರಿಂದ ನಮಗೆ ವಿಶೇಷ ಕಳಕಳಿ ಇರುವುದು ಸ್ವಾಭಾವಿಕ. ಇದನ್ನು ನಾವು ಹೆಮ್ಮೆಯಿಂದ ಹೇಳಿಕೊಳ್ಳಬೇಕಾಗಿದೆ. ವಿಶ್ವಬ್ಯಾಂಕಿನ ನೆರವು ಸಿಕ್ಕಿರತಕ್ಕಂಥ ಕೆಲವೇ ಯೋಜನೆಗಳಲಿ ಕೃಷ್ಣಾ ನದಿ ಯೋಜನೆ ಸಹ ಒಂದು. ಆದರೆ ನಾವು ಇವತ್ತು ನಿರೀಕ್ಷಿಸಿದಷ್ಟು ಕೆಲಸ ಅಲ್ಲಿ ನಡೆದಿಲ್ಲ. ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಏನೆಂದರೆ, ನಾವು ಇನ್ನೊಬ್ಬರ ನೀರು ಕುಡಿಯುವವರು ಅಲ್ಲ. ನಮಗೆ ಬಚಾವತ್ ತೀರ್ಪಿನ ಪ್ರಕಾರ ನ್ಯಾಯವಾಗಿ ಬರಬೇಕಾದ ಕೃಷ್ಣ ನದಿಯ ನೀರು ಸಿಕ್ಕಿದರೆ ಸಾಕು. ಇದನ್ನು ನಾವು ಪ್ರತಿಪಾದನೆ ಮಾಡುತ್ತಿದ್ದೇವೆ ಇದಕ್ಕೆ ಕೆಲವು ಜನ ವಿಚಿತ್ರವಾದ ಕಲ್ಪನೆಗಳನ್ನು ಕಲ್ಪಿಸಿದ್ದಾರೆ. ರಾಮಕೃಷ್ಣ ಹೆಗಡೆಯವರಿಗೂ ಮತ್ತು ಎನ್. ಟಿ. ರಾಮರಾವ್‌ರವರಿಗೂ ಏನೋ ಸಂಬಂಧ ಇದೆ. ಅದಕ್ಕೆ ಅಲ್ಲಿ ಅವರು ರಾಷ್ಟ್ರೀಯ ಪಕ್ಷ ಮಾಡಿದರು. ಆ ಒಂದು ಸಮ್ಮೇಳನದಲ್ಲಿ ಒಂದುಗೂಡಿದರು. ಆದ್ದರಿಂದ ಎನ್. ಟಿ. ರಾಮರಾವ್‌ರವರಿಗೆ ರಾಮಕೃಷ್ಣ ಹೆಗಡೆಯವರು ಈಲ್ಡ್ ಆಗಬಾರದು ಎನ್ನುವ ಮಾತುಗಳು ಈ ಸದನದ ಹೊರಗೆ ಮತ್ತು ಒಳಗೆ ಬಂದವು. ಜನೋತ್ಸವ ನಡೆದಂತಹ ಸಂದರ್ಭದಲ್ಲಿ ಸನ್ಮಾನ್ಯ ಹೆಗಡೆಯವರನ್ನು ಎನ್. ಟಿ. ರಾಮರಾವ್‌ರವರು ನನ್ನ ತಮ್ಮ ಎಂದು ಹೇಳಿದರು. ಅದಕ್ಕೆ ಜನ ಈ ರೀತಿ ಮಾತನಾಡಿಕೊಂಡರು. ಎನ್. ಟಿ. ರಾಮರಾವ್ ಹೆಗಡೆಯವರನ್ನು ಎಷ್ಟೇ ಹೊಗಳಿದರೂ ಅವರು ಈ ವಿಷಯದಲ್ಲಿ ಈಲ್ಡ್ ಆಗುವುದಿಲ್ಲವೆಂದು ನನಗೆ ಗೊತ್ತಿತ್ತು. ಸನ್ಮಾನ್ಯ ಬಂಗಾರಪ್ಪನವರಿಗೆ ಇದು ಗೊತ್ತಿದೆ. ಕೃಷ್ಣಾ ಪ್ರಾಜೆಕ್ಟ್‌ಗೆ ಅಡಿಗಲ್ಲು ಹಾಕಿದವರು ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಯವರು ಅವರು ಅಲ್ಲಿಗೆ ಬಂದಾಗ ನನಗೆ 10 ವರ್ಷ ಆಗಿತ್ತು. ಈಗ ನನಗೆ 30 ನೇ ವರ್ಷ ನಡೆಯುತ್ತಿದೆ. ಆದರೂ ಇನ್ನು ಆ ಯೋಜನೆ ಪೂರ್ತಿಯಾಗಲಿಲ್ಲ. ಆದರೆ ನಾಗಾರ್ಜುನ ಸಾಗರ ಡ್ಯಾಮ್ ಕೆಲಸವನ್ನು ಅವರು ಪೂರ್ತಿ ಮಾಡಿದರು. ಆದರೆ ನಮ್ಮ ಯೋಜನೆ ಮಾತ್ರ ಪೂರ್ತಿಯಾಗಲಿಲ್ಲ. ಈ ತೆಲುಗು ಗಂಗಾ ಯೋಜನೆ ಪ್ರಾರಂಭಿಸಿದಾಗ ಅವರೇನು ಹೇಳಿದರೆಂದರೆ, ಈ ಯೋಜನೆ ಕೇವಲ ಮದ್ರಾಸ್ ನಗರಕ್ಕೆ ಕುಡಿಯುವ ನೀರನ್ನು ಒದಗಿಸುವುದಕ್ಕೆ ಮಾತ್ರ ಎಂದು ಹೇಳಿದರು ಮದ್ರಾಸ್ ನಗರಕ್ಕೆ ಕುಡಿಯುವ ನೀರು ಒದಗಿಸುತ್ತೇವೆಂದು ಹೇಳುವ ನೆಪದಲ್ಲಿ ಆಂಧ್ರ ಪ್ರದೇಶದ ೩ ಜಿಲ್ಲೆಗಳಲ್ಲಿ ಸುಮಾರು ೫ ಲಕ್ಷ ಎಕರೆ ಜಮೀನಿಗೆ ನೀರಾವರಿ ಒದಗಿಸಿಕೊಡುವ ವ್ಯವಸ್ಥೆ ಮಾಡಿದ್ದಾರೆ. ಈ ಒಂದು ಕುತಂತ್ರದ ಬಗ್ಗೆ ಗಂಭೀರವಾಗಿ ಯೋಚನೆ ಮಾಡಬೇಕು. ನಾನು ಕೃಷ್ಣ ನದಿ ದಡದಿಂದ ಬಂದಿರುವುದರಿಂದ ವಿಶೇಷ ಆಸಕ್ತಿ ಮತ್ತು ಕಳಕಳಿ ನನಗೆ ಇದೆ ನಾಳೆ ನಮ್ಮ ಭಾಗದ ಜನ ನಮ್ಮನ್ನು ಕೇಳುತ್ತಾರೆ. ನೀನು ಚುನಾಯಿಸಿ ಹೋಗಿ ಸಂಬಳ ಟಿ.ಎ.ಡಿ.ಎ. ರೊಕ್ಕ ಎಲ್ಲಾ ಮಾಡಿಕೊಂಡೆ, ನಮಗೇನು ಮಾಡಿದೆ ಎಂದು ಆಗ ಮಾನ್ಯ ಹೆಗಡೆಯವರಾಗಲಿ, ತಾವಾಗಲೀ ಬಂದು ಆ ಜನರಿಗೆ ಉತ್ತರ ಹೇಳುವುದಿಲ್ಲ. ನಾನು ಏಕೆ ಇಷ್ಟು ಉದ್ರಿಕ್ತನಾಗಿ ಹೇಳುತ್ತಿದ್ದೇನೆಂದರೆ, ಸುಪ್ರೀಂಮ್ ಕೋರ್ಟಿನಲ್ಲಿರುವ ಈ ವಿವಾದದ ಬಗ್ಗೆ ಏನಾದರು ಅನಾಹುತವಾದರೆ, ನಾನು ಸ್ಪಷ್ಟವಾಗಿ ಹೇಳುತ್ತೇನೆ, ಮಾನ್ಯ ದೇವೇಗೌಡರು ಇಲ್ಲಿ ಇರುವುದಿಲ್ಲ. ನಾನೂ ಇರುವುದಿಲ್ಲ. ಅಂಥಾ ಪ್ರಸಂಗ ಬರುತ್ತದೆ. ನಮಗೆ ಜನರು ಹೊರಗಡೆ ಉತ್ತರ ಕೊಡುತ್ತಾರೆ. ಎನ್. ಟಿ. ರಾಮರಾಯರು ಏನು ಹೇಳುತ್ತಾರೆ ಎಂದರೆ, ಕೇಂದ್ರ ಸರ್ಕಾರವೇ ಇರಲಿ, ವಿಶ್ವ ಬ್ಯಾಂಕ್‌ನವರೇ ಇರಲಿ, ಯಾರು ಅಡ್ಡಿ ಮಾಡಿದರೂ ತೆಲುಗು ಗಂಗಾ ಯೋಜನೆಯನ್ನು ನಿಲ್ಲಿಸುವುದಿಲ್ಲವೆಂದು ಹೇಳಿದ್ದಾರೆ. ಇತರೇ ಎಲ್ಲಾ ಅಭಿವೃದ್ಧಿ ಕೆಲಸಗಳನ್ನು ಅವರು ನಿಲ್ಲಿಸಿ ತೆಲುಗು ಗಂಗಾ ಯೋಜನೆಯನ್ನು ಮಾಡುತ್ತಿದ್ದಾರೆ.

ಅಧ್ಯಕ್ಷರು.—ತಮಗೆ ಏನಾಗಬೇಕೆಂಬುದನ್ನು ಮಾತ್ರ ಹೇಳಿ,

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಆಂಧ್ರದವರು ಎಲ್ಲಾ ಸಂಪನ್ಮೂಲಗಳನ್ನು ಕ್ರೋಡಿ ಕರಿಸಿ ಈ ಯೋಜನೆಯನ್ನು ಮುಗಿಸುತ್ತೇವೆಂದು ಹೇಳಿದ್ದಾರೆ. ನಾನು ಇದರ ಬಗ್ಗೆ ಒಂದು ಮಾತನ್ನು

ಹೇಳುವುದಕ್ಕೆ ಬಯಸುತ್ತೇನೆ. ಈ ಸದನದಲ್ಲಿ ಹಿರಿಯ ಸದಸ್ಯರುಗಳಾದ ಖರ್ಗೆಯವರು, ಮೊಯಿಲಿಯವರು ಕಡಪಟ್ಟಿಯವರು ಬಚಾವತ್ ಅವಾರ್ಡ್ ಬಗ್ಗೆ ಪ್ರಸ್ತಾಪ ಮಾಡಿ ಅವರು ನಮಗೆ ಕೊಟ್ಟಿರುವ ಅವಧಿಯೊಳಗೆ ಕೃಷ್ಣಾ ಬೇಸಿನ್‌ಗೆ ಹಣವನ್ನು ಕೊಟ್ಟು ಕೆಲಸವನ್ನು ಮುಗಿಸಬೇಕೆಂದು ಹೇಳಿದ್ದಾರೆ, ಈ ಬಗ್ಗೆ ಸರ್ಕಾರ ಕೂಡಲೇ ಗಮನ ಹರಿಸಿ ಎಲ್ಲಾ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಕೃಷ್ಣಾ ಬೇಸಿನ್‌ನ ಕೆಲಸ ಪೂರ್ಣವಾಗುವಂತೆ ಮಾಡಬೇಕು: ತೆಲುಗು ಗಂಗಾ ಯೋಜನೆಗೆ ಕೇಂದ್ರ ಸರ್ಕಾರ ಇನ್ನೂ ಒಪ್ಪಿಗೆ ಕೊಟ್ಟಿಲ್ಲ. ಈಗಾಗಲೇ ನಮ್ಮ ಕರ್ನಾಟಕದಿಂದ ಕೆಲವು ಸಾರಿ ಸರ್ವ ಪಕ್ಷ ನಿಯೋಗವು ಹೋಗಿ ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡಿ ವಿಷಯ ತಿಳಿಸಿ ಬಂದಿದ್ದಾರೆ. ನಾನು ಹೇಳುತ್ತೇನೆ. ಬರೀ ಹೇಳಿ ಬಂದರೆ ಸಾಲದು. ಎಲ್ಲಾ ಪಕ್ಷದ ಸದಸ್ಯರುಗಳು ಪಕ್ಷ ಭೇದ ಮರೆತು ನಿಯೋಗವನ್ನು ತೆಗೆದುಕೊಂಡು ಹೋಗಿ ಕೇಂದ್ರ ಸರ್ಕಾರದ ಮುಂದೆ ವಾದ ಮಾಡಬೇಕು. ದಸರ ಹಬ್ಬ ಆದ ಮೇಲೆ ನಿಯೋಗ ಹೋಗೋಣ, ದೀಪಾವಳಿ ಹಬ್ಬ ಆದ ಮೇಲೆ ನಿಯೋಗ ಹೋಗೋಣವೆಂದು ನಿಧಾನ ಮಾಡದೇ ಆದಷ್ಟು ಬೇಗ ಹೋಗಿ ತೆಲುಗು ಗಂಗಾ ಯೋಜನೆ ಬಗ್ಗೆ ಅವರಲ್ಲಿ ಪ್ರಸ್ತಾಪ ಮಾಡಬೇಕೆಂದು ಹೇಳಿ ನನಗೆ ಸ್ವಲ್ಪ ಹೊತ್ತು ಮಾತನಾಡುವುದಕ್ಕೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಬಸವಲಿಂಗಪ್ಪನವರೇ ನೀವು ೩ ಮಿನಿಟ್ ಒಳಗೆ ಮಾತನಾಡಿ ಮುಗಿಸಬೇಕು.

† ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).— ಮಾನ್ಯ ಅಧ್ಯಕ್ಷರೇ. ಕಾವೇರಿ ನದಿಯ ನೀರಿನ ಬಗ್ಗೆ ಮತ್ತು ತೆಲುಗು ಗಂಗಾ ನೀರಿನ ಬಗ್ಗೆ ಈ ಸದನದಲ್ಲಿ ಸಾಕಷ್ಟು ಚರ್ಚೆಯಾಗಿದೆ. ಈ ಹಿಂದೆಯೂ ಅಷ್ಟೇ, ಸಾಕಷ್ಟು ಇದರ ಬಗ್ಗೆ ಚರ್ಚೆಯಾಗಿದೆ. ಈ ಸದನದಲ್ಲಿ ನಿರ್ಣಯಗಳನ್ನು ಮಾಡಲಾಗಿದೆ. ರಾಜಕೀಯ ಪಕ್ಷಗಳೂ ಕೂಡ ನಿರ್ಣಯಗಳನ್ನು ಮಾಡಿವೆ. ಈ ನಿಲುವುಗಳಲ್ಲಿ ಬದಲಾವಣೆ ಏನೂ ಕಾಣಿಸಲಿಲ್ಲ. ಆದರೆ, ಈಗ ಚರ್ಚೆ ಏಕೆ ಮಾಡುತ್ತಿದ್ದೇವೆ ಎಂದರೆ, ೧೮ನೇ ತಾರೀಕಿನಂದು ಹೈದರಾಬಾದಿನಲ್ಲಿ ಎನ್. ಟಿ. ರಾಮರಾಯರು ಒಂದು ವಾಕ್ಯವನ್ನು ಹೇಳಿದ್ದಾರೆ. ಏನೆಂದರೆ

> "Asked to comment on the Karnataka Chief Minister S. R. Bommais statement in Madras that the Krishna Water should not be used for irrigation purposes and that he was against Madras getting 15 TMC of water, Mr. Rama Rao said, Telugu Ganga is no concern of Mr. Bommai, it is an issue between the Andhra Pradesh and the Centre"

ಸುಮಾರು ೪-೫ ವರ್ಷಗಳಿಂದ ಮಾನ್ಯ ಮಾಜಿ ಮುಖ್ಯ ಮಂತ್ರಿಗಳಾದ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಏನು ಒಂದು ಡೋಲಾಯಮಾನವಾಗಿರತಕ್ಕಂಥ ನೀತಿ ನಿಲುವನ್ನು ಹೊಂದಿದ್ದರೋ ಆ ದಿಸೆಯಿಂದ ಶ್ರೀಮಾನ್ ಎನ್. ಟಿ. ರಾಮರಾಯರು ಯಾರನ್ನೂ ಲಕ್ಷಿಸದೆ ತೆಲುಗು ಗಂಗಾ ಯೋಜನೆಯನ್ನು ಮುಗಿಸಿ ಅದರಿಂದ ಇರಿಗೇಷನ್‌ಗೆ ನೀರನ್ನು ಉಪಯೋಗಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ನಾನು ಆಂಧ್ರ ಪ್ರದೇಶದ ಸಾರ್ವಭೌಮ, ನಾನು ಈ ಯೋಜನೆಯನ್ನು ಮಾಡಿಯೇ ಮಾಡುತ್ತೇನೆಂದು ಅವರು ಹೇಳಿದ್ದಾರೆ. ಶ್ರೀಮಾನ್ ದೇವೇಗೌಡರು ಕೂಡ ೩-೪ ತಿಂಗಳಿನಿಂದ ಒಂದು ಕಠಿಣವಾದ ನಿಲುವನ್ನು ತೆಗೆದುಕೊಂಡಿದ್ದಾರೆ ಕಾವೇರಿ ನೀರನ್ನು ರಕ್ಷಣೆ ಮಾಡುತ್ತೇನೆ, ತೆಲುಗು ಗಂಗಾ ಯೋಜನೆಯಿಂದ ಕೃಷ್ಣಾ ನೀರನ್ನು ರಕ್ಷಣೆ ಮಾಡುತ್ತೇನೆ. ಇಲ್ಲದೆ ಹೋದರೆ ನಾನು ಈ ಸ್ಥಾನದಲ್ಲಿ ಇರಲಿಕ್ಕೆ ನಾಲಾಯಕ್ ಇದ್ದೇನೆಂದು ಬಹಳ ದೀರ್ಘವಾಗಿ ಭಾಷಣ ಮಾಡಿ, ಆ ಒಂದು ನಿಲುವನ್ನು ತೆಗೆದುಕೊಂಡಿದ್ದಾರೆ. ಕನ್ನಡ ನಾಡಿನ ರೈತರುಗಳಿಗೆ ಸೇವೆಯನ್ನು ಮಾಡುತ್ತೇನೆ ಅದಕ್ಕಾಗಿ ನಾನು ನನ್ನನ್ನೇ ಮುಡಿಪಿಡುತ್ತೇನೆಂದು ಎದೆ ತಟ್ಟಿಕೊಂಡು ಭಾಷಣ ಮಾಡಿದರು.

ನಾನು ಅಂಕಿ ಅಂಶಗಳನ್ನು ಹೇಳುತ್ತಾ ಇಲ್ಲ. ಈಗ ನಾವು ಅವರಿಗೆ ಮದುವೆ ಮಾಡಿದ್ದೇವೆ. ಅವರ ಕರ್ತವ್ಯ ಅವರು ಮಾಡಬೇಕು. ನಿಮಗೆ ನಾವು ಮಂತ್ರಿಗಳನ್ನಾಗಿ ಮಾಡಿದ್ದೇವೆ. ನಿಮಗೆ ಜವಾಬ್ದಾರಿಯನ್ನು ಕೊಟ್ಟಿದ್ದೇವೆ. ಪುನಃ ನೀವು ಹೊರಕ್ಕೆ ಹೋಗಿ ಒಳಗೆ ಬಂದಿದ್ದೀರಿ. ಕನ್ನಡ

ನಾಡಿನ ರೈತರ ಉದ್ಧಾರ ಮಾಡುವುದಕ್ಕೋಸ್ಕರವಾಗಿ ಆಡಳಿತಕ್ಕೆ ಬಂದಿದ್ದೀವಿ. ಈಗ ಎನ್.ಟಿ.ಆರ್ ನಿಲುವು ಏನು ಇದೆ ಅಂದರೆ

"We are nothing to do with Karnataka"

ಎಂದು ಹೇಳುತ್ತಾರೆ. ಈ ನೀರಿನ ಪಾಲಿನಲ್ಲಿ ಮಹಾರಾಷ್ಟ್ರ ಇದೆ, ಕರ್ನಾಟಕ ಇದೆ, ಆಂಧ್ರ ಪ್ರದೇಶ ಇದೆ. ಈಗ ಮಹಾರಾಷ್ಟ್ರದವರು ಏನೇ ಮಾಡಲಿ, ಆದರೆ ನಾವು ನಮಗೆ ನ್ಯಾಯವಾಗಿ ದೊರಕಬೇಕಾದ ನೀರನ್ನು ರಕ್ಷಣೆ ಮಾಡಿಕೊಳ್ಳತಕ್ಕಂಥಾದ್ದು ನಮ್ಮ ಕರ್ತವ್ಯವಾಗಿದೆ. ಆ ದಿಶೆಯಲ್ಲಿ ನಮ್ಮ ಕರ್ತವ್ಯವನ್ನು ನಾವು ಮಾಡಬೇಕು. ಹಿಂದೆ ಶ್ರೀಮಾನ್ ದೇವರಾಜ್ ಅರಸ್‌ರವರು ಕಾವೇರಿ ನದಿ ನೀರನ್ನು ಸರಿಯಾಗಿ ಬಳಸಬೇಕೆಂದು upper riperien rights, ಸಲುವಾಗಿ ಯಾವ ರೀತಿಯಾಗಿ ಅವರು ಯೋಜನೆಗಳನ್ನು ಹಾಕಿಕೊಂಡು ಯಶಸ್ವಿಯಾದರು ಹಾಗೆಯೇ ನೀವೂ ಕೂಡ ಈ ನೀರನ್ನು ತಡೆದು ಅದರ ಉಪಯೋಗ ಮಾಡಿಕೊಳ್ಳಲಿಕ್ಕೆ ಏನೇನು ಪ್ರಯತ್ನಗಳನ್ನು ಮಾಡುತ್ತೀರಿ? ಅದಕ್ಕಾಗಿ ಎಷ್ಟು ಹಣವನ್ನು ಖರ್ಚು ಮಾಡುವುದಕ್ಕೆ ತಯಾರಾಗಿದ್ದೀರಿ? ಅದನ್ನು ಹೇಳಬೇಕು, ಅದನ್ನು ಬಿಟ್ಟು ಸುಮ್ಮನೆ ಶಹಬಾಶ್‌ಗಿರಿಯನ್ನು ಗಿಟ್ಟಿಸಿಕೊಳ್ಳುವುದಕ್ಕೆ ಧೀರತನದಿಂದ, ದಿಟ್ಟತನದಿಂದ ಮಾತನಾಡಿದರೆ ಯಾವ ಉಪಯೋಗವೂ ಇದರಿಂದ ಆಗುವುದಿಲ್ಲ, ನೀವು ಈ ಯೋಜನೆಗೆ ಸಾಕಷ್ಟು ಹಣವನ್ನು ಒದಗಿಸಿ ಕೊಡಬೇಕು. ಕಟ್ಟೆ ಕಟ್ಟಬೇಕು ನಮ್ಮ ಪಾಲಿನ ನೀರನ್ನು ಪೂರ್ಣವಾಗಿ ನಾವು ಉಪಯೋಗ ಮಾಡುವಂಥಾಗಬೇಕು. ಆ ದೃಷ್ಟಿಯಿಂದ ನಾನು ಈ ಮಾತುಗಳನ್ನು ಹೇಳುತ್ತಿದ್ದೇನೆ. ಈಗ ನೀವು ಈ ಯೋಜನೆಗಾಗಿ ೩೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕು, ಅದನ್ನು ಎಲ್ಲಿಂದ ತರುತ್ತೀರಿ? ಹಣವನ್ನು ಬೇಕಾದರೆ ವಿಶ್ವ ಬ್ಯಾಂಕ್‌ನಿಂದ ತೆಗೆದುಕೊಂಡು ಬನ್ನಿ. ಅವರು ಏಕೆ ಕೊಡುವುದಿಲ್ಲ ಎಂದು ಹೇಳುತ್ತಾರೆ? ಒಂದು ವೇಳೆ ನೀವು ಹಣ ತಂದು ಸರಿಯಾಗಿ ಕೆಲಸಗಳನ್ನು ಮಾಡಲಿಲ್ಲವಾದಲ್ಲಿ ಮಾತ್ರ ಅವರು ಹಣ ಕೊಡುವುದಿಲ್ಲ ಎಂದು ಹೇಳಬಹುದು. ನೀವು ಸರಿಯಾಗಿ ಕೆಲಸ ಮಾಡಿ ತೋರಿಸಿರಿ, ಅವರಿಂದ ಹಣವನ್ನು ತಂದು ಕೆಲಸ ಮಾಡಿ ನಿಮ್ಮ ಯೋಜನೆಗಳನ್ನು ಪೂರೈಸಿಕೊಳ್ಳಬಹುದು. ಹಾಗೆ ನೀವು ಈ ನೀರಾವರಿ ಕೆಲಸವನ್ನು ಪೂರೈಸಿದಲ್ಲಿ ಅಂದರೆ ಮಾನ್ಯ ದೇವೇಗೌಡರು ಇನ್ನೂ ಅಧಿಕಾರಾವಧಿಯು ಒಂದೂವರೆ ವರ್ಷದೊಳಗಾಗಿ ಈ ಯೋಜನೆಯನ್ನು ಮಾಡಿ ಮುಗಿಸಿದಲ್ಲಿ, ಜನರು ದೇವೇಗೌಡರು ಉತ್ತಮ ಕೆಲಸವನ್ನು ಮಾಡಿದರು, ದಿಟ್ಟತನದಿಂದ ಕೆಲಸ ಮಾಡಿ ತೋರಿಸಿದರು ಎಂದು ಹೇಳುತ್ತಾರೆ. ಆ ಒಂದು ಒಳ್ಳೆಯ ಹೆಸರನ್ನು ತೆಗೆದುಕೊಂಡು ದೇವೇಗೌಡರು ಹೋಗಬೇಕು ನಾವೂ ಕೂಡ ಹೊರಗೆ ಹೋಗುತ್ತೇವೆ, ಚುನಾವಣೆ ಬರುತ್ತದೆ...

ಶ್ರೀ ಎಚ್. ಡಿ. ದೇವೇಗೌಡ.— ಮಾನ್ಯ ಸಭಾಧ್ಯಕ್ಷರೇ, ಮೊಟ್ಟಮೊದಲನೆಯದಾಗಿ ಈ ಒಂದು ಚರ್ಚೆ ಆಗಲಿಕ್ಕೆ ಅವಕಾಶ ಮಾಡಿಕೊಟ್ಟದ್ದ ತಮಗೆ ಮತ್ತು ಈ ಒಂದು ಚರ್ಚೆಯಾಗಬೇಕೆಂದು ಹೇಳಿ ಅದಕ್ಕೆ ಸಹಕಾರ ನೀಡಿದಂಥ ನಮ್ಮ ವಿರೋಧ ಪಕ್ಷದ ಧುರೀಣರುಗಳಿಗೆ ನಾನು ಮೊದಲು ಆಭಾರಿಯಾಗಿದ್ದೇನೆ. ಮೊಯಿಲಿಯವರು ಮತ್ತು ಇತರ ಸ್ನೇಹಿತರು ಈ ಚರ್ಚೆ ಆಗಬೇಕೆಂದು ರುಜು ಮಾಡಿ ತಮ್ಮ ಅನುಮತಿಯನ್ನು ಕೇಳಿಕೊಂಡಿದ್ದರು. ಸದನದ ಕಾರ್ಯಕಲಾಪಗಳ ಒತ್ತಡವು ಎಷ್ಟೇ ಇದ್ದರೂ ಕೂಡ ತಾವುಗಳು ಈ ಚರ್ಚೆಗೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ಅದಕ್ಕೆ ಸಹಕರಿಸಿದ ವಿವಿಧ ರಾಜಕೀಯ ಪಕ್ಷಗಳ ಮುಖಂಡರುಗಳಿಗೂ ಕೂಡ ನಾನು ಸರಕಾರದ ಪರವಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಈಗ ಯೋಜನೆಗಾಗಿ ಹಣವನ್ನು ಹೇಗೆ ಕ್ರೋಢೀಕರಿಸಿಕೊಳ್ಳಬೇಕೆನ್ನುವುದರ ಬಗ್ಗೆ ನಾನಿಲ್ಲಿ ಉತ್ತರವನ್ನು ಕೊಡುವುದಕ್ಕೆ ಹೋಗುವುದಿಲ್ಲ. ನಾನು ಜಿಳಿಗೆ ಅಪ್ಪರ್ ತುಂಗಾ ಬಗ್ಗೆ ಮಾತನಾಡುವಾಗ ಮಾನ್ಯ ಕೆ. ಎಚ್. ಶ್ರೀನಿವಾಸ್‌ರವರು ಏನು ಹೇಳಿದರು, ಅದರ ಬಗ್ಗೆ ನಾನು ಒಪ್ಪಿಕೊಂಡಿದ್ದೇನೆ. ಇನ್ನೂ ಒಂದು ವಾರದೊಳಗಾಗಿ ಅವರು ಹೇಳಿದಂಥ ಒಂದು ಸೂಚನೆಯನ್ನು ಅನುಷ್ಠಾನಕ್ಕೆ ತರಲಿಕ್ಕೆ ಎಲ್ಲಾ ರಾಜಕೀಯ ಪಕ್ಷಗಳ ಮುಖಂಡರುಗಳನ್ನು ಕರೆದು ಒಂದು ಸಮಾವೇಶವನ್ನು ನಡೆಸಿ ಒಂದು ನಿರ್ಣಯವನ್ನು ಈ ಕುರಿತು ಮಾಡುತ್ತೇನೆ. ಮತ್ತು ಆ ನಿರ್ಣಯದ ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಇಲ್ಲಿ ಸೂಚ್ಯವಾಗಿ ಹೇಳಬಯಸುತ್ತೇನೆ.

ಇನ್ನು ತೆಲುಗು ಗಂಗಾ ಯೋಜನೆಯ ಬಗ್ಗೆ ಸರಕಾರದ ನಿಲುವು ಏನು ಎಂದು ಒಂದು ಸ್ಪಷ್ಟೀಕರಣವನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಈ ಬಗ್ಗೆ ರಾಜ್ಯದಲ್ಲಿ ಏಕೆ ಇಷ್ಟೊಂದು ಕಳವಳ ಅಥವಾ ಆತಂಕ ರಾಜ್ಯದ ಜನತೆಯಲ್ಲಿ ಬಂದಿದೆ ಎನ್ನುವುದರ ಬಗ್ಗೆ ಸ್ವಲ್ಪ ಮಟ್ಟಿಗೆ ನಡೆದಂಥ ಘಟನೆಯನ್ನು ಸ್ಮರಿಸಿಕೊಳ್ಳಬೇಕಾಗುತ್ತದೆ.

ಆಗಸ್ಟ್ 31ನೇ ತಾರೀಖು ವಿವಿಧ ರಾಜಕೀಯ ಪಕ್ಷಗಳ ಕಾಂಗ್ರೆಸ್ (ಐ)ಗೆ ಹೊರತಾಗಿ ಶಾಸಕರ ನಿಯೋಗ ಏನು ದೆಹಲಿಗೆ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಲಿಕ್ಕೆ ಹೋಯಿತು. ಮತ್ತು ಅಲ್ಲಿ ನಡೆದಂಥ ಘಟನೆಗಳ ಬಗ್ಗೆ ರಾಜಕೀಯ ಇರಬಹುದು ಅಥವಾ ಇಲ್ಲದೇ ಇರಬಹುದು, ಅವರ ಬಗ್ಗೆ ಚರ್ಚೆ ಮಾಡುವುದಕ್ಕೆ ನಾನು ಸಿದ್ಧನಿಲ್ಲ, ಏಕೆಂದರೆ ನಮ್ಮ ರಾಜ್ಯದ ಹಿತದೃಷ್ಟಿಯಿಂದ ಏನು ವಿವಿಧ ಪಕ್ಷಗಳ ಮುಖಂಡರು ಇದಕ್ಕೆ ಬೆಂಬಲ ಸೂಚಿಸಿದರು ಆದರಿಂದ ಸ್ವಲ್ಪ ಮಟ್ಟಿಗೆ ರಾಜ್ಯದ ಹಿತದೃಷ್ಟಿಯಿಂದ ಧಕ್ಕೆ ಆಗಬಹುದೆಂಬ ಕಳವಳ ನಮ್ಮೆಲ್ಲರಿಗೂ ಉಂಟಾಗುತ್ತದೆ. ಏನು ಅಪೋಜಿಷನ್ ಬ್ಯಾಕ್ಡ್ [illegible] ಡಿಮ್ಯಾಂಡ್ಸ್ ಎಂದು ಬಂತು ಇದು ಪ್ರಾಮುಖ್ಯವಾದ ವಿಚಾರ. ನಾನು ಅಂದೇ ಈ ಬಗ್ಗೆ ಕರ್ನಾಟಕದ ಪರಿಯಿಂದ ನಮ್ಮ ಪ್ರತಿಭಟನೆಯನ್ನು ಸಲ್ಲಿಸಿದ್ದೇನೆ. ವೈಯಕ್ತಿಕವಾದುದಲ್ಲ. ಆ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಗಳು ರಾಷ್ಟ್ರದ ಹೊರಗೆ ಇದ್ದುದರಿಂದ ಪತ್ರ ಬರೆಯಲಿಕ್ಕೆ ಅವರಿಗೆ ಆಗಲಿಲ್ಲ. ಆಗ ನಾನೇ ಸರ್ಕಾರದ ಪರವಾಗಿ ಪ್ರತಿಭಟನೆ ಸಲ್ಲಿಸಿದೆ. ಅದರ ಜೊತೆಗೆ ಆ ಘಟನೆಗೆ ಬೆಂಬಲಿಸಿದ ವಿವಿಧ ಪಕ್ಷಗಳ ಮುಖಂಡರಿಗೂ ನನ್ನ ಮನವಿಯನ್ನು ಕಳಿಸಿಕೊಟ್ಟಿದ್ದೇನೆ. ಏನೆಂದರೆ ಆಂಧ್ರದ ಪ್ರತಿಭಟನೆ ಏನಿದೆ ಅದಕ್ಕೆ ಅವರು ಬೆಂಬಲಿಸಿದ್ದರಿಂದ ನಮ್ಮ ರಾಜ್ಯದ ಹಿತಕ್ಕೆ ಅನಾಹುತವಾಗುತ್ತದೆ ಎಂಬ ಅಂಶವನ್ನು ಅವರ ಗಮನಕ್ಕೆ ತರಲು ಪ್ರಯತ್ನಪಟ್ಟಿದ್ದೇನೆ. ಈ ಸಂದರ್ಭದಲ್ಲಿ ಒಂದು ಹೇಳುತ್ತೇನೆ. ನಾವೆಲ್ಲರೂ ಕಾನೂನಿನ ವ್ಯಾಪ್ತಿಯಲ್ಲಿ ಕೆಲಸ ಮಾಡುವುದು ಅವಶ್ಯಕ. ಯಾವುದೇ ಸರ್ಕಾರ ತನ್ನ ಸ್ವೇಚ್ಛಾ ಪ್ರವೃತ್ತಿಯಿಂದ ಇಂತಹ ಅಂತರ್‌ರಾಜ್ಯ ಆಯಾ ರಾಜ್ಯ ಸಮಸ್ಯೆಗಳ ಬಗ್ಗೆ ನಡೆದುಕೊಳ್ಳುವುದು ಸಾಧುವಾದುದಲ್ಲ. ಕೇಂದ್ರಕ್ಕೆ ಕೂಡ ತನ್ನದೇ ಆದ ಅಧಿಕಾರ ಇದೆ. ಆ ಅಧಿಕಾರವನ್ನು ಚಲಾಯಿಸುವ ಕಾಲದಲ್ಲಿ ರಾಜಕಾರಣ ಅಡ್ಡಿ ಬರಲಿಕ್ಕೆ ಸಾಧ್ಯವಿಲ್ಲ. ಏಕೆ ಹೇಳುತ್ತಿದ್ದೇನೆಂದರೆ ಎನ್ವಯರ್ನ್‌ಮೆಂಟ್ ಕ್ಲಿಯರೆನ್ಸ್ ಬರಲು ಇಷ್ಟೆಲ್ಲ ಒತ್ತಡಗಳು ಬಂದಿವೆ, ಆದ್ದರಿಂದ ನಾವು ಮಾಡೋಣ ಎಂಬ ದೌರ್ಬಲ್ಯಕ್ಕೆ ಅವಕಾಶ ಕೊಡಬಾರದೆಂದು ಹೇಳಲಿಕ್ಕೆ ಇಷ್ಟಪಡುತ್ತೇನೆ ಒಂದು ನ್ಯಾಯ ಪಂಚಾಯಿತ್ತು ತೀರ್ಮಾನ ಕೊಟ್ಟ ಮೇಲೆ ಅದನ್ನು ಗೌರವಿಸುವುದು ಮುಖ್ಯ ಮತ್ತು ಅದರಂತೆ ನಡೆದುಕೊಳ್ಳಬೇಕಾದುದು ಸಂಬಂಧಪಟ್ಟ ರಾಜ್ಯಗಳ ಹೊಣೆಗಾರಿಕೆ. ಹಾಗೆ ಮುಂದೆಯೋ ಸ್ವೇಚ್ಛಾಪ್ರವೃತ್ತಿಯಿಂದ ನಡೆದುಕೊಳ್ಳಲು ಪ್ರಯತ್ನ ಮಾಡಿದರೆ ಕೇಂದ್ರ ಸರ್ಕಾರ ಕೂಡ ತನ್ನ ಕರ್ತವ್ಯ ನಿರ್ವಹಣೆ ಮಾಡಬೇಕಾಗುತ್ತದೆ. ಅವರು ಯಾವುದೇ ಮೋಟಿವ್ ಆಟ್ರಿಬ್ಯೂಟ್ ಮಾಡುವಂತಿಲ್ಲ. ಕಾನೂನಿನ ಚೌಕಟ್ಟಿನಲ್ಲಿ ಎನ್‌ಫೋರ್ಸ್ ಮಾಡತಕ್ಕಂತಹ ಅಧಿಕಾರ ಕೇಂದ್ರ ಸರ್ಕಾರಕ್ಕೆ ಇದೆ. ಅದಕ್ಕೋಸ್ಕರ ನಾನು ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದೆ. ಆ ಕಡೆ ಕೂತಿರತಕ್ಕಂತಹ ಹಿರಿಯ ಸದಸ್ಯರೇ ಇರಲಿ ಈ ಕಡೆಯ ಸದಸ್ಯರೇ ಇರಲಿ ಯಾರೇ ಇರಲಿ ನಮ್ಮೆಲ್ಲರಿಗೂ ರಾಜ್ಯದ ಹಿತ ಮುಖ್ಯ. ಪಕ್ಷದ ಪ್ರಶ್ನೆ ಇದರಲ್ಲಿ ಇಲ್ಲ, ಅಲ್ಲಿ ನಮ್ಮ ಪಕ್ಷದವರು ಈ ಡಿಮ್ಯಾಂಡಿಗೆ ಒತ್ತಾಸೆ ಕೊಟ್ಟರೆ ಅದರ ಬಗ್ಗೆ ಪ್ರತಿಭಟನೆ ಮಾಡಿ ಪತ್ರ ಬರೆದಿದ್ದೇನೆ, ನಿಮ್ಮ ನಿಲವು ಸರಿಯಲ್ಲವೆಂದು ಅದರಲ್ಲಿ ತಿಳಿಸಿದ್ದೇನೆ. ಹಿಂದಿನ ಮುಖ್ಯ ಮಂತ್ರಿಗಳು ಅವರ ನಿಲುವಿನಲ್ಲಿ ಮಾರ್ಪಾಡು ಮಾಡಿಕೊಂಡಿದ್ದಾರೆ ಅನ್ನತಕ್ಕಂತಹ ಪತ್ರಿಕಾ ವರದಿ ಆಧಾರದ ಮೇಲೆ ಮಾನ್ಯ ಮೊಯಿಲಿಯವರು ಮತ್ತು ಮಾನ್ಯ ಧರ್ಮಸಿಂಗ್‌ರವರು ಸಭೆಯ ಗಮನವನ್ನು ಸೆಳೆಯಲಿಕ್ಕೆ ಪ್ರಯತ್ನ ಮಾಡಿದರು. ಈ ಸಂಬಂಧದಲ್ಲಿ ಸ್ಪಷ್ಟೀಕರಣ ಮಾಡುವುದಕ್ಕೆ ಇಷ್ಟಪಡುತ್ತೇನೆ. ಮುಖ್ಯ ಮಂತ್ರಿಗಳ ನಿಲುವು ಅಥವಾ ನೀರಾವರಿ ಮಂತ್ರಿಗಳ ನಿಲುವು ಯಾವುದರಲ್ಲೂ ವ್ಯತ್ಯಾಸವಿಲ್ಲ, ರಾಜ್ಯದ ನಿಲುವು ಒಂದೇ ಇದೆ. ಯಾವುದೇ ಕಾರಣದಿಂದ ತೆಲುಗು ಗಂಗಾ ಯೋಜನೆಗೆ ಕ್ಲಿಯರೆನ್ಸ್ ಕೊಡುವುದಕ್ಕೆ ಸಾಧ್ಯವಿಲ್ಲ ಅನ್ನತಕ್ಕಂಥಾದ್ದನ್ನು ದಿನಾಂಕ [illegible] ಸೆಪ್ಟೆಂಬರ್‌ನಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಪ್ರಧಾನ ಮಂತ್ರಿಗಳಿಗೆ ತಿಳಿಸಿದ್ದಾರೆ. ಯಾವುದೇ ಕಾರಣದಿಂದ ತೆಲುಗು ಗಂಗಾ ಯೋಜನೆಗೆ ತಾವು ಅನುಮತಿ ಕೊಡಕೂಡದೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಅದನ್ನು ಓದಲಿಕ್ಕೆ ತಮ್ಮ ಅನುಮತಿ ಕೋರುತ್ತೇನೆ. ಅದು ಈ ರೀತಿ ಇದೆ.

"The reported clearance of the project from the environmental angle from the Govt. of India will highly distur-

bing as it rain forces the impression that the andhra pradesh Govt has won in its pursuit of the Telugu-Ganga project in its present from" ಎಂದು ತೆಲುಗಂ ಗಂಗಾ ಬಗ್ಗೆ ಕ್ಲಿಯರ್ ಆಗಿ ಹೇಳಿದ್ದಾರೆ. ಪತ್ರಿಕೆಯಲ್ಲಿ ವರದಿಯಾಗಿದೆ ವರದಿಯಾಗಿರುವ ಬಗ್ಗೆ ವಿವರಣೆಯನ್ನು ಕೊಟ್ಟಿದ್ದಾರೆ. ತಮ್ಮ ನಿಲುವನ್ನು ಯಾವುದೇ ರೀತಿಯಾಗಿ ಬದಲಾವಣೆ ಮಾಡತಕ್ಕಂಥಾದ್ದಕ್ಕೆ ಅವಕಾಶವಿಲ್ಲ ಅನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಸುತ್ತೇನೆ. ಅದರ ಜೊತೆಗೆ ಮಾರ್ಚ್ ತಿಂಗಳಲ್ಲಿ ಕ್ಲಿಯರೆನ್ಸ್ ಸಿಕ್ಕಬಹುದು ಅನ್ನತಕ್ಕಂತಹ ಸೂಚನೆ ನನಗೆ ಸಿಕ್ಕಿದ್ದು ನಮ್ಮ ಅಧಿಕಾರಿಗಳ ಜೊತೆ ದೆಹಲಿಗೆ ಹೋಗಿ ಸಂಬಂಧಪಟ್ಟಂತಹ ಮಂತ್ರಿಗಳನ್ನು ಭೇಟಿ ಮಾಡಿ ಲಿಖಿತವಾಗಿ ಪ್ರೊಟೆಸ್ಟ್ ಅನ್ನು ಕೊಟ್ಟಿದ್ದೇವೆ. ಯಾವುದೇ ಕಾರಣದಿಂದ ಕ್ಲಿಯರೆನ್ಸ್ ಕೊಡಲಿಕ್ಕೆ ಸಾಧ್ಯವಿಲ್ಲವೆಂದು ಸ್ಪಷ್ಟವಾದ ನಮ್ಮ ನಿಲುವನ್ನು ಅವರ ಮುಂದೆ ಇಟ್ಟಿದ್ದೇವೆ. ಯಾವ ಸಂದರ್ಭದಲ್ಲೂ ಕರ್ನಾಟಕ ಮೈಸೂರತು ಇದರ ಬಗ್ಗೆ ತನ್ನ ಪ್ರತಿಭಟನೆಯನ್ನು ಸಲ್ಲಿಸತಕ್ಕಂಥದ್ದಾಗಲೀ ಅಥವಾ ಕೇಂದ್ರ ಸರ್ಕಾರಕ್ಕೆ ನಮ್ಮ ನಿಲುವು ಏನುವೆನ್ನುವುದನ್ನು ತಿಳಿಸತಕ್ಕಂಥಾದ್ದರಲ್ಲಾಗಲಿ ಹಿಂದೆ ಬಿದ್ದಿಲ್ಲ. ಇದುವರೆಗೆ ಸೂಕ್ತವಾಗಿ ತಿಳಿಸುವುದಕ್ಕೆ ಇಚ್ಛೆ ಪಡುತ್ತೇನೆ, ಆಂಧ್ರ ಸರಕಾರದಿಂದ ಏನೇ ಒತ್ತಡ ಬರಲಿ ಅದಕ್ಕೆ ಪ್ರಧಾನ ಮಂತ್ರಿಗಳು ಆಗಲೀ ಇತರ ಮಂತ್ರಿಗಳಾಗಲೀ, ಕೇಂದ್ರ ಸರ್ಕಾರವಾಗಲೀ ಮಣಿಯಬಾರದು ಎಂದು ಈ ಸದನದ ಮೂಲಕ ಅವರಲ್ಲಿ ಕೇಳಿಕೊಳ್ಳುವುದಕ್ಕೆ ಇಚ್ಛೆ ಪಡುತ್ತೇನೆ. ಎಷ್ಟೋ ರಾಜಕೀಯದ ಒತ್ತಡವನ್ನು ಅವರು ತರಲೀ ಎಷ್ಟೋ ಪ್ರತಿಷ್ಠೆಯ ಮಾತಗಳನ್ನಾಡಲೀ ಅದಕ್ಕೆ ಮಣಿಯಬಾರದೆಂದು ಹೇಳಿದ್ದೇವೆ, ಪ್ರತಿಯೊಬ್ಬರೂ ಕಾನೂನಿಗೆ ದೊಡ್ಡವರು ಅಲ್ಲ ಅದಕ್ಕೆ ನಾವೆಲ್ಲರೂ ತಲೆಬಾಗಬೇಕಾಗುತ್ತದೆ. ಈ ದೇಶದಲ್ಲಿ ರಾಜಕೀಯ ಹೊಂದಾಣಿಕೆಗಳು ಆಗುತ್ತವೆ ಹಾಗೂ ರಾಜಕಾರಣದಲ್ಲಿ ಬದಲಾವಣೆಗಳಾಗುತವೆ. ಅದಕ್ಕೂ ರಾಜ್ಯದ ಹಿತಾಸಕ್ತಿಯನ್ನು ಕಾಪಾಡತಕ್ಕಂಥಾದ್ದಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ರಾಜ್ಯದ ಹಿತಾಸಕ್ತಿಯನ್ನು ಬಲಿಕೊಟ್ಟು ರಾಷ್ಟ್ರದ ರಾಜಕಾರಣದ ಇಂದಿನ ಸನ್ನಿವೇಶದಲ್ಲಿ ಏನು ಬದಲಾವಣೆಗಳಾಗುತ್ತಿದೆ ಅದಕ್ಕೂ ಇದಕ್ಕೂ ಸಂಬಂಧವಿಲ್ಲ. ನನಗೆ ಅದು ಮುಖ್ಯವಲ್ಲ. ನನಗೆ ಈ ರಾಜ್ಯದ ಹಿತ ಮುಖ್ಯವೇ ಹೊರತು ರಾಜಕೀಯ ಬದಲಾವಣೆಯಲ್ಲಿ ಹೊಂದಾಣಿಕೆಯಾಗತಕ್ಕಂಥಾದ್ದು ಮುಖ್ಯವಲ್ಲ. ಜನರ ಹಿತವನ್ನು ಬಲಿ ಕೊಡುವುದಕ್ಕೆ ನಾನು ಸಿದ್ಧನಿಲ್ಲ ಎನ್ನುವುದನ್ನು ಬಹಳ ಸ್ಪಷ್ಟವಾದ ಭಾಷೆಯಲ್ಲಿ ಹೇಳುತ್ತೇನೆ.

೪-೩೦ ಪಿ.ಎಂ.

ಸ್ವಾಮಿ ನಮ್ಮ ಪಕ್ಷದ ಮುಖಂಡರಾಗಿರತಕ್ಕಂಥ ಪಾರ್ಲಿಮೆಂಟ್‌ನ ನಾಯಕರು ಯಾರು ಇದ್ದಾರೆ ಅವರು ಬರೆದಂತಹ ಉತ್ತರವನ್ನು ಸಭೆಯ ಮುಂದೆ ಓದಲು ಇಚ್ಛೆಪಡುತ್ತೇನೆ, "Probably you are aware that I do not agree with the claim of the Andhra Pradesh Government regarding Telugu Ganga Project." This is the letter written by Professor Madhu Dandavate. ಅದೇ ರೀತಿ ಬಿ.ಜೆ.ಪಿ. ನಾಯಕರಿಗೆ ಬರೆದಿರತಕ್ಕದ್ದನ್ನು, ಸಿ.ಪಿ.ಐ. ಹಾಗೂ ಸಿ.ಪಿ.ಎಂ ನಾಯಕರಿಗೆ ಬರೆದಿದ್ದನ್ನು, ಮತ್ತು ತೆಲುಗು ದೇಶಂ ನಾಯಕರಾದ ಉಪೇಂದ್ರರವರಿಗೆ ಬರೆದಿದ್ದನ್ನು, ಅವರು ಬರೆದಿರತಕ್ಕ ರಿಪ್ಲೈ ಅನ್ನು, ಅದರಲ್ಲಿನ ರಿಲೆವೆಂಟ್ ಪೋರ್ಷನ್ ಅನ್ನು ಮಾತ್ರ ಓದುತ್ತೇನೆ. "We are equally concerned with the interest of the people of Karnataka and other neighbouring States. We do not want anything to be done to the detriment of the interest of these States." ಉಪೇಂದ್ರರವರು ಮೆಮೊರ್ಯಾಂಡಮ್‌ನಲ್ಲಿ ಏನು ಕೊಟ್ಟಿದ್ದಾರೆ ಅದರ ಕಾಪಿಯನ್ನು ತರಿಸಿದ್ದೇನೆ. ಅವರು ಒಂದು ಮಾತನ್ನು ಹೇಳಿದ್ದಾರೆ. ಅದು ಏನೆಂದರೆ "Since the question of Telugu Ganga has been mentioned by 14 Congress-I M.Ps. I would clarify that Andhra Pradesh does not want to execute any scheme against the interest of the neighbouring States. The Telugu Ganga scheme is being implemented within the parameters of Bachawat Commission

Report. Andhra Pradesh could use surplus Krishna Waters without claiming it as a right. "I would emphasise on the sentence" without claiming it as a right. " ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಮೆಮೊರ್ಯಾಂಡಮ್ ಸಬ್ಮಿಟ್ ಮಾಡತಕ್ಕ ಕಾಲದಲ್ಲಿ ಇವೊತ್ತು ಸುಮಾರು ೮೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಕಟ್ಟತಕ್ಕ ಈ ತೆಲುಗು ಗಂಗಾ ಯೋಜನೆ ಯಾವ ನೈತಿಕ ಹಕ್ಕಿನ ಆಧಾರದ ಮೇಲೆ ಅಥವಾ ಯಾವ ಕಾನೂನಿನ ಚೌಕಟ್ಟಿನಲ್ಲಿ ಆಂಧ್ರ ಪ್ರದೇಶದವರು ಇಂತಹ ಒಂದು ಒತ್ತಡವನ್ನು ಕೇಂದ್ರ ಸರ್ಕಾರದ ಮೇಲೆ ತರಲಿಕ್ಕೆ ಸಾಧ್ಯವಾಯಿತು. ೮೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡತಕ್ಕದ್ದು ಒಂದು ಕಡೆ ಮತ್ತು ನಮ್ಮ ಪಾಲಿನ ನೀರಿನ ಮೇಲೆ ಹಕ್ಕನ್ನು ಎಂದೂ ಪ್ರತಿಪಾದನೆ ಮಾಡಲಿಕ್ಕೆ ಹೋಗುವುದಿಲ್ಲ ಎಂದು ಹೇಳತಕ್ಕದ್ದು ಇನ್ನೊಂದು ಕಡೆ. ಅವರು ಸಬ್ಮಿಟ್ ಮಾಡಿರತಕ್ಕ ಮೆಮೊರ್ಯಾಂಡಮ್ ಕೇಂದ್ರ ಸರ್ಕಾರದಲ್ಲಿದೆ. ಆದರಿಂದ ಏನು ನಮ್ಮ ಮುಖ್ಯಮಂತ್ರಿಗಳು ೧೫ ಟಿ.ಎಂ.ಸಿ. ನೀರನ್ನು ಮದ್ರಾಸಿಗೆ ಕೊಡತಕ್ಕದ್ದು, ಇದರಲ್ಲಿ ನಮ್ಮ ಭಾಗದ ೫ ಟಿ.ಎಂ.ಸಿ. ಯನ್ನು ಮದ್ರಾಸಿಗೆ ಬಿಟ್ಟುಕೊಡತಕ್ಕದ್ದು ಅದು ದೇವರಾಜ್ ಅರಸ್ ಅಥವಾ ಇಶ್ರೀಚೆಗೆ ಹೇಳಿರತಕ್ಕದ್ದು ಆಗಿರಲಿ, ಅಥವಾ ಇಂತಹ ಹೇಳಿಕೆ ಹೇಳಿಕೊಂಡು ಬಂದಿರಲಿ. ಆದರೆ ಅವತ್ತು ಏನು ಷರತ್ತು ಇದೆ, ಆ ಎಲ್ಲಾ ಷರತ್ತುಗಳನ್ನು ಉಲ್ಲಂಘನೆ ಮಾಡಿ ಇವೊತ್ತು ತೆಲುಗು ಗಂಗಾ ಯೋಜನೆಗೆ ತಮ್ಮ ಮನಸ್ಸಿಗೆ ಬಂದ ಹಾಗೆ, ತಮ್ಮ ಇಚ್ಛೆಗೆ ಬಂದ ಹಾಗೆ ರೂಪಿಸಿಕೊಂಡು ಕಾರ್ಯಗತ ಮಾಡುತ್ತೇವೆಂದು ಹೇಳುವುದು ಒಂದು ಕಡೆ ಆದರೆ ಮತ್ತೊಂದು ಕಡೆ ಈ ನೀರಿನ ಮೇಲೆ ಸರ್ಪ್ಲಸ್ ವಾಟರ್ ಮೇಲೆ ನಮ್ಮ ಹಕ್ಕನ್ನು ಪ್ರತಿಪಾದನೆ ಮಾಡುವುದಿಲ್ಲ ಎಂದು ಮತ್ತೊಂದು ಕಡೆ ಹೇಳುವಾಗ ಕೇಂದ್ರ ಸರ್ಕಾರ ಯಾವ ಕಾರಣದಿಂದ ಇದಕ್ಕೆ ಕ್ಲಿಯರೆನ್ಸ್ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಅವರಿಂದ ವಿವರಣೆಯನ್ನು ಕೇಳುವ ಶಕ್ತಿ ಕೇಂದ್ರ ಸರ್ಕಾರಕ್ಕೆ ಇದೆ. ಇವೊತ್ತು ಅವರು ೮೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಇನ್ನೊಂದು ಕಡೆ ಸರ್ಪ್ಲಸ್ ವಾಟರ್‌ಗೆ ನಾವು ರೈಟ್ಸ್ ಅನ್ನು ಎಸ್ಟಾಬ್ಲಿಷ್ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುವುದಿಲ್ಲ ಎಂದು ಪ್ರತಿಪಾದನೆ ಮಾಡಿದರೆ, ಹೀಗಿರುವಾಗ ಈ ಕಾಲದಲ್ಲಿ ಇವೊತ್ತು ತೆಲುಗು ಗಂಗಾ ಯೋಜನೆಗೆ ನಾವು ಕ್ಲಿಯರೆನ್ಸ್ ಕೊಡತಕ್ಕದ್ದಕ್ಕೆ ನಾವು ನಿಮ್ಮನ್ನು ಹೇಗೆ ಕನ್‌ವಿನ್ಸ್ ಮಾಡುತ್ತೀರಿ ಎಂದು ಕೇಳತಕ್ಕದ್ದು ಕೇಂದ್ರ ಸರ್ಕಾರಕ್ಕೆ ಸಾಧ್ಯವಿಲ್ಲವೆಂದು ಭಾವಿಸಿದ್ದೇನೆ. ಆದರೆ ಒಂದು ಮಾತನ್ನು ಇಲ್ಲಿ ಹೇಳಬೇಕಾಗುತ್ತದೆ. ಇದು ರಾಜ್ಯದ ದುರ್ದೈವ ಎಂದು ಹೇಳಬೇಕಾಗುತ್ತದೆ. ಇವತ್ತಿನದು ಅಲ್ಲ. ನಮ್ಮ ಸ್ನೇಹಿತರು ಹೇಳಿದರು ಶ್ರೀಮಾನ್ ಕೆ.ಎಲ್.ರಾಯ್ ಅವರ ಕಾಲದಲ್ಲಿ ಏನೇನು ಹೇಳಿದರು ಎಂದು. ಇದರ ಬಗ್ಗೆ ಹಳೆಯ ಚರ್ಚೆಗಳನ್ನು ನಾನು ಮೆಲುಕು ಹಾಕಲಿಕ್ಕೆ ಹೋಗುವುದಿಲ್ಲ. ಇವೊತ್ತು ಕೂಡ ಒಬ್ಬ ಆಂಧ್ರದ ಹಿರಿಯ ನಾಯಕರು ಸೆಂಟ್ರಲ್ ವಾಟರ್ ಪವರ್ ಕಮೀಷನ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅವರು ಕರ್ನಾಟಕದ ನಿಲುವಿನ ಬಗ್ಗೆ ತೀವ್ರತರವಾದ ಆಕ್ಷೇಪಣೆಗಳನ್ನು ಎತ್ತಿದ್ದಾರೆ. ಇಂತಹವರು ಸೆಂಟ್ರಲ್ ವಾಟರ್ ಪವರ್ ಕಮೀಷನ್‌ನಲ್ಲಿ ಕುಳಿತುಕೊಳ್ಳುವುದಾದರೆ ಅವರು ಈ ರೀತಿ ವರ್ತಿಸುವುದಾದರೆ ಇವೊತ್ತು ಈ ಒಂದು ಆಯೋಗದ ತೀರ್ಪಿಗೆ ವಿರುದ್ಧವಾಗಿ ನಡೆದುಕೊಳ್ಳುವುದಾದರೆ ಸರ್ಕಾರದ ಪರವಾಗಿ ಕಮೀಷನ್‌ನಲ್ಲಿ ಕುಳಿತುಕೊಂಡು ವಕೀಲಿ ಮಾಡತಕ್ಕ ಮೆಂಬರ್ಸ್ ಅಲ್ಲಿ ಇರುವುದಾದರೆ ಇದು ಹೇಗೆ ಸಾಧ್ಯವಾದೀತು. ನಾನು ಇಷ್ಟೇ ಈ ಸಂದರ್ಭದಲ್ಲಿ ಒತ್ತಾಯದಿಂದ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಯಾವುದೇ ವಿರೋಧಿ ಪಕ್ಷಗಳ ಗುಂಪಿನಲ್ಲಿ ಸೇರಿ ಹೋಗಿ ಪ್ರಧಾನ ಮಂತ್ರಿಗಳ ಮುಂದೆ ಈ ಒಂದು ಬೆಂಬಲವಾಗಿ ಕೊಟ್ಟಿದ್ದಾರೆ ಎನ್ನತಕ್ಕಂಥ ಭಾವನೆ ಇತ್ತು. ಇವತ್ತು ಈ ಎರಡು ಕಾಗದಗಳನ್ನು ಸಭೆಯ ಮುಂದೆ ಅವರಿಂದ ಬಂದಂಥ ಉತ್ತರಗಳನ್ನು ನಾನು ಸಭೆಯ ಗಮನಕ್ಕೆ ತಂದಿದ್ದೇನೆ ಎಂದು ಅದರ ಅರ್ಥವಾಗುತ್ತದೆ. ಆಂಧ್ರ ಸರ್ಕಾರ ಈ ಒಂದು ಒತ್ತಡಕ್ಕೆ ಯಾರು ಯಾವುದೇ ರಾಜಕೀಯ ಪಕ್ಷಗಳು ಇವತ್ತು ಒತ್ತಾಸೆಯನ್ನು ಕೊಡತಕ್ಕಂಥದ್ದು ಸಾಧ್ಯವಿಲ್ಲ ಎನ್ನುವುದು ವ್ಯಕ್ತವಾಗುತ್ತದೆ. ಅದರ ಜೊತೆಗೆ ಕೇಂದ್ರ ಸರ್ಕಾರಕ್ಕೆ ಮತ್ತೊಮ್ಮೆ ಸರ್ವಪಕ್ಷದ ನಿಯೋಗ ಹೋಗುತ್ತದೆ ಎನ್ನತಕ್ಕಂಥ ಮಾತನ್ನು ಏನು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ, ಅದರ ಬಗ್ಗೆ ಅವರು ಪತ್ರವನ್ನು ಬರೆದಿದ್ದಾರೆ, ಇನ್ನೂ ದಿನ ಗೊತ್ತಾಗಿಲ್ಲ, ಬಹುಶಃ ಇವತ್ತಲ್ಲ ನಾಳೆ ಪ್ರಧಾನಮಂತ್ರಿಗಳನ್ನು ಭೇಟಿ ಮಾಡುವುದಕ್ಕೆ ಸಾಧ್ಯ ಆಗುತ್ತದೆ. ಕಾಲ ಅವರಿಗೆ ಹೇಗೆ ಸೂಕ್ತವಾಗುತ್ತದೆ ಎಂಬುದನ್ನು ನೋಡಿಕೊಂಡು ಒಂದು ದಿನವನ್ನು ಅವರು ಗೊತ್ತು ಮಾಡಬಹುದು. ಪ್ರಾಯಶಃ ೨೩ನೇ ತಾರೀಖು ಅಂಥ ಒಂದು ಅವಕಾಶ ಸಿಗಬಹುದು ಎಂದು

ಹೇಳುತ್ತೇನೆ. ಅದು ಇನ್ನೂ ಕನ್‌ಫರ್ಮ್ ಆಗಿಲ್ಲ, ಈ ವಿಷಯ ಗೊತ್ತಾಗಿದೆ. ನಾವೆಲ್ಲರೂ ರಾಜ್ಯದ ಎಲ್ಲಾ ಪಕ್ಷಗಳ ಹಿರಿಯ ಮುಖಂಡರುಗಳು ನಿಯೋಗದಲ್ಲಿದ್ದು ಪ್ರಧಾನಮಂತ್ರಿಗಳ ಮುಂದೆ ರಾಜ್ಯ ಸರ್ಕಾರ ಈ ಬಗ್ಗೆ ಪ್ರತಿಪಾದನೆ ಮಾಡುತ್ತದೆ, ಅದರ ಜೊತೆಗೆ ಇವತ್ತು ಈ ಸದನದ ಮುಖೇನ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈಗ ಇಲ್ಲಿ ಕತ್ತಿ ಗುರಾಣಿಯನ್ನು ಹಿಡಿದುಕೊಂಡು ಯಾರು ಹೋರಾಟ ಮಾಡಲಿಕ್ಕೆ ಆಗುವುದಿಲ್ಲ. ನಮ್ಮ ಮುಂದೆ ಇರತಕ್ಕಂಥ ಪ್ರತಿಭಟನೆಯನ್ನು ಸಲ್ಲಿಸತಕ್ಕಂಥದ್ದು ಹೇಗೆ? ಪತ್ರವನ್ನು ಬರೆದು ಹೇಳುತ್ತೇನೆ, ನಿಯೋಗ ಹೋಗಿ ಹೇಳುತ್ತದೆ, ಇಂಥ ಸಂದರ್ಭದಲ್ಲಿ ಸದನದಲ್ಲಿ ಕೂತು ಚರ್ಚೆ ಮಾಡಿ ಇಡೀ ಸದನದ ಒಟ್ಟು ಅಭಿಪ್ರಾಯವನ್ನು ತಿಳಿಸುವುದಕ್ಕೆ ನಾವು ಪ್ರಯತ್ನವನ್ನು ಮಾಡುತ್ತೇವೆ. ಆದುದರಿಂದ ಯಾರು ಯಾವ ರೀತಿ ಭಾಷಣ ಮಾಡಿದರು, ಬೊಮ್ಮಾಯಿಯವರಿಗೆ ಏನು ಸಂಬಂಧ, ದೇವೇಗೌಡರು ರಿಪೀಟ್ ಅಲ್ಲ ಎಂದು ಹೇಳಿದರು, ಇದೆಲ್ಲಾ ಆಂಧ್ರದ ಮುಖ್ಯಮಂತ್ರಿಗಳು ಹೇಳುವಂಥ ಅವರ ಮಾತಿನ ದಾಟಿಯಲ್ಲಿಯೇ ನಮಗೆ ಅರ್ಥವಾಗುತ್ತದೆ. ಸ್ವಲ್ಪ ಮುತ್ಸದ್ದಿತನದಲ್ಲಿ......

ಶ್ರೀ ಆರ್. ಧರ್ಮಸಿಂಗ್.—ಆದುದರಿಂದ ರಾಜ್ಯದ ಹಿತದೃಷ್ಟಿಯಿಂದ ಸಬ್‌ಮಿಸೀವ್‌ಗೆ ಹೋಗಬೇಡಿ.

ಶ್ರೀ ಹೆಚ್. ಡಿ. ದೇವೇಗೌಡ.—ನಿಮಗೆ ಒಂದೇ ವಿಧದಲ್ಲಿ ಹೇಳುವುದಾದರೆ ಯಾವ ಸಂದರ್ಭದಲ್ಲಿ ಸಬ್ ಮಿಸೀವ್ ಆಗಿ ಇರಬೇಕು, ಎಷ್ಟು ಉಗ್ರವಾಗಿರಬೇಕು ಏನು ಎನ್ನುವುದು, ಅದರ ಬಗ್ಗೆ...

ಶ್ರೀ ಆರ್. ಧರ್ಮಸಿಂಗ್.—ಮಾನ್ಯ ಮುಖ್ಯಮಂತ್ರಿಗಳು ಆ ರೀತಿ ಮಾಡಿದ್ದಾರೆ ಎನ್ನತಕ್ಕಂಥ ಆಪಾದನೆ ಇದೆಯೆಲ್ಲಾ, ಅದರ ಬಗ್ಗೆ ನಾನು ಹೇಳುತ್ತಿರುವುದು.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಮುಖ್ಯಮಂತ್ರಿಗಳ ಪತ್ರವನ್ನು ಓದುತ್ತೇನೆ. ಆದು ಪತ್ರಿಕಾ ವಿರೋಧಿ ಎನ್ನುವುದನ್ನು ನೀವೇ ಹೇಳಿದ್ದೀರಿ, ರಾಮೋಜಿರಾವ್ ಪತ್ರ ಎಂದು ಹೇಳಿದ್ದೀರಿ. ಸರಿ ಗೊತ್ತಾಯಿತಲ್ಲಾ. ರಾಷ್ಟ್ರೀಯ ಪತ್ರಿಕೆಗಳು ಹೇಗೆ ಹೇಗೆ ಒಂದೊಂದು ಸಾರಿ ವರ್ತನೆ ಮಾಡುತ್ತವೆ ಎನ್ನುವುದನ್ನು ಹೆಚ್ಚಿಗೆ ಹೇಳುವುದಕ್ಕೆ ನಾನು ಹೋಗುವುದಿಲ್ಲ. ಎಲ್ಲ ಪತ್ರಿಕೆಗಳು ಅಲ್ಲ. ಅದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಸ್ಪಷ್ಟೀಕರಣವನ್ನು ಮಾಡಿದ್ದಾರೆ. ಆದ್ದರಿಂದ ಅವರು ಬರೆದಿರತಕ್ಕಂಥ ಪತ್ರದ ಇಂಪಾರ್‌ಟೆಂಟ್ ಪ್ಯಾರಾ ಮಾತ್ರ ಓದುತ್ತೇನೆ. ಸಭೆಯ ಕಾಲವನ್ನು ಹೆಚ್ಚಿಗೆ ನಾನು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.—ಇಷ್ಟೇ ಹೇಳಿದ್ದಲ್ಲ, ಮುಂದೆ ಹೋಗಿ ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆ ಎಂದರೆ, "It will be a feather in the cap of United Opposition if the matter could be solved initially between the two States which are under the rule of Non-Congresss Governments." ನಿಮ್ಮ ವಿರೋಧ ಪಕ್ಷದ ಏಕತೆಯ ಪ್ರಯತ್ನದಲ್ಲಿ ನಮ್ಮ ಕರ್ನಾಟಕ ಬಡವಾಗಬಾರದು ಎಂದು ಅಷ್ಟೆ ನಾವು ಹೇಳುವುದು.

(ಗೊಂದಲ)

ಶ್ರೀ ಎಂ. ಚಂದ್ರಶೇಖರ್.—ಅದನ್ನು ಉಪೇಂದ್ರರವರು ಕೂಡಾ ಒಪ್ಪಿಕೊಂಡಿದ್ದಾರೆ.

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ.—ಸನ್ಮಾನ್ಯ ಬೊಮ್ಮಾಯಿಯವರು ನವಿಲು ಗರಿಯನ್ನು ಹಾಕುವಂಥ ಆತುರದಲ್ಲಿ ತುರಾಯಿಯನ್ನು ಹಾಕಲಿಕ್ಕೆ ಹೊರಟುಬಿಟ್ಟು......

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ತುರಾಯಿ ತಲೆಕೆಳಗು ಆಯಿತು.

ಶ್ರೀ ಎಂ. ವೀರಪ್ಪಮೊಯಿಲಿ.—ಅದು ಸ್ಪಷ್ಟವಾಗಿ ಇದೆಯೆಂದು ಹೇಳಲಿಲ್ಲ. ಅದನ್ನು ರಾಮೋಜಿರಾವ್‌ರವರು ಬರೆದಿರಬಹುದು, ಇದನ್ನು ರಮಾನಾಥ ಗೋಯೆಂಕಾ ಅವರೇ ಬರೆದುಬಿಟ್ಟಿದ್ದಾರೆ, ಎಲ್ಲಾ ಜವಾಬ್ದಾರಿಯುತವಾಗಿ ಬರೆದಿದ್ದಾರೆ.

ಶ್ರೀ ಆರ್. ಧರ್ಮಸಿಂಗ್.—ಒಮ್ಮೆ ರಾಮಕೃಷ್ಣ ಹೆಗಡೆಯವರು ಲೀಡರ್ ಆಫ್ ದಿ ಅಪೋಜಿಷನ್ ಇದ್ದಾಗ ಕೂಡಾ ಆಂಧ್ರಪ್ರದೇಶದ ಎನ್.ಟಿ.ಆರ್. ರವರ ಜೊತೆಯಲ್ಲಿ ಮಾತನಾಡಿದ್ದು ಪತ್ರಿಕೆಯಲ್ಲಿ ಬಂದಿತ್ತು. ಅದನ್ನು ನೀವು ಕೂಡ ಎತ್ತಿದ್ದಿರಿ. ಇದೊಂದೇ ಸಲ ಅಲ್ಲ. ಮಾಜಿ ಮುಖ್ಯಮಂತ್ರಿಗಳು ಪ್ರಸ್ತುತ ಮುಖ್ಯಮಂತ್ರಿಗಳು ಕೂಡಾ ಈ ರೀತಿಯಾದಂಥ ಮಾತುಕತೆಯನ್ನು ಆಡುತ್ತಿದ್ದಾರೆ. ಅದರ ಬಗ್ಗೆ ಸ್ಪಷ್ಟವಾಗಿ ಬಂದಿದೆ. ಇದು ಆದಮೇಲೆ ಕ್ಲಾರಿಫಿಕೇಷನ್ ಹೋಗಿದೆ. ಇದನ್ನು ತಾವು ಅರಿತುಕೊಳ್ಳಬೇಕು.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ಈಗ...

SRI M. VEERAPPA MOILY.—I do not know whether you have read this or not. It has appeared in the Press. It reads thus ;

> "Even Bommai has gone to the extent of diluting the agreement. He said, agreement was sacred and could not be altered under any circumstances. I do not feel like that. Even that agreement can be changed by mutual discussion."

This is the kind of a statement he has given. That means he is flexible. There is no difference between the Statement of the ex-Chief Minister and the present Chief Minister. That means this is the consistent stand of the State Government to surrender the interest of the State in so far as Krishna water is concerned. I know Mr. Devegowda your stand is clear. However, your stand is not supported or subscribed by your own present Chief Minister or the earlier one. You have no support of your own Government. You must be putting valiant fight against the Ex-Chief Minister or the present Chief Minister but without any success so far as the Krishna water is concerned. So far as Krishna water is concerned, you are fighting a lone battle. That is how we have to pity you.

ಶ್ರೀ ಎಚ್. ಡಿ. ದೇವೇಗೌಡ.—ಈಗ ತಾವು ಏನು ಪತ್ರಿಕಾ ವರದಿ ಬಗ್ಗೆ ತಾವು ಮಾತನಾಡುತ್ತಿದ್ದೀರಿ, ಅದಕ್ಕೆ ಅವರು ಕ್ಲಾರಿಫಿಕೇಷನ್ ಕೊಟ್ಟಿದ್ದಾರೆ. ಅವರು ಆ ವರದಿಯನ್ನು ಡಿನೈ ಮಾಡಿದ್ದಾರೆ. ಇದರ ಜೊತೆಗೆ ಇದರ ಬಗ್ಗೆ ನನ್ನ ಸ್ಟ್ಯಾಂಡ್ ಅನ್ನು ಅವರು ಸಮರ್ಥನೆ ಮಾಡಿದ್ದಾರೆ. ಇನು ಪ್ರಧಾನ ಮಂತ್ರಿಗಳಿಗೆ ಕಳುಹಿಸಿರತಕ್ಕ ಪತ್ರದಿಂದಲೇ ತಿಳಿಯುತ್ತದೆ. ಈ ಒಂದು ಹೇಳಿಕೆಗೆ ಮೊದಲೇ ನೀವೂ ಸಹ ಇದನ್ನು ಪ್ರೊಟೆಸ್ಟ್ ಮಾಡಿದ್ದೀರಿ. ಇದರಲ್ಲಿ ಪಕ್ಷರಾಜಕೀಯವನ್ನು ಮರೆತು ನೀವುಗಳೂ ಸಹ ಪ್ರೊಟೆಸ್ಟ್ ಮಾಡಿದ್ದೀರಿ. ಮೊನ್ನೆ ನೀವುಗಳು ದೆಹಲಿಗೆ ಹೋಗಿ ಪ್ರಧಾನಿಯವರನ್ನು ಭೇಟಿ ಮಾಡಿದ ಸಂದರ್ಭದಲ್ಲಿ ನೀವು ನಿಮ್ಮ ನಿಲುವನ್ನು ಅವರಿಗೆ ಹೇಳಿ ಬಂದಿದ್ದೀರಿ. ಅದಕ್ಕಾಗಿ ನಾನು ತಮಗೆ ಋಣಿಯಾಗಿದ್ದೇನೆ. ಈ ಬಗ್ಗೆ ಒಂದು ಅಂಶವನ್ನು ತಮ್ಮ ಗಮನಕ್ಕೆ ತರುತ್ತೇನೆ. ಏನೆಂದರೆ ಈ ವಿಚಾರದಲ್ಲಿ ದಿನಾಂಕ ೧೨-೪-೧೯೮೫ ರಂದೇ ಒಂದು ಪ್ರೊಟೆಸ್ಟ್ ಲೆಟರನ್ನು ಬರೆದಿದ್ದೇನೆ. ಆಂಧ್ರದವರು environmental clearance ಗೆ ಸಂಬಂಧಪಟ್ಟಂತೆ ಏನೇನು ಒಳ್ಳೆಯ ವಾತಾವರಣವನ್ನು ನಿರ್ಮಾಣ ಮಾಡಿಕೊಳ್ಳಬೇಕೋ ಅದನ್ನು ಮಾಡಿಕೊಂಡಿದ್ದಾರೆ, ಆದರೂ ಈ ಬಗ್ಗೆ ಒಪ್ಪಿಗೆ ಕೊಡುವುದು ಸರಿಯಲ್ಲವೆಂದು ನಾನು ಪತ್ರ ಬರೆದಿದ್ದೇನೆ. ನಾನು ಈಗ ಆ ಪತ್ರವನ್ನು ಪೂರ್ತಿ ಓದುವುದಿಲ್ಲ ಸ್ವಲ್ಪ ಭಾಗವನ್ನು ಮಾತ್ರ ಓದುತ್ತೇನೆ.

> "......The Central Water Commission mentions that the Minister for Water Resources is making efforts to resolve Inter-State differences and at the same time stated that the Telug-Ganga Project was technoeconomically viable and that

the Advisory Committee had this subject on its agenda for the meeting on 12-4-1988."

ಅಲ್ಲಿ ಈ ಒಂದು ಮೀಟಿಂಗ್ ಆಗುವುದಕ್ಕೆ ಮುಂಚಿಯೇ ನಾವು ಪತ್ರ ಬರೆದು ಪ್ರೊಟೆಸ್ಟ್ ಮಾಡಿದ್ದೇವೆ. ಈ ಒಂದು environmental clearance ಕೊಡಬಾರದೆಂದು ಹೇಳಿದ್ದೇವೆ. ಆದರೂ ರಾಜಕೀಯವಾಗಿ ಗದ್ದಲ ಮಾಡಿದರೆ, ಕೂಗಾಟ ಮಾಡಿದರೆ, ಪ್ರತಿಭಟನೆ ಮಾಡಿದರೆ ತಮ್ಮ ಕೆಲಸ ಆಗುತ್ತದೆಂದು ಅವರು ತಿಳಿದುಕೊಂಡಿದ್ದಾರೆ. ನಾವು ಕೇಂದ್ರದ ಕಾಂಗ್ರೆಸ್ ಸರ್ಕಾರಕ್ಕೆ ಸಹಕಾರ ನೀಡುತ್ತಿಲ್ಲವೆಂಬ ಅಂಶವನ್ನು ಮನವರಿಕೆ ಮಾಡಿಕೊಟ್ಟು ಅವರು ತಮ್ಮ ಕೆಲಸ ಮಾಡಿಕೊಳ್ಳಲು ಪ್ರಯತ್ನ ಮಾಡಿದರೆ, ಅದಕ್ಕೆ ತಾವು ಮಣಿಯಬಾರದು ಎಂದು ಕೇಂದ್ರಕ್ಕೆ ನಾವು ಈಗಾಗಲೇ ತಿಳಿಸಿದ್ದೇವೆ. ಒಟ್ಟಿನಲ್ಲಿ ಕೇಂದ್ರದವರು ಅವರಿಗೆ environmental clearance ಕೊಟ್ಟಿದ್ದು ಸರಿಯಿಲ್ಲ.

ಶ್ರೀ ಎಂ. ವೀರಪ್ಪಮೊಯ್ಲಿ.—ಕೇವಲ ಆಂಧ್ರಪ್ರದೇಶದ ಸರ್ಕಾರ ಮಾತ್ರವಲ್ಲ, ಈ ದೇಶದಲ್ಲಿ ರುವಂತಹ ಎಲ್ಲ ವಿರೋಧಪಕ್ಷಗಳವರೂ ಸಹ ಕೇಂದ್ರದ ಮೇಲೆ ಒತ್ತಡ ತಂದರೂ ಕೇಂದ್ರ ಸರ್ಕಾರದವರು ಇದಕ್ಕೆ ಮಣಿಯಬಾರದೆಂದು ತಾವು ಅವರಿಗೆ ಹೇಳಬೇಕು ? ಆಗ ನಾವು ಒಪ್ಪುತ್ತೇವೆ.

ಶ್ರೀ ಎಚ್. ಡಿ. ದೇವೇಗೌಡ.—ಅದಕ್ಕೆ ನಾನು ಹೇಳಿದೆ, I compliment you for the stand taken ಎಂದು ಇದರ ಬಗ್ಗೆ ಯಾವ ಒಂದು ಮುಂಜಾಗ್ರತೆ ಇಲ್ಲದೆ ಹೇಳಿದ್ದೇನೆ.

ಶ್ರೀ ಧರ್ಮಸಿಂಗ್.—ಇದರ ಬಗ್ಗೆ ನಮಗೆ ಪ್ರಧಾನಮಂತ್ರಿಗಳು ಸ್ಪಷ್ಟವಾಗಿ ಹೇಳಿದ್ದಾರೆ. ಆದರೆ ನೀವು ಯಾರಿಗೆ ಬೆಂಗಳೂರು ಅರಮನೆ ಮುಂದೆ ನಡೆದ ಸಮಾರಂಭದಲ್ಲಿ ಪೇಟ ತೊಡಿಸಿದಿರೋ, ಅವರೇ ತೆಲುಗುಗಂಗಾ ಯೋಜನೆಗೆ ಕ್ಲಿಯರೆನ್ಸ್ ಕೊಡಬೇಕೆಂದು ಕೇಂದ್ರದಲ್ಲಿ ಕೇಳಲು ಹೋಗಿದ್ದರು. ನಿಮ್ಮ ಪಕ್ಷದ ಕೆಲವು ಮುಖಂಡರೇ ಆಂಧ್ರದವರಿಗೆ ಶಾಮೀಲಾಗಿದ್ದಾರೆ, ಇದಕ್ಕೆ ತಾವು ಏನು ಹೇಳುತ್ತೀರಿ ?

ಶ್ರೀ ಎಚ್. ಡಿ. ದೇವೇಗೌಡ.—ನಾನು ಇದರ ಬಗ್ಗೆ ಇಷ್ಟೇ ಹೇಳಲು ಇಷ್ಟಪಡುತ್ತಿದ್ದೇನೆ. ಏನೆಂದರೆ, ಇದರೊಳಗೆ ನಾವು ಯಾರೂ ಶಾಮೀಲಾಗುವ ಪ್ರಶ್ನೆಯೇ ಇಲ್ಲ. ಯಾವುದೇ ರಾಜಕೀಯ ಪಕ್ಷಗಳು ಮತ್ತು ಅದರ ಮುಖಂಡರುಗಳು ನಮ್ಮ ರಾಜ್ಯದ ಹಿತವನ್ನು ಕಡೆಗಣಿಸಿ ಬೇರೆ ರಾಜ್ಯಕ್ಕೆ ಅನುಕೂಲವಾಗುವ ರಾಜಕೀಯದಲ್ಲಿ ಶಾಮೀಲಾಗುವ ಪ್ರಶ್ನೆಯೇ ಇಲ್ಲ. ಅಲ್ಲಿ ಯಾರೋ ಹೋಗಿದ್ದರು ಇಲ್ಲಿ ಯಾರೋ ಹೋಗಿದ್ದರು ಎಂದು ಇಲ್ಲಿ ಊಹಾಪೋಹದ ಮಾತುಗಳನ್ನು ಹೇಳುವುದಕ್ಕೆ ಬದಲಾಗಿ......

ಶ್ರೀ ಧರ್ಮಸಿಂಗ್.—ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಇದರಲ್ಲಿ ಊಹಾಪೋಹ ಏನಿದೆ ?

ಶ್ರೀ ಎಚ್. ಡಿ. ದೇವೇಗೌಡ.—ನಾನು ನಿಮಗೆ ಹೇಳುತ್ತೇನೆ. ದಯಮಾಡಿ ಇದರಲ್ಲಿ ನಾವು ಪಾಲಿಟಿಕ್ಸ್ ಮಾಡುವುದರಿಂದ ಪ್ರಯೋಜನವಾಗುವುದಿಲ್ಲ. ಸ್ವಲ್ಪ ಅಲ್ಲಲ್ಲಿ ರಾಜಕೀಯ ಮಿಕ್ಸ್ ಮಾಡಿ ಮಾತನಾಡಿದಾಗ ನಮ್ಮ ಭಾಷಣಕ್ಕೆ ಸ್ವಲ್ಪ ಮಜಾ ಬಂದಂತಾಗಿರುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಒಂದು ಕೆಲಸಮಾಡಿ. ಮಾನ್ಯ ಸದಸ್ಯರಾದ ಧರ್ಮಸಿಂಗ್‌ರವರು ಹೇಳಿದರು. ಇಂಥವರು ಇದ್ದರು ಪೇಟ ಕಟ್ಟಿಕೊಂಡು ಹೋಗಿದ್ದರು ಎಂದು ಹೇಳಿದರು. ಅದಕ್ಕೆ ನಾನು ಹೇಳುವುದಿಷ್ಟೆ ಅದಕ್ಕೆ ಉತ್ತರ ಕೊಡುವುದು ಕೆಲವುಸಾರಿ ತಮಗೆ ತೊಂದರೆ ಆಗಬಹುದು.

ಶ್ರೀ ಎಚ್. ಡಿ. ದೇವೇಗೌಡ.—ನನಗೆ ತೊಂದರೆ ಏನಿಲ್ಲ.

ಶ್ರೀ ಎಸ್. ಬಂಗಾರಪ್ಪ.—ತೊಂದರೆಯಾದರೆ ಉತ್ತರ ಕೊಡುವುದು ಏನೂ ಬೇಡ ನನಗೆ ಸ್ವಲ್ಪ ತೊಂದರೆಯಾಗುತ್ತದೆ, ಈಗ ಉತ್ತರ ಬೇಡ ಎಂದು ಹೇಳಿದರೆ ಸಾಕು,

ಶ್ರೀ ಹೆಚ್. ಡಿ. ದೇವೇಗೌಡ,—ಸ್ವಾಮಿ, ಪೇಟ ಹಾಕುವ ಅಭ್ಯಾಸ ಕಲಿಸಿದ್ದೇ ಅವರು ಸುಮ್ಮನೆ ಇದರ ಬಗ್ಗೆ ಹಳೆ ಕತೆಯೆಲ್ಲಾ ಹೇಳಿಕೊಂಡು ಕುಳಿತುಕೊಂಡರೆ ಹೇಗೆ. ಬಂದವರಿಗೆ ಪೇಟ ಹಾಕುವ ಅಭ್ಯಾಸ ಬಂದಿದ್ದೇ ನಿಮ್ಮಿಂದ ನಿಮ್ಮನ್ನು ಅನುಕರಿಣೆ ಮಾಡುವುದಕ್ಕೆ ಅವರು ಹೋಗಿದ್ದಾರೆ, ನಾನೇನು ಮಾಡಲಿ.

ಶ್ರೀ ಬಿ. ಲಕ್ಕಪ್ಪ.—ಅಭ್ಯಾಸ ಸರಿಹೋಗದೆ ಹಿಂದುಮುಂದು ಆಗಿದ್ದು ನಿಜ.

ಶ್ರೀ ಹೆಚ್. ಡಿ. ದೇವೇಗೌಡ.—ಅದಕ್ಕೆ ನಾನು ಹೇಳಿದೆ. ನಾನು ನೀವು ಒಂದು ಕಾಲದಲ್ಲಿ ಒಟ್ಟಿಗೆ ಇದ್ದವರು ನೋಡಿ ಅದಕ್ಕೆ ಹಾಗೆ ಆಯಿತು. ಒಂದೇ ಸಾರಿ ಅದನ್ನೆಲ್ಲಾ ಮರೆಯಲಿಕ್ಕೆ ಆಗುತ್ತದೆಯೇ. ಒಂದು ಕಾಲದಲ್ಲಿ ಒಟ್ಟಿಗೆ ಇದ್ದ ಜನ ನಾವು. ಈಗ ನಾವು ಪೇಟ ಹಾಕಲಿಕ್ಕೆ ಹೋಗಿದ್ದೇವೆ.

ಶ್ರೀ ಡಿ. ಎ. ಚಿನ್ನಪ್ಪ.—ಈಗ ನೀವು ಟೋಪಿ ಹಾಕಿಸಿಕೊಳ್ಳಲಿಕ್ಕೆ ಹೋಗಿದ್ದೀರಿ.

ಶ್ರೀ ಹೆಚ್. ಡಿ. ದೇವೇಗೌಡ.—ನಾನು ಟೋಪಿ ಎಂದೂ ಹಾಕಿಸಿಕೊಳ್ಳುವುದಿಲ್ಲ. ಏಕೆಂದರೆ ಟೋಪಿ ಹಾಕುವ ಪ್ರಶ್ನೆ ಇಲ್ಲ ಇದು ರಾಜ್ಯದ ಹಿತಾಸಕ್ತಿಯ ಪ್ರಶ್ನೆ. ಇವತ್ತು ನಾವು ಇರಬಹುದು, ನಾಳೆ ಅವರು ಬರಬಹುದು. ರಾಜ್ಯಕ್ಕೆ ಆಗತಕ್ಕಂಥ ಅನ್ಯಾಯ ಏನಿದೆ ಇದರ ಬಗ್ಗೆ ಯಾರೂ ಸಹಿಸಿಕೊಳ್ಳುವುದಕ್ಕೆ ತಯಾರಿಲ್ಲ ಎನ್ನುವುದು ನನ್ನ ಪ್ರಾಮಾಣಿಕ ನಂಬಿಕೆ. ಇದರಿಂದ ಈ ಮಾತನ್ನು ಹೇಳುತ್ತಾ ಇದ್ದೇನೆ. ಯಾವುದೇ ಕಾರಣದಿಂದ ಕೇಂದ್ರಸರ್ಕಾರ ಇವತ್ತು ಎನ್‌ವೈರನ್‌ಮೆಂಟಲ್ ಕ್ಲಿಯರೆನ್ಸ್ ಕೊಟ್ಟಿರತಕ್ಕಂಥಾದ್ದು ಒಂದು ತಪ್ಪು. ನನ್ನ ದೃಷ್ಟಿಯಲ್ಲಿ ಕೊಡಬಾರದಾಗಿತ್ತು ಕೊಟ್ಟಿದ್ದರಿಂದ ಹೇಳುತ್ತೇನೆ......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗ ೧೫ ಟಿಎಂಸಿಎಫ್‌ಟಿ ವಾಟರನ್ನು ಮದ್ರಾಸ್‌ಗೆ ಡ್ರಿಂಕಿಂಗ್ ಪರ್ಪಸ್‌ಗೆ ಕೊಡಬೇಕು ಎಂದು ಇದೆ. ಈ ೧೫ ಟಿಎಂಸಿಎಫ್‌ಟಿಗೆ ನಾವೆಲ್ಲರೂ ಒಪ್ಪಿದ್ದೇವೆ ಅಗ್ರಿಮೆಂಟ್ ಆಗಿದೆ, ಅವರು ಮೊದಲು ಆ ಪರ್ಪಸ್‌ಗೋಸ್ಕರ ಎನ್‌ವೈರ್ನಮೆಂಟಲ್ ಕ್ಲಿಯರೆನ್ಸ್ ಕೊಡಿ ಎಂದು ಹೇಳುತ್ತಾರೆ. ಬಟ್ ಅವರ್ ಪ್ರಾಜೆಕ್ಟ್ ೩೦೦ ಟಿಎಂಸಿಎಫ್‌ಟಿ ಇರಬಹುದು. ಅಗ್ರಿಮೆಂಟ್ ಪ್ರಕಾರ ೧೫ ಟಿಎಂಸಿಎಫ್‌ಟಿ ವಾಟರ್ ಏನಿದೆ ಅದನ್ನು ಡ್ರಿಂಕಿಂಗ್ ವಾಟರ್ ಪರ್ಪಸ್‌ಗೆ ಅಷ್ಟಕ್ಕೆ ಮಾತ್ರ ಎನ್‌ವೈರ್ನಮೆಂಟಲ್ ಕ್ಲಿಯರೆನ್ಸ್ ಕೊಡಿ ಎಂದು ಅವರು ಒತ್ತಾಯ ಮಾಡುತ್ತಾರೆ. ಆ ಒಂದು ಪರ್ಪಸ್‌ಗೆ ಮಾಡಿ ಡಿಸೀವ್ ಮಾಡತಕ್ಕಂಥಾದ್ದು ಆಗಬಾರದು. ಅದಕ್ಕೆ ಹೌ ಯು ಆರ್ ಗೋಯಿಂಗ್ ಟು ಪ್ರಿಕಾಷನ್ ?

ಶ್ರೀ ಹೆಚ್. ಡಿ. ದೇವೇಗೌಡ.—ಈಗ ೧೫ ಟಿಎಂಸಿಎಫ್‌ಟಿ ನೀರನ್ನು ಕೊಡತಕ್ಕಂಥಾದ್ದರ ಬಗ್ಗೆ ಒಪ್ಪಂದ ಏನಿತ್ತು ಆ ಒಪ್ಪಂದವನ್ನು ಎನ್‌ಫೋರ್ಸ್‌ಮಾಡಿ ಕೊಡಲಿ. ಅದಕ್ಕೆ ಕಂಡೀಷನ್ಸ್ ಇದೆ, ಸೆಂಟ್ರಲ್ ಗವರ್ನ್‌ಮೆಂಟ್ ಅಥಾರಿಟಿ ಮಾಡಬೇಕಾಗುತ್ತದೆ, ನಾವರಿಗೆ ಇನ್ಸ್‌ಪೆಕ್ಷನ್‌ಗೆ ಅವಕಾಶ ಇದ್ದೆ, ಓಪನ್ ಕೆನಾಲ್ ಮಾಡಬೇಕಾಗುತ್ತದೆ. ಆ ಕಂಡೀಷನ್ಸ್ ಎಲ್ಲಾ ಎನ್‌ಫೋರ್ಸ್ ಮಾಡಲಿ ಆಗ ತೆಲುಗು ಗಂಗಾ ಸೆಟ್ಲ್ ಆಗುತ್ತದೆ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಲ್ಲಿ ಗಿಡಗಳನ್ನೆಲ್ಲಾ ಕಡಿದ ಮೇಲೆ ಮತ್ತು ಲ್ಯಾಂಡ್ ಆಕ್ವಿಸಿಷನ್ ಆದಮೇಲೆ, under this garb they should not deceive us. ಇದೆಲ್ಲಾ ಮೊದಲು ಬರಬೇಕಲ್ಲ. ನಾನು ಏಕೆ ಹೇಳುತ್ತಿದ್ದೇನೆಂದರೆ.

Sri H. D. Deve Gowda.—It is a very relevant point. I compliment You. ನಿಮ್ಮ ಸ್ಟ್ಯಾಂಡ್‌ಗೂ ನಮ್ಮ ಸ್ಟ್ಯಾಂಡ್‌ಗೂ ವ್ಯತ್ಯಾಸ ಇದೆ. ಕೇಂದ್ರ ಸರ್ಕಾರಕ್ಕೆ ಯಾವುದೇ ಕಾರಣದಿಂದ ಅಂದರೆ ೧೫ ಟಿಎಂಸಿಎಫ್‌ಟಿ ನೀರನ್ನು ಕುಡಿಯುವುದಕ್ಕೆ ಕೊಡಬೇಕು ಎಂಬ ಉದ್ದೇಶದಿಂದ ತೆಲುಗುಗಂಗಾಕ್ಕೆ ಎನ್‌ವೈರ್ನಮೆಂಟಲ್ ಕ್ಲಿಯರೆನ್ಸ್ ಕೊಡಲಿಕ್ಕೆ ಕಾರಣ ಎನ್ನತಕ್ಕಂಥ ಅಭಿಪ್ರಾಯವೇನಾದರೂ ಇದ್ದರೆ ದಯಮಾಡಿ ಅದನ್ನು ತೆಗೆದುಹಾಕಬೇಕು. ಯಾವುದೇ ಕಾರಣದಿಂದ ನೀವು ಕ್ಲಿಯರೆನ್ಸ್ ಕೊಡಬಾರದು. ಈಗ ಅವರು ಯಾವ ಸ್ವರೂಪದಲ್ಲಿ ಈ ಪ್ರಾಜೆಕ್ಟ್‌ಗೆ ಸಬ್ಮಿಟ್ ಮಾಡಿದ್ದಾರೆ ಅದಕ್ಕೆ ಅವಕಾಶ ಕೊಡಕೂಡದು ಎನ್ನತಕ್ಕಂಥ ನಮ್ಮ ನಿಲುವು ಏನಿದೆ ಇವತ್ತು ಇಡೀ ಸದನದ ಈ ಅಭಿಪ್ರಾಯವನ್ನು ಕೇಂದ್ರ ಸರ್ಕಾರ ಗಮನಿಸುತ್ತದೆ ಎಂದು ನಾನು ಆಶಿಸುತ್ತೇನೆ. ಕೊನೆಯದಾಗಿ ಒಂದು ಮಾತನ್ನು ಹೇಳುತ್ತೇನೆ. ಸ್ವಾಮಿ, ಇದರ ಮೇಲೆ ಅವರು ಕಟ್ಟಿಕೊಂಡೇ ಹೋಗುತ್ತೇವೆ ಎಂದು ಹೇಳುತ್ತಾ ಇದ್ದಾರೆ, ಕಟ್ಟುತ್ತಾ ಇದ್ದಾರೆ. ಈಗ ನಮ್ಮಲ್ಲೂ ಮತ್ತು ನಿಮ್ಮಲ್ಲೂ ಎರಡೂ ಕಡೆ ಅದೇ ಅಭಿಪ್ರಾಯ ಇದೆ, ಹಣ ಕೂಡಿಸಿಕೊಳ್ಳಬೇಕು ಎಂದು ಬರೀ ಮಾತನಾಡಿದರೆ ಪ್ರಯೋಜನವಿಲ್ಲ. ಮಾನ್ಯ ಬಸವಲಿಂಗಪ್ಪನವರು, ಮಾನ್ಯ ಧರ್ಮಸಿಂಗ್‌ರವರು ಹೇಳಿದರು. ಇದಕ್ಕೆ ಹಣ ಕೂಡಿಸಿಕೊಳ್ಳಬೇಕು ಎಂಬ ಬರೀ ಮಾತಿನಿಂದ ಏನು ಪ್ರಯೋಜನವಾಗುತ್ತದೆ ಎಂದು ? ಇದು ನಮ್ಮ ಮೇಲಿರುವ ಜವಾಬ್ದಾರಿ. ಏಕೆಂದರೆ ಮುದ್ದು ಬಹಳ ಕಡೆ ಇದೆ. ಅದನ್ನು

ಹುಡುಕಬೇಕು. ಪ್ರಾಜೆಕ್ಟ್ ಕಟ್ಟುತ್ತಾ ಹೋದರೆ, ಮುಬಡ್ಡಿ ಸಿಗುತ್ತದೆ. ನಾನು ಈ ಮಾತನ್ನು ಹೇಳಿದರೆ ಸ್ವಲ್ಪ ಉದ್ಧಟತನದ ಮಾತಾಗಬಹುದು. ಹಿಂದೆ ಕೂಡ ಹೇಳಿದ್ದೇನೆ. ಈ ದಿಕ್ಕಿನಲ್ಲಿ ಯಾವುದೇ ಒಂದು ಸರ್ಕಾರ ಅಧಿಕಾರಕ್ಕೆ ಬರಲಿ, ಇನ್ನೂ ನಮಗೆ ಹತ್ತು ವರ್ಷಗಳ ಅವಧಿ ಇದೆ. ಈ ಸರ್ಕಾರದ ಆಯುಸ್ಸು ಇನ್ನೂ ಒಂದು ವರ್ಷ ಎರಡು ತಿಂಗಳು ಇದೆ. ನಾವೇನೂ ಶಾಶ್ವತವಾಗಿ ಇರುವುದಿಲ್ಲ. ರಾಜ್ಯದ ಜನತೆಗೆ ಈ ವೇದಿಕೆ ಮುಖೇನ ಕರೆಕೊಡುತ್ತೇನೆ, ಯಾವುದೇ ಸರ್ಕಾರ ಅಧಿಕಾರಕ್ಕೆ ಬರಲಿ, ಈ ಯೋಜನೆಗೆ ಮೊದಲು ಹಣ ತೆಗೆದಿಡಬೇಕು. ಇಲ್ಲದೇ ಇದ್ದರೆ ಆ ಪಕ್ಷವನ್ನು ಜನತೆ ತಿರಸ್ಕಾರ ಮಾಡಲಿ ಎಂದು ಹೇಳುತ್ತೇನೆ. ಇದು ನನ್ನ ವೈಯಕ್ತಿಕ ಪ್ರಶ್ನೆಯಲ್ಲ. ಮಾನ್ಯ ಕಡಪಟ್ಟಿಯವರು ಈಗ ಮಾತನಾಡಿದಂತೆ, ೬ ತಿಂಗಳ ಹಿಂದೆ ಮಾತನಾಡಿದ್ದರೆ, ಚನ್ನಾಗಿರುತ್ತಿತ್ತು. ನಾನು ಖುಷಿ ಪಡುತ್ತಿದ್ದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಜಲ ಮತ್ತು ನೆಲದ ಪ್ರಶ್ನೆ ಏನಾಯಿತು ಎನ್ನುವುದು ಗೊತ್ತಿದೆ,

ಶ್ರೀ ಹೆಚ್. ಡಿ. ದೇವೇಗೌಡ.—ಕಳೆದ ನನ್ನ ೨೨ ವರ್ಷಗಳ ಅನುಭವದಲ್ಲಿ ನೀರಾವರಿ ವಿಚಾರದಲ್ಲಿ ಇಷ್ಟೊಂದು ಮಹತ್ವ ಸಿಕ್ಕಿರುವುದು ಇತ್ತೀಚಿನ ದಿನಗಳಲ್ಲಿ. ತೆಲುಗು ಗಂಗಾ ಕಟ್ಟುವುದರಲ್ಲಿ ರಾಜಕೀಯವೂ ಇದೆ, ಎಕನಾಮಿಕ್ ಡೆವಲಪ್‌ಮೆಂಟೂ ಇದೆ. ನೀರಿನ ಬಗ್ಗೆ ಇಷ್ಟೊಂದು ಮಹತ್ವ ಬಂದಿರುವುದು ಇತ್ತೀಚಿನ ದಿನಗಳಲ್ಲಿ. ಇಡೀ ರಾಷ್ಟ್ರದಲ್ಲಿ ಕೃಷಿ ಉತ್ತಮವಾದಂಥ ವೃತ್ತಿಯಾಗ ಬೇಕಾದರೆ, ನೀರು ಬಹಳ ಮುಖ್ಯವಾದುದು ಎನ್ನುವುದು ಪ್ರತಿಯೊಬ್ಬರಿಗೂ ಗೊತ್ತಾಗಿದೆ. ಈ ವಿಚಾರದಲ್ಲಿ ಯಾವುದೇ ರಾಜಕೀಯ ಪಕ್ಷ ಉದಾಸೀನವಾಗಿ ನಡೆದುಕೊಳ್ಳುವುದಕ್ಕೆ ಆಗುವುದಿಲ್ಲ, ಅಂತ ಸನ್ನಿವೇಶ ಬಂದಿದೆ. ರಾಜಕೀಯವಾಗಿ ಮಾತನಾಡುವುದು ಬೇರೆ ವಿಚಾರ. ನೀರಾವರಿ ಯೋಜನೆಗಳಿಗೆ ಮುಂದಿನ ವರ್ಷಗಳಲ್ಲಿ ದುಡ್ಡು ಇಡದೇ ಹೋದರೆ ಕುತ್ತಿಗೆ ಪಟ್ಟಿ ಹಿಡಿದು ಕೇಳುತ್ತಾರೆ, ಜನಗಳು ಬುದ್ಧಿ ಕಲಿಸುತ್ತಾರೆ. ಮೊದಲು ನಿಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಈ ಯೋಜನೆಗಳಿಗೆ ಇಷ್ಟು ಹಣ ಇಡುತ್ತೇವೆಂದು ಹೇಳಿ ಎಂದು ನಿಮಗೂ ಹೇಳಬಹುದು. ನಮಗೂ ಹೇಳಬಹುದು. ಮತ್ತೊಂದು ಪಕ್ಷ ಚುನಾವಣೆಗೆ ಬಂದರೆ ಅದಕ್ಕೂ ಹೇಳಬಹುದು. ಇದು ನನ್ನ ಕಳಕಳಿ. ಇವತ್ತು ಅನೇಕ ಜನ ಮಾನ್ಯ ಸದಸ್ಯರುಗಳು ಬರಗಾಲದ ಬಗ್ಗೆ ಮಾತನಾಡಿದರು, ಅದಕ್ಕೆ ಮದ್ದೇನು. ಬರೀ ಭಾಷಣ ಮಾಡುವುದಲ್ಲ. ಇವತ್ತು ಈ ರಾಜ್ಯದ ಮತದಾರರು ರಾಜಕೀಯವಾಗಿ ಪ್ರೌಢಿಮೆ ಉಳ್ಳವರಾಗಿದ್ದಾರೆ. ಅವರಿಗೆ ಜಾಣ್ಮೆ ಇದೆ. ನಾವು ಒಂದು ವರ್ಷ ಸುಳ್ಳು ಹೇಳಿಕೊಂಡು ಹೋಗಬಹುದು. ಆದರೆ ಅದಕ್ಕೆ ಪ್ರಾಯಶ್ಚಿತ್ತ ಪಡಬೇಕಾಗುತ್ತದೆ ಇರತಕ್ಕ ಒಂದು ವರ್ಷದ ೨-೩ ತಿಂಗಳಲ್ಲಿ ಹಣ ಕೂಡಿಸುವುದಕ್ಕೆ ನಮ್ಮ ಬುದ್ಧಿಶಕ್ತಿಯನ್ನು ಹಾಗೂ ಕೌಶಲ್ಯವನ್ನು ಉಪಯೋಗಿಸುತ್ತೇವೆ, ನಿಮ್ಮಗಳ ಸಹಕಾರದಿಂದ ಹಣ ಸಂಗ್ರಹಣೆ ಮಾಡುತ್ತೇವೆ. ಆದರೆ, ಮುಂದಿನ ೯-೧೦ ವರ್ಷಗಳಲ್ಲಿ ಜವಾಬ್ದಾರಿ ಹೆಚ್ಚಾಗುತ್ತದೆ. ನಾನು ಇಲ್ಲಿ ಕೆಲವು ವಿಷಯಗಳನ್ನು ಹೇಳುವುದಕ್ಕೆ ಆಗುವುದಿಲ್ಲ. ಆಳವಾಗಿ ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಅವುಗಳನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಇವತ್ತು ಆನ್‌ಗೋಯಿಂಗ್ ಪ್ರಾಜೆಕ್ಟ್‌ಗಳನ್ನು ಮುಗಿಸಬೇಕಾದರೂ, ೭೩೪ ಟಿಎಂಸಿ ನೀರನ್ನು ಪೂರ್ತಿ ಬಳಸಿಕೊಳ್ಳಬೇಕಾದರೆ ನಮಗೆ ೫೦೦೦ ಕೋಟಿ ರೂಪಾಯಿಗಳ ಹಣ ಬೇಕಾಗುತ್ತದೆ. ಇವತ್ತು ನಮ್ಮ ಮುಖ್ಯಮಂತ್ರಿಗಳು ಬರೀ ಮಣ್ಣಿನ ಮಗ ಅಷ್ಟೇ ಅಲ್ಲ, ಅವರಿಗೆ ಜವಾಬ್ದಾರಿ ಕೂಡ ಹೆಚ್ಚಿದೆ. ಈಗ ೬೦ ಕಿಲೋ ಮೀಟರ್ ಪಕ್ಕದಲ್ಲಿಯೇ ಇದ್ದಾರೆ, ಅವರಿಗೆ ರಾಜ್ಯದ ಚುಕ್ಕಾಣಿಯನ್ನು ಕೊಟ್ಟಿದ್ದೇವೆ.

ಶ್ರೀ ಧರ್ಮಸಿಂಗ್.—ನಾನು ಮೊಟ್ಟಮೊದಲನೆಯದಾಗಿ ಕರ್ನಾಟಕದ ಮಣ್ಣಿನ ಮಗ ಮುಖ್ಯ ಮಂತ್ರಿಯಾಗಿದ್ದಾರೆಂದು ಹೇಳಿದೆ.

ಶ್ರೀ ಹೆಚ್. ಡಿ. ದೇವೇಗೌಡ.—ಬರೀ ಮಣ್ಣಿನ ಮಗ ಅಷ್ಟೇ ಅಲ್ಲ, ಈಗ ಅವರು ೬೦ ಕಿಲೋ ಮೀಟರ್ ಪಕ್ಕದಲ್ಲಿ ಇದ್ದಾರೆ. ಅವರಿಗೆ ಜವಾಬ್ದಾರಿ ಸ್ವಲ್ಪ ಹೆಚ್ಚು ಇದೆ. ಅದರಿಂದ ಈಗ ಅವರು ನುಣುಚಿಕೊಳ್ಳುವುದಕ್ಕೆ ಆಗುವುದಿಲ್ಲ, ನಾನಾಗಲಿ, ಅವರಾಗಲಿ, ಭಾಷಣ ಮಾಡಿ ತಪ್ಪಿಸಿಕೊಂಡು ಓಡಿ ಹೋಗುವ ಪ್ರಶ್ನೆ ಇಲ್ಲ. ಈಗ ಚುನಾವಣೆಗೆ ಹೋಗುವುದಕ್ಕೆ ಮುಂಚೆ ಕೆಲವೊಂದು ಅನುತ್ಪಾದಕ ವೆಚ್ಚವನ್ನು ಕಡಿಮೆ ಮಾಡಬೇಕಾದರೆ ಭಯ. ಅದನ್ನು ನಿಲ್ಲಿಸಿದರೆ ಏನೋ. ಇದನ್ನು ನಿಲ್ಲಿಸಿದರೆ ಏನೊ

ಎಂಬ ಭಯ ಬರುತ್ತದೆ. ಸ್ವಾಭಾವಿಕವಾಗಿ ಅಧಿಕಾರ ಹಿಡಿದುಕೊಳ್ಳಬೇಕೆನ್ನುವವರಿಗೆ ಭಯ ಬರುತ್ತದೆ. ನನಗೆ ಆ ಭಯ ಇಲ್ಲ. ಕೆಲವರು ಯಾರೋ ನನ್ನ ಸ್ನೇಹಿತರು ಚುನಾವಣೆಯಲ್ಲಿ ಇದನ್ನು ಹೇಳುತ್ತಾ ಹೋದರೆ ರಿಲೆವೆಂಟ್ ಆಗುವುದಿಲ್ಲ ಎಂದು ಹೇಳಿದರು. ಕೆಲವೊಂದು ಸಂದರ್ಭಗಳಲ್ಲಿ ಎಲ್ಲಾ ಇಶ್ಯೂಸ್ ಹೆಲ್ಪ್ ಮಾಡುವುದಿಲ್ಲ. ಚುನಾವಣೆಯಲ್ಲಿ ಒಂದೊಂದು ಸಾರಿ ಸೋಲು ಆಗುತ್ತದೆ. ಮ್ಯಾಡಮ್ ಗಾಂಧಿಯವರು ಈ ದೇಶಕ್ಕೆ ಕೆಲಸ ಮಾಡಲಿಲ್ಲ ಎಂದು ಹೇಳಲಿಕ್ಕೆ ಆಗುತ್ತದೆಯೇ. ೧೯೭೭ರಲ್ಲಿ ಸೋತರು. ಯಾವುದೋ ಒಂದು ತಪ್ಪು ಇರಬಹುದು. ಚುನಾವಣೆಯಲ್ಲಿ ಗೆಲ್ಲುವುದಕ್ಕೆ ಆ್ಯಂಟಿ ಪಾವರ್ಟಿ ಪ್ರೋಗ್ರಾಮ್ ಈ ಇಶ್ಯೂಗಳೆಲ್ಲಾ ಪ್ರಧಾನವಾಗುತ್ತದೆಂದು ನಾನು ತಲೆಗಚ್ಚಿಕೊಳ್ಳುವುದಕ್ಕೆ ಹೋಗುವುದಿಲ್ಲ. ಎಲ್ಲದಕ್ಕಿಂತಲೂ ಪ್ರಧಾನವಾದುದು ಈ ರಾಜ್ಯಕ್ಕೆ ಶಾಶ್ವತವಾದಂಥ ಇಲ್ಲವೇ ಅಪಾಯವಾಗತಕ್ಕದ್ದನ್ನು ತಡೆಗಟ್ಟತಕ್ಕ ಕೆಲಸ ಮೊದಲು ಆಗಬೇಕು. ಸೂಕ್ಷ್ಮವಾಗಿ ಇಷ್ಟು ಹೇಳಲಿಕ್ಕೆ ಇಷ್ಟಪಡುತ್ತೇನೆ. ಇವೊತ್ತು ಕೇಂದ್ರಸರ್ಕಾರ ಯಾವುದೇ ರಾಜಕೀಯ ಒತ್ತಡಕ್ಕೆ ಮಣಿಯದೆ ತಮ್ಮ ಕೆಲಸವನ್ನು ನಿರ್ವಹಿಸಬೇಕಾಗುತ್ತದೆ. ಟ್ರಿಬ್ಯೂನಲ್ ತೀರ್ಮಾನವನ್ನು ಮಾನ್ಯತೆ ಮಾಡದೇ ಇರತಕ್ಕಂಥ ಯಾವುದೇ ಸರ್ಕಾರಕ್ಕೆ ಅವರು ಹಗುರವಾಗಿ ನಡೆದುಕೊಳ್ಳಲಿಕ್ಕೆ ಅವಕಾಶ ಕೊಡಕೂಡದು. ಅವರು ಎಷ್ಟೇ ಎತ್ತರದ ವ್ಯಕ್ತಿಯಾಗಿರಲಿ, ಅವರು ಎಷ್ಟೇ ದರ್ಪದ ಮಾತುಗಳನ್ನು ಆಡಲಿ ಯಾವುದೇ ಕಾರಣದಿಂದ, ಕೇಂದ್ರಸರ್ಕಾರ ಇವೊತ್ತು ಎಷ್ಟು ದಿವಸ ಅಧಿಕಾರದಲ್ಲಿ ಇರುತ್ತದೆ ಎನ್ನುವುದಕ್ಕೆ ಬದಲಾಗಿ, ಅವರಿಗೆ ಇರತಕ್ಕ ಅಧಿಕಾರವನ್ನು ಚಲಾಯಿಸತಕ್ಕದ್ದು ಅವರ ಜವಾಬ್ದಾರಿ ಎಂದು ಹೇಳುತ್ತೇನೆ. ಮತ್ತೊಂದು ಕಡೆ ರಾಜ್ಯಸರ್ಕಾರ ಮತ್ತು ರಾಜ್ಯದ ಜನತೆ ಕೂಡ ನಮ್ಮ ಕರ್ತವ್ಯ ಏನು ಎಂದು ಯೋಚನೆ ಮಾಡಬೇಕಾಗುತ್ತದೆ. ರಾಜ್ಯ ಸರ್ಕಾರ ನಿರ್ಣಯವನ್ನು ತೆಗೆದುಕೊಳ್ಳುವಾಗ ಇರತಕ್ಕಂಥ ಒಂದು ವರ್ಷ ಎರಡು ತಿಂಗಳ ಕಾಲದಲ್ಲಿ ಇದಕ್ಕೆ ಹೆಚ್ಚಿನ ಹಣವನ್ನು ಒದಗಿಸತಕ್ಕಂಥದ್ದಕ್ಕೆ ನಾವು ಸರ್ವ ಪ್ರಯತ್ನವನ್ನೂ ಮಾಡುತ್ತೇವೆಂದು ಹೇಳಿ ಈ ಚರ್ಚೆಯನ್ನು ಇವೊತ್ತು ತೆಗೆದುಕೊಳ್ಳಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ಮತ್ತೊಮ್ಮೆ ವಂದಿಸುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ — ಈಗ ನಮಗೆ ಬಹಳ ವಿವರವಾಗಿ ಹೇಳಿದ್ದೀರಿ. ಆದರೆ ಒಂದು ವಿಚಾರವನ್ನು ನಮಗೆ ಇನ್ನೂ ಕೂಡ ಹೇಳದೆ ಬಹಳ ಗೌಪ್ಯವಾಗಿ ತಾವು ಉಳಿಸಿಕೊಂಡಿದ್ದೀರಿ. ಕೇಂದ್ರ ಸರ್ಕಾರದವರೂ ಸಹ ನಿಮ್ಮ ವಿನಂತಿಯ ಮೇಲೆ ಉಳಿಸಿಕೊಂಡಿದ್ದಾರೆ. ಆದರೆ ಅದನ್ನು ತಾವು ವಿರೋಧ ಪಕ್ಷದವರ ಜೊತೆಯಲ್ಲಿ ಹಂಚಿಕೊಂಡಿಲ್ಲ. ದಿನಾಂಕ ೧೩–೯–೧೯೮೮ರ ಹಿಂದೂ ಪತ್ರಿಕೆಯಲ್ಲಿ ಒಂದು ವರದಿ ಬಂದಿದೆ. ಏನೆಂದರೆ

> "The latest initiative by the Centre signifies an important development and indicates that a new formula has been found to resolve the dispute. The details of the formula are being kept as secret, but according to informed sources, the formula has been mooted by Sri Ramakrishna Hegde, former Chief Minister of Karnataka, when he met Sri Dinesh Singh, Union Minister of State for Water Resources" ಎಂದು

ನಾಳೆ ತಾವು ಡೆಲಿಗೇಷನ್ ಕೊಂಡೊಯ್ಯುತ್ತೇವೆಂದು ಹೇಳುತ್ತಿದ್ದೀರಿ. ಬಹಳ ಟಾಪ್ ಸೀಕ್ರೆಟ್ ಎಂದು ಒಂದು ಫಾರ್ಮುಲಾವನ್ನು ಮಾನ್ಯ ರಾಮಕೃಷ್ಣ ಹೆಗಡೆಯವರು ಯೂನಿಯನ್ ಇರಿಗೇಷನ್ ಮಿನಿಸ್ಟರ್ ದಿನೇಶ್ ಸಿಂಗ್ ಅವರಿಗೆ ಕೊಟ್ಟಿದ್ದಾರೆ ಎಂದು ಹೇಳಿ ಈ ವರ್ತಮಾನ ಪತ್ರಿಕೆಯಲ್ಲಿಯೇ ಅಲ್ಲ; ಬೇರೆ ಬೇರೆ ಅನೇಕ ಪತ್ರಿಕೆಗಳಲ್ಲಿ ಬಂದಿದೆ. ಹೆಗಡೆಯವರು ಕೆಲವು ಸಾರಿ ಡೆಲ್ಲಿಗೆ ಹೋಗಿ ಒಂದು ಕೆಲಸ ಮಾಡುತ್ತಾರೆ, ಹೈದರಾಬಾದ್‌ಗೆ ಹೋಗಿ ಮತ್ತೊಂದು ಕೆಲಸವನ್ನು ಮಾಡುತ್ತಾರೆ, ಬಾಂಬೆಗೆ ಹೋಗಿ ಒಂದು ಕೆಲಸ ಮಾಡುತ್ತಾರೆ. ಬೆಂಗಳೂರಿಗೆ ಬಂದು ಇನ್ನೊಂದು ಕೆಲಸ ಮಾಡುತ್ತಾರೆ. ಅವರು ಯಾವ ಯಾವ ಊರಿನಲ್ಲಿ ಏನೇನು ಕೆಲಸ ಮಾಡುತ್ತಾರೆ ಎಂದು ನಮಗೆ ಗೊತ್ತಾಗುವುದಿಲ್ಲ. ಈ ಬಗ್ಗೆ ನಮಗೆ ಬಹಳ ಅನುಮಾನ ಬರುತ್ತಿದೆ.

೫-೦೦ ಪಿ. ಎಂ.

ದಿನೇಶ್‌ಸಿಂಗರ ಹತ್ತಿರ ಇವರು ಕೊಟ್ಟಿರತಕ್ಕ ಸೂತ್ರ ಏನು ? ಅದರ ರಹಸ್ಯವಾದರೂ ಏನು ? ಆದರೆ ಇದರ ಫಾಲೋ ಔಟ್ ಏನಾಗಿದೆ ಎಂಬುದು ತಮಗೆ ಗೊತ್ತಿರಬಹುದು. ಇದರಲ್ಲಿ ನಮಗೆ ವರ್ತಮಾನ ಬಂದಿದ್ದು ಏನೆಂದರೆ, all your officials became panicky in March 1988 and you have become panicky and all of us have become panicky. At that time even of Member of the Water Commission has said'it will be technically feasible and we are going to clear it within a month. It was about to be done. After the secret formula was given by Sri Ramakrishna Hegde to Sri Dinesh Singh...

ಶ್ರೀ ಎಸ್. ಬಂಗಾರಪ್ಪ.—ದಿನೇಶಸಿಂಗ್‌ರ ಹತ್ತಿರ ಈ ಸೀಕ್ರೆಟ್ ವಿಚಾರವನ್ನು ಏತಕ್ಕೆ ಇವರು ಮಾತನಾಡುವುದಕ್ಕೆ ಹೋದರು ?

ಶ್ರೀ ಎಂ. ವೀರಪ್ಪಮೊಯ್ಲಿ.—ಆ ಗುಟ್ಟು ಏನು ? ಅದನ್ನು ತಾವು ಇಲ್ಲಿ ಹೇಳುವುದಕ್ಕೆ ಆಗದಿದ್ದರೂ we want that formula in writing. Your correspondence we must see. At least the Leader of the Opposition and the Leaders of other Opposition Parties must see it. ನಾವು ಯಾವ ಧೈರ್ಯದಿಂದ ನಿಮ್ಮ ಜೊತೆ ಬರುವುದಕ್ಕಾಗುತ್ತದೆ ? ಏಕೆಂದರೆ ಸೆಂಟ್ರಲ್ ಗೌರ್ನಮೆಂಟ್ ಅಥವಾ ಆ ಮಂತ್ರಿಗಳು if they confront with that formula given by Sri Hegde, we will be totally unnerved. I don't think our Leader will agree with that unless you make known that secret formula. ಮತ್ತು ಇದರ ಪರಿಣಾಮವಾಗಿ ತೆಲುಗು-ಗಂಗಾ was about to be cleared. ತಾವು ಇದರ ಬಗ್ಗೆ ಸ್ಪಷ್ಟೀಕರಣವನ್ನು ಕೊಡಬೇಕು. ಈ ಒಂದು ವಾತಾವರಣಕ್ಕೆ ತಾವು ಇದನ್ನು ತಂದಿಟ್ಟಿದ್ದೀರಿ. ತಾವು ಈ ಕರ್ನಾಟಕ ರಾಜ್ಯದ ಜನರ ಕೈಕಟ್ಟಿ ಕೇಂದ್ರ ಮತ್ತು ಆಂಧ್ರ ಪ್ರದೇಶಕ್ಕೆ ಕೊಡತಕ್ಕ ಕೆಲಸವನ್ನು ದಯವಿಟ್ಟು ಮಾಡಬಾರದೆಂದು ನಾನು ತಮ್ಮಲ್ಲಿ ಈ ಸ್ಪಷ್ಟೀಕರಣವನ್ನು ಕೇಳುತ್ತಿದ್ದೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಸಭಾಧ್ಯಕ್ಷರೆ, ಮತ್ತೊಮ್ಮೆ ನಾನು ಸ್ಪಷ್ಟೀಕರಣವನ್ನು ಕೊಡುತ್ತೇನೆ, ಇದರಲ್ಲಿ ಯಾವುದೇ ಸೀಕ್ರೆಟ್ ಫಾರ್ಮುಲ ಇಲ್ಲ. ವಿರೋಧಪಕ್ಷದ ಅಥವಾ ಈ ಸದನದ ಯಾವುದೇ ಮಾನ್ಯ ಸದಸ್ಯರಿಗೆ ಇದನ್ನು ತಿಳಿಸದೆ, ಸರ್ಕಾರದ ನಿಲುವನ್ನು ಬದಲಾಯಿಸುವುದಕ್ಕೆ ಕೇವಲ ನನಗೆ ಮಾತ್ರವಲ್ಲ ಬೇರೆ ಯಾರಿಗೂ ಕೂಡ ಅಧಿಕಾರವಿಲ್ಲ. ನಾವು ನಮ್ಮ ಸರ್ಕಾರದ ನಿಲುವನ್ನು ಏನು ಮೊದಲಿನಿಂದಲೂ ಪ್ರತಿಪಾದನೆಯನ್ನು ಮಾಡಿಕೊಂಡು ಬಂದಿದ್ದೇವೆ, ಅದರಲ್ಲಿ ಕಿಂಚಿತ್ತೂ ಕೂಡ ಅದಲುಬದಲು ಮಾಡುವುದಾಗಲಿ, ಅಥವಾ ಮಾತುಕತೆಯನ್ನು ನಡೆಸುವುದಾಗಲಿ ಉದ್ಭವವಾಗುವುದಿಲ್ಲ ಎಂದು ಇಷ್ಟು ಮಾತ್ರ ಹೇಳಲಿಕ್ಕೆ ಬಯಸುತ್ತೇನೆ.

SRI M. VEERAPPA MOILY.–What is the report ?

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಸಭಾಧ್ಯಕ್ಷರೆ, ನಾನು ಸ್ಪಷ್ಟೀಕರಣ ಮಾಡುತ್ತೇನೆ, ಟೈಂಸ್ ಪತ್ರಿಕೆ ಅಥವಾ ಬೇರೆ ಯಾವುದೋ ಪತ್ರಿಕೆ ಅಂತ ಅಲ್ಲ. ಅದಕ್ಕೆ ಬದಲಾಗಿ ನಾನೇ ಅಧಿಕೃತವಾಗಿ ತಮ್ಮ ಕಣ್ಣು ಮುಂದೆ ನಿಂತಿದ್ದೇನೆ. ಇದರಲ್ಲಿ ಯಾವುದೇ ರೀತಿಯ ಸೀಕ್ರೆಟ್ ಫಾರ್ಮುಲಾ ಇಲ್ಲ ಇದರ ಜೊತೆಗೆ ಅವರನ್ನು ಬಿಟ್ಟು ನಾವು ಯಾವುದೇ ರೀತಿಯಿಂದಲೂ ನಮ್ಮ ನಿಲುವಿನಲ್ಲಿ ಒಂದೇ ಒಂದು ಕಾಮ, ಫುಲ್‌ಸ್ಟಾಪ್‌ನ್ನೂ ಬದಲಾವಣೆ ಮಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ನಾನು ಇಷ್ಟು ಮಾತ್ರ ಹೇಳಲಿಕ್ಕೆ ಇಚ್ಛೆಪಡುತ್ತೇನೆ, ಈ ರಾಜ್ಯದ ನೀರಿನ ಹಿತವನ್ನು ಕಾಪಾಡುವಾಗ ಮಾನ್ಯ ವಿರೋಧಪಕ್ಷದವರಿಗೆ ಎಷ್ಟು ಕಾಳಜಿ, ಕಳಕಳಿ ಇದೆಯೋ ಅದಕ್ಕಿಂತ ನನಗೆ ಕಡಿಮೆ ಏನೂ ಇಲ್ಲ ಎನ್ನತಕ್ಕ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರಲ್ಲಿ ಯಾವುದೇ ರೀತಿಯ ಸೀಕ್ರೆಟ್ ಫಾರ್ಮುಲಾ ಇಲ್ಲ. ಅದು ಇದೆಯೆಂದು ಅವರಿಗೆ ವರ್ತಮಾನ ಏನಾದರೂ ಬಂದಿದ್ದರೆ ಅದು ಸರಿಯಲ್ಲವೆಂದು ಮಾತ್ರ ಹೇಳಬಯಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೆ, ಇದು ಬಹಳ ಪ್ರಮುಖವಾದುದು. This is the core of the discussion. ಮೊನ್ನೆ ೧೬ನೇ ತಾರೀಖು ಆಂಧ್ರ, ಕರ್ನಾಟಕ, ಮಹಾರಾಷ್ಟ್ರದ ಮುಖ್ಯ ಮಂತ್ರಿಗಳ ಸಭೆಯನ್ನು ಕೇಂದ್ರದವರು ಕರೆದಿದ್ದರು. ಅವರು ಕರೆದಿದ್ದುದೂ ಕೂಡ ಆ ಒಂದು ಫಾರ್ಮುಲಾ ಬೇಸಿಸ್ ಮೇಲೆಯೇ. Because it is the report, because the Centre had consultations with both the Andhra Pradesh and Maharashtra Governments on this and based on these it had convened the Chief Ministers Conference. ಆ ಫಾರ್ಮುಲ ಬೇಸಿಸ್ ಮೇಲೆ ಮೂರು ಜನ ಮುಖ್ಯ ಮಂತ್ರಿಗಳ ಮೀಟಿಂಗನ್ನು ಕರೆದಿದ್ದರು. ಇದು ತಮಗೆ ಬಹುಶಃ ಗೊತ್ತಿರಲಿಕ್ಕಿಲ್ಲ. ಏಕೆಂದರೆ ತಾವು ಆಗ ಇದಕ್ಕೆ ಸಂಬಂಧಪಟ್ಟ ಮಂತ್ರಿಗಳಾಗಿರಲಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಅದಕ್ಕೆ ಸಂಬಂಧಪಟ್ಟ ಫೈಲು ನನ್ನ ಕಸ್ಟಡಿಯಲ್ಲೇ ಇದೆಯಲ್ಲಾ

ಸ್ವಾಮಿ. ಆಂಧ್ರಪ್ರದೇಶದ ಮುಖ್ಯಮಂತ್ರಿಗಳು, ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಮತ್ತು ಕರ್ನಾಟಕ ಮುಖ್ಯಮಂತ್ರಿಗಳನ್ನು ೧೬ನೇ ತಾರೀಖು ಇನ್‌ವೈಟ್ ಮಾಡಿದ್ದರು. ಆವತ್ತು ಕೇಂದ್ರ ಸರ್ಕಾರ ಈ ವಿಷಯದ ಬಗ್ಗೆ ಮೂರು ರಾಜ್ಯಗಳ ಮುಖ್ಯಮಂತ್ರಿಗಳನ್ನು ಸೇರಿಸಿ ಅಂತಿಮ ನಿರ್ಣಯವನ್ನು ತೆಗೆದುಕೊಳ್ಳುವುದರ ಬಗ್ಗೆ ಚರ್ಚೆ ಮುಂದುವರಿಸಬೇಕು ಎನ್ನುವ ಹಿನ್ನೆಲೆಯಲ್ಲಿ ಚರ್ಚೆಗೆ ಕರೆದಿದ್ದರು. ಆದರೆ ಅದು ನೆನೆಗುದಿಗೆ ಬಿದ್ದಿತು. ೧೬ನೇ ತಾರೀಖು ಸಭೆಯನ್ನು ಕರೆದಾಗ ಆಂಧ್ರದ ಮಾನ್ಯ ಮುಖ್ಯಮಂತ್ರಿಗಳಾದ ಎನ್ ಟಿ.ಆರ್.ರವರು ಬರುವುದಕ್ಕಾಗುವುದಿಲ್ಲವೆಂದು ತಮ್ಮ ನಿಲುವನ್ನು ಹೇಳಿಕೊಂಡರು. ಈ ವಿಷಯದ ಬಗ್ಗೆ ಚರ್ಚೆ ಮಾಡಲು ನಾವು ಹೋಗುತ್ತೇವೆ, ಹೋಗಬಾರದೆಂದು ಹೇಳಲಿಲ್ಲ ಅದು ಏನೇ ಇರಲಿ ಮಾನ್ಯ ಮುಖ್ಯಮಂತ್ರಿಗಳು ೧೬ನೇ ತಾರೀಖು ಬರುವುದಕ್ಕಾಗುವುದಿಲ್ಲ, ಬೇರೆ ದಿವಸ ಗೊತ್ತು ಮಾಡಿ ಎಂದು ಹೇಳಿದರೆ ಹೊರತು ನಾವು ಬರುವುದಿಲ್ಲವೆಂದು ಹೇಳುವ ಪ್ರಶ್ನೆ ಇಲ್ಲವೇ ಇಲ್ಲ. ಅವರು ಹೇಳಿದಮೇಲೆ ಈ ಮಾತನ್ನು ಹೇಳಿದ್ದಾರೆ. ನನ್ನ ಹತ್ತಿರ ರಿಪೋರ್ಟ್ ಇದೆ. ಆದರೆ ಇಷ್ಟು ಹೇಳುತ್ತೇನೆ ನಿಮಗೆ ಗೊತ್ತಿಲ್ಲದೆ ಯಾವುದೇ ತೀರ್ಮಾನಗಳನ್ನು ತೆಗೆದುಕೊಳ್ಳುವುದಿಲ್ಲ. ಈ ಸದನಕ್ಕೆ ಮರೆಮಾಚಿ ಯಾವ ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಯಾವುದೇ ರೀತಿಯ ಸೀಕ್ರೆಟ್ ಇಟ್ಟಿಲ್ಲ. ರಾಜ್ಯದ ಹಿತಕ್ಕಾಗಿ, ನಾಡಿಗೆ ಚ್ಯುತಿ ಬರುವುದಾದರೆ ಅದನ್ನು ಯಾರೂ ಸಹಿಸುವುದಿಲ್ಲ,

SRI M. VEERAPPA MOILY.—I don't think he will share all the secrets with you,

ಶ್ರೀ ಎಚ್. ಡಿ. ದೇವೇಗೌಡ.—ಅಧಿಕೃತವಾಗಿ ಭರವಸೆಯನ್ನು ಕೊಡುತ್ತೇನೆ, ಅಧಿಕೃತವಾಗಿ ಹೇಳುತ್ತಿದ್ದೇನೆ, ಇದರಲ್ಲಿ ಯಾವ ಮುಚ್ಚುಮರೆ ಇಲ್ಲವೆಂದು ಸ್ಪಷ್ಟೀಕರಣ ಮಾಡಲಿಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಒಂದು ಕ್ಲ್ಯಾರಿಫಿಕೇಷನ್ ಏನೆಂದರೆ ಮಾನ್ಯ ದೇವೇಗೌಡರನ್ನು ಸ್ಪಷ್ಟವಾಗಿ ಕೇಳುತ್ತೇನೆ, ಈ ಒಂದು ಕೃಷ್ಣಾ ಬೇಸಿನ್ ಪ್ರಾಜೆಕ್ಟ್‌ಗೆ ಹೋದ ಸಲ ಸುಮಾರು ೨೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಕಾವೇರಿ ಬೇಸಿನ್‌ಗೆ ೧೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ನಿರ್ಣಯ ತೆಗೆದುಕೊಂಡಿರುತ್ತಾರೆ. ಅದರ ಪ್ರಕಾರ ಹೋದ ಸಲ ಖರ್ಚು ಮಾಡದೇ ಹೋದರೂ ಸಹಿತ ಈ ವರ್ಷವಾದರೂ ೨೦೦ ಕೋಟಿಗೆ ಬದಲು ೧೦೦ ಕೋಟಿ ರೂಪಾಯಿಗಳನ್ನಾದರೂ ಖರ್ಚುಮಾಡುತ್ತಾರೆಯೋ ಹೇಗೆ ? ಮಾನ್ಯ ದೇವೇಗೌಡರಿಗೆ ಹೇಳುತ್ತೇನೆ, ಆಂಧ್ರ ಪ್ರದೇಶದ ಸರ್ಕಾರದವರು ಮುಗಿಸಬೇಕಾದ ಅನೇಕ ಪ್ರಾಜೆಕ್ಟ್‌ಗಳು ಇರುತ್ತವೆ. ಆದರೆ ಅವರು ಎಲ್ಲಾ ಪ್ರಾಜೆಕ್ಟ್‌ಗಳನ್ನು ಬದಿಗೊತ್ತಿ ತೆಲುಗುಗಂಗಾ ಪ್ರಾಜೆಕ್ಟನ್ನು ತೆಗೆದುಕೊಂಡು ಮುಗಿಸಲು ಆದ್ಯತೆಯನ್ನು ಕೊಡುತ್ತಿರುವುದಾಗಿ ಆಂಧ್ರದಿಂದ ಬಂದ ಸದಸ್ಯರು ಹೇಳಿದರು. ನಮ್ಮಲ್ಲೂ ಹಣದ ಕೊರತೆ ಇದೆ, ಆದರೂ ಎಲ್ಲವನ್ನೂ ಬದಿಗೊತ್ತಿ ಎನ್.ಟಿ.ಆರ್.ರವರು ತೆಲುಗುಗಂಗಾಕ್ಕೆ ಖರ್ಚು ಮಾಡುತ್ತಿದ್ದಾರೆ ಎನ್ನತಕ್ಕಂಥ ಮಾತನ್ನು ನಾವು ಡೆಲ್ಲಿಯಲ್ಲಿ ನಡೆದ ಕಾಂಗ್ರೆಸ್ ಪಕ್ಷದ ಕಾನ್‌ಫರೆನ್ಸ್‌ಗೆ ಹೋಗಿದ್ದ ಸಮಯದಲ್ಲಿ ಅಲ್ಲಿಯ ೩೦–೪೦ ಜನ ಸದಸ್ಯರನ್ನು ಭೇಟಿಯಾಗಿದ್ದ ಸಮಯದಲ್ಲಿ ಅವರು ಹೇಳಿದರು. ಹೀಗಿರುವಾಗ ತಾವು ಕನಿಷ್ಟ ಪಕ್ಷ

ಏನು ನಿಲುವನ್ನು ತೆಗೆದುಕೊಂಡಿದ್ದೀರಿ ಅದರ ಪ್ರಕಾರ ತಾವು ಈ ವರ್ಷ ಖರ್ಚು ಮಾಡುತ್ತೀರಾ ಹೇಗೆ ? ಇಲ್ಲವೆಂದರೆ ಕನಿಷ್ಟಪಕ್ಷ ಎಷ್ಟು ಖರ್ಚು ಮಾಡಲಿಕ್ಕೆ ಸಾಧ್ಯವಿದೆ, ಅದನ್ನಾದರೂ ಸ್ಪಷ್ಟ ಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ಹೇಳಿದ್ದೇನೆ. ಈ ಒಂದು ವರ್ಷ ಮೂರುನಾಲ್ಕು ತಿಂಗಳಿಗೆ ನಾವು ಏನು ಹಣವನ್ನು ತೊಡಗಿಸಬೇಕಾಗುತ್ತದೆ ಎನ್ನುವ ಬಗ್ಗೆ ನಮ್ಮ ಬುದ್ಧಿಯೊಳಗೆ ಏನೇನು ಕೌಶಲ್ಯತೆ ಇದೆ ಅದನ್ನೆಲ್ಲ ಪ್ರಯೋಗ ಮಾಡಿದ್ದೇವೆಂದು ಹೇಳಿದ್ದಾರೆ. ೧-೨ ತಿಂಗಳೊಳಗೆ ಅದರ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ೩೦೦ ಕೋಟಿಯ ಪ್ರಶ್ನೆಯಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ, ನಾನು ಅದನ್ನೇ ಹೇಳುತ್ತಿದ್ದೇನೆ ಮುಂದಿನ ದಿವಸಗಳಲ್ಲಿ ಎಷ್ಟು ಹಣವನ್ನು ಯಾವ ಯಾವ ಬಾಬಿನಿಂದ ಕೂಡಿಸಿಕೊಳ್ಳಬಹುದು ಎನ್ನುವ ಬಗ್ಗೆ ನಿರ್ಣಯ ತೆಗೆದುಕೊಂಡು ಜನತೆಯ ಮುಂದೆ ಇಡುತ್ತೇವೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಅಧ್ಯಕ್ಷರು.—ಈಗ ಮಾನ್ಯ ಸಚಿವರಿಂದ ಉತ್ತರ ಮುಗಿಯಿತು.

SRI M. MALLIKARJUNA KHARGE.—This is resource mobilisation for the next year. But what is the amount ? ಅದರ ಪ್ರಕಾರ ಎಷ್ಟು ಖರ್ಚು ಮಾಡುತ್ತೀರಿ. ಹೋದ ಸಲ ತಾವು ಹೇಳಿದಹಾಗೆ ೧೯೩ ಕೋಟಿ ಪ್ರಾವಿಷನ್ ಮಾಡಿದ್ದರೆ ನೀವು ೯೩ ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದೀರಿ. We should know definitely what is the amount you are going to spend

ಅಧ್ಯಕ್ಷರು.—ಮಾನ್ಯ ಖರ್ಗೆಯವರೇ, ಸಾಧ್ಯವಾದಷ್ಟು ಖರ್ಚು ಮಾಡುತ್ತೇವೆಂದು ಹೇಳಿದರಲ್ಲ

ಶ್ರೀ ಎಂ. ಮಲ್ಲಿಕಾರ್ಜುನಖರ್ಗೆ.—ಒಟ್ಟು ಬಡ್ಜೆಟ್‌ನಲ್ಲಿ ೧೦-೧೫ ಪರ್ಸೆಂಟ್ ಖರ್ಚುಮಾಡುತ್ತೇವೆಂದು ಹೇಳಿ ಬಜೆಟ್‌ನಲ್ಲಿ ೧೮೫ ಕೋಟಿ ಎಂದು ತೋರಿಸಿ ೯೫ ಕೋಟಿ ಮಾತ್ರ ಖರ್ಚುಮಾಡಿದರೆ ನಾವು ಏನೆಂದು ತಿಳಿದುಕೊಳ್ಳಬೇಕು. ಡೆಫನೇಟ್ ಆಗಿ ನಮಗೆ ಗೊತ್ತಾಗಬೇಕಲ್ಲ.

ಅಧ್ಯಕ್ಷರು,—ಹೆಚ್ಚು ಕಡಿಮೆ ಹೇಳಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅದಕ್ಕೆ ಒಂದು ಮಿತಿ ಇರಬೇಕು. ನಮಗೆಲ್ಲ ಕರೆದುಕೊಂಡು ಹೋಗಿ ಯುನಾನಿಮಸ್ ಡಿಶಿಷನ್ ಎಂದು ನಾಳೆ.........

ಶ್ರೀ ಧರ್ಮಸಿಂಗ್.—ಗಮನ ಸೆಳೆಯುವ ಸೂಚನೆ ಬಂದಾಗ ಸ್ಪಷ್ಟವಾಗಿ ಹೇಳಲಿ.

ಶ್ರೀ ಹೆಚ್. ಡಿ. ದೇವೇಗೌಡ.—ನಾನು ಆಗಲೇ ಹೇಳಿದ್ದೇನೆ. ಏನೆಂದರೆ, ಹೆಚ್ಚು ಹಣವನ್ನು ಈ ವರ್ಷ ಖರ್ಚು ಮಾಡಬೇಕೆಂಬುದರ ಬಗ್ಗೆ ಕೆಲವು ನಿರ್ಣಯಗಳನ್ನು ಕೆಲವೇ ದಿನಗಳಲ್ಲಿ ತೆಗೆದುಕೊಳ್ಳುತ್ತೇವೆಂದು ಹೇಳಿದೆ.

ಅಧ್ಯಕ್ಷರು.—ಇಲ್ಲಿಗೆ ಚರ್ಚೆ ಮುಕ್ತಾಯವಾಯಿತು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಇದು ವೇಗ್ ಆನ್ಸರ್. Is this a definite answer ?

MR SPEAKER.—I cannot compel the Government to answer in your favour,

SRI M. MALLIKARJUNA KHARGE.—We have got every right to get right and correct answer. I am very sorry for this.

MR SPEAKER.—You cannot direct like that.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅವರಿಗೆ ಡೈರೆಕ್ಟ್ ಮಾಡುವುದಕ್ಕೆ ನಿಮಗೆ ಆಗದೆ ಇದ್ದರೂ we have got every right to get a right answer. ನೋಡುತ್ತೇವೆ ಮಾಡುತ್ತೇವೆ ಅಂದರೆ ನಾವು ಏನು ನಿಲುವು ತೆಗೆದುಕೊಳ್ಳಬೇಕು ?

ಅಧ್ಯಕ್ಷರು.—ಆಯಿತು. ಈಗ ಅತಿವೃಷ್ಟಿ ಬಗ್ಗೆ ಚರ್ಚೆಯನ್ನು ಪ್ರಾರಂಭಿಸುವುದು.

SRI M. MALLIKARJUNA KHARGE.—I am sorry.

ಅಧ್ಯಕ್ಷರು.—ಆ ಚರ್ಚೆ ಈಗಾಗಲೇ ಮುಕ್ತಾಯವಾಗಿದೆ. ಅತಿವೃಷ್ಟಿ ಹಾನಿ ಏನಿದೆ ಅದರ ಬಗ್ಗೆ......

ಶ್ರೀ ಬಿ. ಎಸ್. ಎಡಿಯೂರಪ್ಪ.—ನನ್ನ ಗಮನ ಸೆಳೆಯುವ ಸೂಚನೆ......

ಅಧ್ಯಕ್ಷರು.—ಇದನ್ನು ಮುಗಿಸಿದ ಮೇಲೆ ನಿಮ್ಮ ಗಮನ ಸೆಳೆಯುವ ಸೂಚನೆ.

ಶ್ರೀ ಬಿ. ಲಕ್ಕಪ್ಪ.—ಈಗಾಗಲೇ ಐದೂ ಕಾಲು ಗಂಟೆಯಾಗಿದೆ. ನನ್ನ......

ಅಧ್ಯಕ್ಷರು.—ನಿಮ್ಮದನ್ನೂ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ಲಕ್ಕಪ್ಪ.—ಇದು ಮಹತ್ವದ ವಿಚಾರ ಇದೆ. ಇದನ್ನು ಸಹ ತೆಗೆದುಕೊಳ್ಳಬೇಕು.

ಅಧ್ಯಕ್ಷರು.—ಮೊಯಿಲಿಯವರೆ, ತಾವು ಸ್ವಲ್ಪ ಹೇಳಿ ಅವರಿಗೆ, ನೀವು ಕೂರಿ, ನಿಮ್ಮದೂ ತೆಗೆದುಕೊಳ್ಳುತ್ತೇನೆ. ಎಡಿಯೂರಪ್ಪನವರೆ, ನೀವು ಭಾಷಣಕಾರರಿದ್ದೀರಿ. ಅತಿವೃಷ್ಟಿ ಹಾನಿ ರಾಜ್ಯದ ಪೂರ್ತಿ ಆಗಿದೆ. ಆದರ ಮೇಲೆ ಮೊನ್ನೆ ಒಂದೂವರೆ ಗಂಟೆ ಚರ್ಚೆಯಾಗಿದೆ. ಮೊದಲು ಆ ಚರ್ಚೆ ಮುಂದುವರಿಯಲಿ. ಅದು ಮುಗಿದ ನಂತರ ಗಮನ ಸೆಳೆಯುವ ಸೂಚನೆ, ಆ ಮೇಲೆ ಮಸೂದೆ. ತದನಂತರ ಪಂಪಾಪತಿಯವರದ್ದು.

ಒಬ್ಬ ಮಾನ್ಯ ಸದಸ್ಯರು.—ರಾತ್ರಿಯಲ್ಲಾ ಕೂರುವುದಕ್ಕಾಗುತ್ತದೆಯೇ ?

ಅಧ್ಯಕ್ಷರು.—ನನ್ನ ಛೇಂಬರ್‌ನಲ್ಲಿ ನಾನು ವೀರಪ್ಪ ಮೊಯಿಲಿ ಅವರೊಡನೆ ಮಾತನಾಡಿದ್ದೇನೆ. ಮೊದಲು ಅತಿವೃಷ್ಟಿ ಹಾನಿ ಬಗ್ಗೆ ಚರ್ಚೆಯನ್ನು ಮುಗಿಸೋಣ, ನಂತರ ಗಮನ ಸೆಳೆಯುವ ಸೂಚನೆ, ತದನಂತರ ಪಂಪಾಪತಿಯವರದ್ದು ತೆಗೆದುಕೊಳ್ಳೋಣ. ದಯುವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು.—ಎಡಿಯೂರಪ್ಪನವರೇ ಕುಳಿತುಕೊಳ್ಳಿ. ಅತಿವೃಷ್ಟಿ ಬಗ್ಗೆ ಮಾತನಾಡುವಿರಂತೆ ಅವಕಾಶ ಕೊಡುತ್ತೇನೆ. ಗಮನ ಸೆಳೆಯುವ ಸೂಚನೆಯನ್ನು ಆ ಮೇಲೆ ತೆಗೆದುಕೊಳ್ಳೋಣವೆಂದು ನಾವು ತೀರ್ಮಾನ ಮಾಡಿದ್ದೇವೆ. ದೇಶಪಾಂಡೆಯವರು ರೆಡಿ ಇದ್ದಾರೆ. ಒಂದು ವೇಳೆ ಗಮನ ಸೆಳೆಯುವ ಸೂಚನೆಯನ್ನೇ ಹಾಕದಿದ್ದರೆ ಏನು ಮಾಡುತ್ತಿದ್ದೀರಿ ?

ಶ್ರೀ ಬಿ. ಲಕ್ಕಪ್ಪ.—ನಾನು ಬೆಳಿಗ್ಗೆ ೯ ಗಂಟೆಯಿಂದ ಅದಕ್ಕೋಸ್ಕರ ಕಾಯ್ದುಕೊಂಡು ಕುಳಿತಿದ್ದೇನೆ. ನಾನು ಹಾಗೇ ಎದ್ದು ಹೋಗುವುದಕ್ಕೆ ತಯಾರಿಲ್ಲ.

ಅಧ್ಯಕ್ಷರು.—ನಾನೇನು ಇಲ್ಲಿ ನನ್ನ ಸ್ವಂತ ಕೆಲಸ ಮಾಡುವುದಕ್ಕೆ ಹತ್ತಿಲ್ಲ. ನಿಮ್ಮದೇ ಕೆಲಸ ಮಾಡುತ್ತಿದ್ದೇನೆ. ಇವತ್ತು ರಾತ್ರಿ ೮-೯ ಗಂಟೆಯಾದರೂ ಅಡ್ಡಿಯಿಲ್ಲ. ನಿಮ್ಮದಷ್ಟನ್ನೂ ಮುಗಿಸೋಣ. ಅತಿವೃಷ್ಟಿಯ ಬಗ್ಗೆ ಜಾರ್ಜ್‌ರವರು ಮಾತನಾಡಿದ ಮೇಲೆ ಶ್ರೀಮಾನ್ ಎಡಿಯೂರಪ್ಪನವರು ಮಾತನಾಡಬೇಕು. ಇದರ ಬಗ್ಗೆ ವೆಂಕಟರಾಮಯ್ಯನವರ ಭಾಷಣ ಮುಗಿದಿದೆ. ತಾವು ಎಲ್ಲರೂ ದಯವಿಟ್ಟು ಕೂರಬೇಕು,

(ಗೊಂದಲ)

ನನ್ನ ಛೇಂಬರ್‌ಗೆ ಬಂದಾಗ ಒಪ್ಪಿಕೊಂಡಿದ್ದೀರಿ. ಯಾವ ಸಚಿವರು ಇರುತ್ತಾರೋ ಅವರದ್ದನ್ನು ಮೊದಲು ತೆಗೆದುಕೊಳ್ಳೋಣ ಅಂತ. ಈಗ ದೇಶಪಾಂಡೆಯವರು ರೆಡಿಯಾಗಿದ್ದಾರೆ. ಅತಿ ವೃಷ್ಟಿಯ ಬಗ್ಗೆ ಚರ್ಚೆಯನ್ನು ಪ್ರಾರಂಭ ಮಾಡೋಣ.

(ಗೊಂದಲ)